ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ರನ್ ಮೆಶಿನ್ ಖ್ಯಾತಿಯ ಭಾರತ ಕ್ರಿಕೆಟ್ ತಂಡದ ಆಟಗಾರ ವಿರಾಟ್ ಕೊಹ್ಲಿ ಏಕ ದಿನ ಅಂತರಾಷ್ಟ್ರೀಯ ಕ್ರಿಕೆಟ್‌ನಲ್ಲಿ 28 ಸಾವಿರ ರನ್‌ಗಳ ಮೈಲಿಗಲ್ಲು ತಲುಪಿದ್ದಾರೆ.

12 ಜನವರಿ 2026 ಸೋಮವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 300 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629


ಕಾರುಣ್ಯದ ಸನ್ಮಾರ್ತಿ ಶ್ರೀ ಗುರು ಬಾಲಗಂಗಾಧರನಾಥ ಮಹಾಗುರು » 2


ಗುಜರಾತ್‌ನ ಸೋಮನಾಥದಲ್ಲಿ ಶೌರ್ಯಯಾತ್ರೆ » 3


ಕೊಹ್ಲಿ ಬ್ಯಾಟಿಂಗ್: ಭಾರತಕ್ಕೆ 4 ವಿಕೆಟ್ ಜಯ » 4

# ನರೇಗಾ: ಎರಡು ದಿನಗಳ ವಿಶೇಷ ಅಧಿವೇಶನ

## ರಾಷ್ಟ್ರಪತಿ ಅನುಮತಿ ಪಡೆದು ಹೆಚ್.ಡಿ.ಕೆ. ಬರಲಿ | ಕೇಂದ್ರದ ವಿರುದ್ಧ ಕಾಂಗ್ರೆಸ್ ಸಮರ

• ಪ್ರಜೋದಯ ವರದಿ

**ಬೆಂಗಳೂರು:** ನರೇಗಾ ಯೋಜನೆ ಕಾಯ್ದೆ ಹಾಗು ಹೆಸರು ತಿದ್ದುಪಡಿ ವಿರುದ್ಧ ಕೇಂದ್ರ ಸರ್ಕಾರದ ವಿರುದ್ಧ ಮುಗಿಬಿದ್ದಿರುವ ಕಾಂಗ್ರೆಸ್ ರಾಜ್ಯದಲ್ಲಿ ವಿಶೇಷ ಅಧಿವೇಶನಕ್ಕೆ ನಿರ್ಧರಿಸಿದೆ.

ಕಾಯ್ದೆ ತಿದ್ದುಪಡಿಯಿಂದ ರಾಜ್ಯಗಳಿಗೆ ಅನ್ಯಾಯವಾಗಲಿದೆ ಎಂದು ಆರೋಪಿಸಿದ್ದ ಕಾಂಗ್ರೆಸ್ ಆ ಬಗ್ಗೆ ಚರ್ಚಿಸಲು ಬಹಿರಂಗ ವೇದಿಕೆಗೆ ಬರಲು ಜೆಡಿಎಸ್ ಹಾಗು ಬಿಜೆಪಿ ನಾಯಕರಿಗೆ ಸವಾಲು ಹಾಕಿದ್ದರು. ಕಾಂಗ್ರೆಸ್‌ನ ಆಹ್ವಾನವನ್ನು ಮೈತ್ರಿ ಪಕ್ಷದ ನಾಯಕರು ಜಂಟಿಯಾಗಿ ಒಪ್ಪಿದ ಬೆನ್ನಲ್ಲೇ ವಿಶೇಷ ಅಧಿವೇಶನಕ್ಕೆ ಸರ್ಕಾರ ಮುಂದಾಗಿದೆ. ಈ ಕುರಿತು ಚರ್ಚಿಸಲು ಜ. 13ಕ್ಕೆ ಪಕ್ಷದ ಮುಖಂಡರ ಸಭೆಗೆ ನಿರ್ಧರಿಸಲಾಗಿದೆ. ಜೊತೆಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಗುರಿಯಾಗಿಸಿ ಕಾಂಗ್ರೆಸ್ ನಾಯಕರು ತೀಕ್ಷ್ಣ ವಾಗ್ದಾಳಿ ಮುಂದುವರಿಸಿದ್ದಾರೆ.

ವಿಬಿ-ಜಿ ರಾಮ್-ಜಿ ಹಿಂಪಡೆದು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ ಪುನರ್ ಸ್ಥಾಪನೆಗೆ ಒತ್ತಾಯಿಸಿ ಎರಡು ದಿನಗಳ ವಿಶೇಷ ಅಧಿವೇಶನ ಕರೆದು, ನಿರ್ಣಯ ಅಂಗೀಕರಿಸಲಾಗುವುದೆಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಅವರು, ಹೊಸ ಕಾಯ್ದೆ ಸಂಪೂರ್ಣವಾಗಿ ರದ್ದುಗೊಳಿಸಿ ಹಿಂದಿನ ಕಾಯ್ದೆ ಮರು ಸ್ಥಾಪಿಸಬೇಕು. ಜನರ ಹಕ್ಕು ಪುನರ್ ಸ್ಥಾಪಿಸಬೇಕು. ಕಾಂಗ್ರೆಸ್ ವತಿಯಿಂದ ಗ್ರಾಮ ಮಟ್ಟದಿಂದ ಜಿಲ್ಲಾ ಮಟ್ಟದ ವರೆಗೆ ಮನರೇಗಾ ಬಚಾವೋ ಆಂದೋಲನ ಹಮ್ಮಿಕೊಳ್ಳಲಾಗುವುದೆಂದರು.

ಹೊಸ ಕಾಯ್ದೆ ಮೂಲಕ ಕೇಂದ್ರದ ಬಿಜೆಪಿಯು ಬಡ ಕೂಲಿ ಕಾರ್ಮಿಕರು, ಮಹಿಳೆಯರು, ಶೋಷಿತರಿಂದ ಉದ್ಯೋಗದ ಹಕ್ಕು ಕಸಿದುಕೊಂಡು ಅವರಿಗೆ ಸಂಚಕಾರ ತಂದಿದೆ. ಕಾಯ್ದೆಯಡಿ ಬಡವರಿಗೆ ವರ್ಷಕ್ಕೆ ನೂರು ದಿನಗಳ ಉದ್ಯೋಗ ಕೊಡಲಾಗುತ್ತಿತ್ತು. ಈಗ ಅದರಲ್ಲಿ ಬದಲಾವಣೆ ತರಲಾಗಿದೆ. ಗ್ರಾಮ ಪಂಚಾಯಿತಿಗಳ ಹಕ್ಕು ಮೊಟಕುಗೊಳಿಸಲಾಗಿದೆ. ಕೇಂದ್ರ ನೋಟಿಫಿಕೇಶನ್ ಮಾಡಿದ ಸ್ಥಳದಲ್ಲಿ ಕಾಮಗಾರಿ ಕೈಗೆತ್ತಿ



ಕೊಳ್ಳಬೇಕು. ಇದು ಗಾಂಧೀಜಿ ಅವರ ಗ್ರಾಮ ಸ್ವರಾಜ್ಯದ ಪರಿಕಲ್ಪನೆಗೆ ವಿರುದ್ಧವಾದ ನಡೆ ಎಂದು ಟೀಕಿಸಿದರು.

ಸೋನಿಯಾ ಗಾಂಧಿ ಹಾಗು ಮನಮೋಹನ್ ಸಿಂಗ್ ಅವರ ದೂರದೃಷ್ಟಿತ್ವದ ಪರಿಣಾಮ ದೇಶದಾದ್ಯಂತ ಉದ್ಯೋಗ ಖಾತ್ರಿ ಯೋಜನೆ ಜಾರಿಗೆ ತರಲಾಗಿತ್ತು. ಇದು ಸ್ಥಳೀಯವಾಗಿ ಸಂಪನ್ಮೂಲ ಸೃಷ್ಟಿಸಿ, ದುಡಿಯುವ ಕೈಗಳಿಗೆ ಉದ್ಯೋಗ ಕೊಡುತ್ತಿತ್ತು. ಕೋವಿಡ್ ಹಾಗು ಬರಗಾಲದ ಸಂದರ್ಭದಲ್ಲಿ ಖಾತ್ರಿ ಜನರಿಗೆ ನೆರವಾಗಿತ್ತು. ಹೀಗಿರುವಾಗ ಅದನ್ನು ಬದಲಿಸಿ

» ನಾಲ್ಕನೇ ಪುಟದಲ್ಲಿ

### ಆತ್ಮಸಾಕ್ಷಿ ಮೆಚ್ಚುವ ಕೆಲಸ ಮಾಡಿ: ಡಿ.ಕೆ.ಶಿ.

ಕಳೆದ ನಾಲ್ಕೈದು ದಿನಗಳಿಂದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವೆ ಮಾತಿನ ಕಾಳಗ ಜೋರಾಗಿದ್ದು, ಭಾನುವಾರ ಸಹ ಶಿವಕುಮಾರ್ ಕೇಂದ್ರ ಸಚಿವರ ವಿರುದ್ಧ ಹರಿಹಾಯ್ದಿದ್ದಾರೆ.

ನನ್ನ ಬಗ್ಗೆ ಬೇರೆಯವರಿಗಿಂತ ನಮ್ಮ ಸಮುದಾಯದ ಕೆಲವರು ಅಸೂಯೆಯಿಂದ ಟೀಕೆ ಮಾಡುತ್ತಿದ್ದಾರೆ. ಹಿಂದೆಯಿಂದ, ಮುಂದೆಯಿಂದ ಚಾಕು ಹಾಕುತ್ತಿದ್ದಾರೆ. ರಾಜಕೀಯದಲ್ಲಿ ಇವೆಲ್ಲವೂ ಸಹಜ. ಅದಕ್ಕೆ ತಲೆ ಕೆಡಿಸಿಕೊಳ್ಳಬಾರದು. ನಾವು ಪ್ರಾಮಾಣಿಕವಾಗಿ ಇರಬೇಕು. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ಎಷ್ಟು ಪ್ರಾಮಾಣಿಕವಾಗಿದ್ದೆ ಎಂಬುದು ನನ್ನ ಆತ್ಮಸಾಕ್ಷಿಗೆ ಗೊತ್ತು. ಆದರೆ, ಕುಮಾರಸ್ವಾಮಿ ನನ್ನ ವಿರುದ್ಧ ಬೆನ್ನಿಗೆ ಚೂರಿ ಹಾಕಿದ ಆರೋಪ ಮಾಡಿದರು. ನನಗೆ ಯಾರ ಪ್ರಮಾಣ ಪತ್ರವೂ ಬೇಡ. ನನ್ನ ಆತ್ಮಸಾಕ್ಷಿಯನ್ನು ನಾನು ಮೆಚ್ಚಿಸಿದರೆ ಸಾಕು. ನೀವು ನಿಮ್ಮ ಸ್ವಾಭಿಮಾನ, ಆತ್ಮಸಾಕ್ಷಿಗೆ ತಕ್ಕಂತೆ ಕೆಲಸ ಮಾಡಿ ಎಂದು ಸಲಹೆ ನೀಡಿದರು.

# ಮಳೆಯ ಸಿಂಚನ : ರೈತರಲ್ಲಿ ಹೆಚ್ಚಿದ ಆತಂಕ

• ಪ್ರಜೋದಯ ವರದಿ

**ಅರಕಲಗೂಡು** : ಪಟ್ಟಣ ಸೇರಿ ತಾಲ್ಲೂಕಿನಾದ್ಯಂತ ಭಾನುವಾರ ಮುಂಜಾನೆಯಿಂದಲೇ ಮೋಡ ಕವಿದ ವಾತಾವರಣವಿದ್ದು, ಒಂದೆರಡು ಬಾರಿ ತುಂತುರು ಹನಿ ಮಳೆ ಬಿದ್ದಿರುವುದು ರೈತರಲ್ಲಿ ಆತಂಕವನ್ನುಂಟು ಮಾಡಿದೆ.

ಶನಿವಾರ ರಾತ್ರಿ ಕೂಡ ಕೆಲವು ಕಡೆ ಒಂದೆರಡು ನಿಮಿಷ ತುಂತುರು ಮಳೆಯಾಗಿದೆ. ಭಾನುವಾರ ಬೆಳಿಗ್ಗೆ ಕೂಡ ತುಂತುರು ಮಳೆ ಬಿದ್ದ ಪರಿಣಾಮ ಕಟಾವಿಗೆ ಬಂದಿರುವ ಭತ್ತ, ರಾಗಿ, ಜೋಳವನ್ನು ರಕ್ಷಿಸಿಕೊಳ್ಳುವ ಬಗ್ಗೆ ಚಿಂತಿಗೇಡಾಗಿದ್ದಾರೆ. ಮಧ್ಯಾಹ್ನ ವೇಳೆಗೆ ಬಿಸಿಲು ಕಾಣಿಸಿಕೊಂಡ ಹಿನ್ನೆಲೆ ನಿಟ್ಟುಸಿರು ಬಿಟ್ಟಿದ್ದಾರೆ. ಹವಾಮಾನ ಇಲಾಖೆ ಮಾಹಿತಿಯಂತೆ ವಾರ ಕಾಲ ಮೋಡ ಕವಿದ ವಾತಾವರಣ, ಮಳೆಯ ಸಿಂಚನವಾದರೇ ರೈತರು ಮತ್ತೊಷ್ಟು ಸಮಸ್ಯೆಗೆ ಒಳಗಾಗಲಿದ್ದಾರೆ.

ಈ ಬಾರಿ ಉತ್ತಮ ಮುಂಗಾರು, ಹಿಂಗಾರು ಮಳೆ ಬಿದ್ದ ಪರಿಣಾಮ ಕೆರೆ



ಕಟ್ಟೆಗಳು, ನಾಲಾ ವ್ಯಾಪ್ತಿಯಲ್ಲಿ 10 ಸಾವಿರಕ್ಕೂ ಅಧಿಕ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಕೃಷಿ, ಮುಂಗಾರು-ಹಿಂಗಾರು ಹಂಗಾಮಿನಲ್ಲಿ 8 ಸಾವಿರ ಹೆಕ್ಟೇರ್‌ನಲ್ಲಿ ರಾಗಿ ಕೃಷಿಯನ್ನು ಕೈಗೊಳ್ಳಲಾಗಿತ್ತು. ಈಗಾಗಲೇ ಮುಂಗಾರು ಹಂಗಾಮಿನ ರಾಗಿ ಕಟಾವು ಪೂರ್ಣಗೊಂಡಿದೆ. ಹಿಂಗಾರು ಹಂಗಾಮಿನ ರಾಗಿ ಕಟಾವು ಕೂಡ ಶೇ.85ರಷ್ಟು ಪೂರ್ಣಗೊಂಡಿದ್ದು, ಕೂಲಿ ಕೆಲಸಗಾರರ ಸಮಸ್ಯೆಯಿಂದ ಶೇ.15ರಷ್ಟು ರಾಗಿ ಕಟಾವು ಆಗಿಲ್ಲ. ಅದೇ ರೀತಿ ಭತ್ತ ಕಟಾವು ಕೂಡ ಶೇ.90ರಷ್ಟು ಪೂರ್ಣಗೊಂಡಿದೆ. ಬಹುತೇಕರು ಭತ್ತ ಒಕ್ಕಣೆ ಕೂಡ ಮಾಡಿದ್ದಾರೆ. ಹಳ್ಳ ಗದ್ದೆ, ತೇವಾಂಶ ಇರುವ ಪ್ರದೇಶ ಮತ್ತು ರಾಜಮುಡಿ ಭತ್ತ ಕೃಷಿಯನ್ನು ಕೈಗೊಂಡಿರುವ ಪ್ರದೇಶದಲ್ಲಿ ಇನ್ನೂ ಕಟಾವು ಮಾಡಲು ಸಾಧ್ಯವಾಗಿಲ್ಲ.

ಕಳೆದ ಡಿಸೆಂಬರ್ ತಿಂಗಳಲ್ಲಿ ಅಕಾಲಿಕ ಮಳೆ ಬಿದ್ದಿದ್ದರೇ ಭತ್ತ ಮತ್ತು ರಾಗಿ ಕೃಷಿಗೆ ದೊಡ್ಡಹೊಡೆತ ಆಗುತ್ತಿತ್ತು. ಈಗ ಜನವರಿ ಎರಡನೇ ವಾರದಲ್ಲಿ ಮೋಡ ಕವಿದಾ ವಾತವರಣ ಹಾಗೂ ತುಂತುರು ಹನಿ ಮಳೆ ಆಗಿರುವುದು ಅಷ್ಟೇನು ಭತ್ತ, ರಾಗಿ ಕಟಾವಿಗೆ ತೊಂದರೆ ಕಂಡುಬಂದಿಲ್ಲ. ಇದೇ ವಾತವರಣ

» ನಾಲ್ಕನೇ ಪುಟದಲ್ಲಿ

# ತಾಕತ್ತಿದ್ದರೆ ಅರಸೀಕೆರೆಯಿಂದ ಸ್ಪರ್ಧೆ ಮಾಡಲಿ

## ಮಾಜಿ ಸಚಿವ ಹೆಚ್.ಡಿ.ರೇವಣ್ಣಗೆ ಕೆ.ಎಂ.ಶಿವಲಿಂಗೇಗೌಡ ಸವಾಲು

• ಪ್ರಜೋದಯ ವರದಿ

**ಅರಸೀಕೆರೆ:** ಮುಂದಿನ ವಿಧಾನಸಭೆ ಚುನಾವಣೆಗೆ ಅರಸೀಕೆರೆಯಿಂದ ಅವರು ಸ್ಪರ್ಧಿಸುತ್ತಾರೆಂಬ ಮಾತುಗಳು ಕೇಳಿ ಬರುತ್ತಿದ್ದು, ತಾಕತ್ತಿದ್ದರೆ ಸ್ಪರ್ಧಿಸಿಲಿ ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರಿಗೆ ಪರೋಕ್ಷವಾಗಿ ತಿರುಗೇಟು ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ದೀರ್ಘಾವಧಿ ಮುಖ್ಯಮಂತ್ರಿಯಾಗಿ ದಾಖಲೆ ಬರೆದ ಹಿನ್ನಲೆಯಲ್ಲಿ ನಗರದ ಬಸವೇಶ್ವರ ವೃತ್ತದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಜೆಡಿಎಸ್‌ನ ಯಾರ ಹೆಸರು ಪ್ರಸ್ತಾಪಿಸದೆ ವಾಗ್ದಾಳಿ ನಡೆಸಿದರು. ಅರಸೀಕೆರೆ ಕ್ಷೇತ್ರದ ಜನರಿಗೆ ಕುಡಿಯುವ ನೀರು ಕೊಡಲು ಸಾಧ್ಯವೇ ಇಲ್ಲ ಎಂದಿದ್ದವರು ಈಗ ವರಸೆ ಬದಲಿಸಿದ್ದಾರೆ. ಸತತ ನಾಲ್ಕು ಬಾರಿ ಶಾಸಕನನ್ನಾಗಿ ಆಯ್ಕೆ ಮಾಡಿದ ಮತದಾರರ ಋಣ ತೀರಿಸಲು ಶಕ್ತಿಮೀರಿ ಪ್ರಯತ್ನ ಮಾಡುತ್ತಿದ್ದೇನೆ. ಅಭಿವೃದ್ಧಿ ಸಹಿಸದ ಒಂದಷ್ಟು ಜನರು ಅವರನ್ನು ಇಲ್ಲಿಗೆ ಕರೆತರಲು ಹೊರಟಿದ್ದಾರೆ. ಇಂತಹ



ಬೆದರಿಕೆಗೆ ಹೆದರಿ ಓಡಿ ಹೋಗುವ ಜಾಯಮಾನ ನನ್ನದಲ್ಲ. ಅವರು ಅರಸೀಕೆರೆಗೆ ಬರುತ್ತಾರೆ, ನಾನು ಹೊಳೆನರಸೀಪುರಕ್ಕೆ ಹೋಗುತ್ತೇನೆಂದು ಹೇಳಲಾಗುತ್ತಿದೆ. ಕ್ಷೇತ್ರ ಬಿಟ್ಟು ಹೋಗಲು ತಲೆ ಕೆಟ್ಟಿಲ್ಲ ವೆಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಧರ್ಮಪತ್ನಿ ಮಾದರಿಯಲ್ಲಿ ನನ್ನ ಕುಟುಂಬ ಸದಸ್ಯರು ರಾಜಕಾರಣದಿಂದ ದೂರವಿದ್ದಾರೆ. ಅವರು ರಾಜಕಾರಣದಲ್ಲಿ ಹಸ್ತಕ್ಷೇಪ ಮಾಡುತ್ತಿಲ್ಲ. ಮಕ್ಕಳ ಸ್ಥಿತಿ ಏನಾಗಿದೆ ಎಂಬುದನ್ನು ಮರೆತು ಟೀಕೆ ಟಿಪ್ಪಣಿ ಮಾಡುತ್ತಿದ್ದಾರೆ. ತಾಕತ್ತಿದ್ದರೆ 2028ರ ಚುನಾವಣೆಯಲ್ಲಿ ಅರಸೀಕೆರೆ ಕ್ಷೇತ್ರದಿಂದ ಅಖಾಡಕ್ಕಿಳಿಯಲಿ. ನನ್ನ ಸಾಮರ್ಥ್ಯ ಏನೆಂದು ತೋರಿಸುತ್ತೇನೆಂದು ಪಂಥಾಹ್ವಾನ ನೀಡಿದರು.

**ದೇಶ ಕಂಡ ಪ್ರಬುದ್ಧ ರಾಜಕಾರಣಿ ಅರಸು**

ಮಾಜಿ ಮುಖ್ಯಮಂತ್ರಿ ಡಿ. ದೇವರಾಜು ಅರಸು ದೇಶಕಂಡ ಪ್ರಬುದ್ಧ ರಾಜಕಾರಣಿ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅದೇ ಮಾರ್ಗದಲ್ಲಿ ಸಾಗುತ್ತಿದ್ದಾರೆಂದು ಕೆ.ಎಂ.ಶಿವಲಿಂಗೇಗೌಡ ಅವರು ಹೇಳಿದರು.

ಬಡವರು, ಶೋಷಿತರು, ಶ್ರಮಿಕರ ಹಿತ ಮನಗಂಡು ಹಸಿದವರಿಗೆ ಅನ್ನ, ಸೂರು, ಶಿಕ್ಷಣ ಅರಿವು, ಆಶ್ರಯ

» ನಾಲ್ಕನೇ ಪುಟದಲ್ಲಿ

# ಕಾರ್ಯಕರ್ತರಿಗೆ ತೊಂದರೆ ನೀಡಿದರೆ ಸಹಿಸಲ್ಲ

## ಬೇಲೂರಿನ ಮಹತ್ವದ ಸಭೆಯಲ್ಲಿ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಗುಡುಗು

• ಪ್ರಜೋದಯ ವರದಿ

**ಬೇಲೂರು:** ದಶಕಗಳಿಂದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರಿಗೆ ಹೆಗಲು ಕೊಟ್ಟು ನಿಂತಿರುವ ಜೆಡಿಎಸ್ ಕಾರ್ಯಕರ್ತರಿಗೆ ಸುಖಾ ಸುಮ್ಮನೆ ತೊಂದರೆ ಕೊಟ್ಟರೆ ಸಹಿಸುವುದಿಲ್ಲವೆಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಗುಡುಗಿದರು.

ಪಟ್ಟಣದ ವೀರಶೈವ ಕಲ್ಯಾಣ ಮಂಟಪದಲ್ಲಿ ಭಾನುವಾರ ಏರ್ಪಡಿಸಿದ್ದ ತಾಲ್ಲೂಕು ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಜೆಡಿಎಸ್ ಕಾರ್ಯಕರ್ತರ ಪಕ್ಷ. ಅವರಿಗೆ ಯಾರಾದರೂ ನೋವು ಕೊಟ್ಟರೆ ಕೈಕಟ್ಟಿ ಕೂರುವುದಿಲ್ಲ. ಪ್ರತ್ಯುತ್ತರ ನೀಡುವುದು ಖಚಿತವೆಂದು ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲೆಯಲ್ಲಿ ನಮ್ಮ ಶಕ್ತಿ ಕುಂದಿಸಲು ಕಾಂಗ್ರೆಸ್ ಶತ ಪ್ರಯತ್ನ ನಡೆಸುತ್ತಿದೆ. ಎರಡೂ ಬಾರಿ ಸಮಾವೇಶ ಮಾಡಿ ಜೆಡಿಎಸ್ ನಿರ್ಮೂಲನೆ ಮಾಡುವ ಶಪಥ ಮಾಡಿದ್ದಾರೆ. ಅವರು ಏನೇ ತಂತ್ರಗಾರಿಕೆ ಮಾಡಿದರೂ ನಮ್ಮ ಶಕ್ತಿ ಕುಗ್ಗಿಸಲು ಸಾಧ್ಯವಿಲ್ಲ. ಕಾರ್ಯಕರ್ತರೇ ನಮ್ಮ ಆಸ್ತಿ. ಕಾಂಗ್ರೆಸ್‌ನ



**" ಜಿಲ್ಲೆಯ ಅಭಿವೃದ್ಧಿಗೆ ಜೆಡಿಎಸ್ ಕೊಡುಗೆ ಶೂನ್ಯವೆಂದು ಕೆಲವರು ಬೊಗಳುತ್ತಾರೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಸೇವೆ ಏನೆಂಬುದು ಜಿಲ್ಲೆಯ ಪ್ರತಿಯೊಬ್ಬರಿಗೂ ಗೊತ್ತು. ಕಾಂಗ್ರೆಸ್‌ನವರ ಆರೋಪಗಳಿಗೆ 2028ರ ಚುನಾವಣೆಯಲ್ಲಿ ಉತ್ತರ ನೀಡಲಾಗುವುದು. ಮುಂದಿನ ಸರ್ಕಾರ ಮೈತ್ರಿ ಪಕ್ಷದ್ದೇ ಎಂಬುದು ನೂರಕ್ಕೆ ನೂರರಷ್ಟು ಸತ್ಯ.**

**-ಹೆಚ್.ಡಿ.ರೇವಣ್ಣ, ಮಾಜಿ ಸಚಿವ**

ಕರ್ಮಗಳಿಗೆ ಮುಂದಿನ ದಿನಗಳಲ್ಲಿ ಉತ್ತರ ನೀಡಲಾಗುತ್ತದೆಂದರು.

ಜ.24 ರಂದು ಹಾಸನದಲ್ಲಿ ಕಾರ್ಯಕರ್ತರ ಸಮಾವೇಶ ಹಮ್ಮಿಕೊಂಡಿದ್ದು, ತಾಲ್ಲೂಕಿನಿಂದ 20 ಸಾವಿರ ಜನರು ಭಾಗವಹಿಸಬೇಕು. ಬೂತ್ ಮಟ್ಟದಿಂದ ಪಕ್ಷ ಸಂಘಟನೆಗೆ ಈಗಿನಿಂದಲೇ ಆದ್ಯತೆ ನೀಡಬೇಕು. ಮುಂಬರುವ ತಾಲ್ಲೂಕು, ಜಿಲ್ಲಾ ಪಂಚಾಯಿತಿ ಚುನಾವಣೆ ಹಾಗು 2028ರ ವಿಧಾನಸಭೆ ಚುನಾವಣೆಗೆ ತಯಾರಾಗಬೇಕೆಂದರು.

**ಬೇಲೂರಿಗೆ ಕಾಂಗ್ರೆಸ್ ಕೊಡುಗೆ ಶೂನ್ಯ**

ಕಾಂಗ್ರೆಸ್‌ನವರು ಮಾತೆತ್ತಿದರೆ ಅಭಿವೃದ್ಧಿ ಮಾಡಿದ್ದೇವೆ ಎನ್ನುತ್ತಾರೆ. ಬೇಲೂರು ಕ್ಷೇತ್ರ ಅಭಿವೃದ್ಧಿಗೆ ಎಷ್ಟು ಅನುದಾನ ನೀಡಿದ್ದಾರೆಂಬುದರ ಕುರಿತು ಶ್ವೇತಪತ್ರ ಹೊರಡಿಸಲಿ. ಬೇಲೂರಿಗೆ ಇಪ್ಪತ್ತು ವರ್ಷಗಳ ಹಿಂದೆ ರೈಲ್ವೆ ಮಾರ್ಗಕ್ಕೆ ಹೆಚ್.ಡಿ.ದೇವೇಗೌಡ ಅವರು ಶ್ರಮ ಹಾಕಿದ್ದರು. ಆದರೆ, ಕೆಲವರ ಪಿತೂರಿಯಿಂದ ಭೂಮಿಗೆ ಪರಿಹಾರ ನೀಡಲು ಸಾಧ್ಯವಾಗಿಲ್ಲ, ಬೇಲೂರು-ಹಾಸನ ನಾಲ್ಕು ಪಥದ ರಸ್ತೆಗೆ 661 ಕೋ.ರೂ.ಅನುದಾನ ನೀಡಿದ್ದು, ಹೆಚ್.ಡಿ. ದೇವೇಗೌಡ ಮತ್ತು ಹೆಚ್.ಡಿ.ಕುಮಾರಸ್ವಾಮಿ. ಕಾಂಗ್ರೆಸ್‌ನವರು ಬೊಗಳೆ ಬಿಡುತ್ತಾರೆ ಹೊರತು ಅಭಿವೃದ್ಧಿಗೆ ಹಣ ನೀಡುವುದಿಲ್ಲ. ತಾಲ್ಲೂಕು ಅಭಿವೃದ್ಧಿಗೆ ಕಾಂಗ್ರೆಸ್ ಕೊಡುಗೆ ಶೂನ್ಯವೆಂದು ವಾಗ್ದಾಳಿ ನಡೆಸಿದರು.

ಜನದಟ್ಟಣೆ ತೋರಿಸಬೇಕು, ಪುಕ್ಕಟೆ ಪ್ರಚಾರ ಪಡೆಯಬೇಕೆಂದು ಕಾಂಗ್ರೆಸ್‌ನವರು ನಡೆಸಿದ ಸಮಾವೇಶಕ್ಕೆ ಪುರಸಭೆ ಸಿಬ್ಬಂದಿ, ಆಶಾ, ಅಂಗನವಾಡಿ ಕಾರ್ಯಕರ್ತರನ್ನು ಕರೆತಂದಿದ್ದರು. ನಾವು ಅವರ ಹಾಗೆ ಮಾಡುವುದಿಲ್ಲ. ಲಕ್ಷಾಂತರ ಸಂಖ್ಯೆಯಲ್ಲಿ ಪಕ್ಷದ ನಿಷ್ಠಾವಂತ ಕಾರ್ಯಕರ್ತರು ಭಾಗವಹಿಸುತ್ತಾರೆಂಬ ಪೂರ್ಣ ವಿಶ್ವಾಸ ನಮಗಿದೆ. ಕೇವಲ ಗ್ಯಾರಂಟಿ ಹೆಸರು ಹೇಳಿದರೆ ಜನರು ಮರಳಾಗುವುದಿಲ್ಲ. ವೈರಿಗಳಿಗೆ ನಮ್ಮ ಶಕ್ತಿ ತೋರಿಸಲು ಕಾರ್ಯಕರ್ತರು ಕೈಜೋಡಿಸಬೇಕು. ಪಕ್ಷ ಸಂಘಟನೆ ಮೂಲಕ ಅಧಿಕಾರ ಹಿಡಿದು ಏನು ಎಂಬುದನ್ನು ತೋರಿಸೋಣವೆಂದರು.

**ಬೇಲೂರಿನಿಂದ ಜೆಡಿಎಸ್ ಅಭ್ಯರ್ಥಿ**

ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಅವರು ಮಾತನಾಡಿ, ಹಾಸನದಲ್ಲಿ ನಡೆಯುವ ಸಮಾವೇಶದಲ್ಲಿ 2

» ನಾಲ್ಕನೇ ಪುಟದಲ್ಲಿ

### ಬೊಗಳುತ್ತಿದ್ದ ನಾಯಿ, ಯುವಕನ ಬೆನ್ನಟ್ಟಿದ ಕಾಡಾನೆ

• ಪ್ರಜೋದಯ ವರದಿ

**ಬೇಲೂರು:** ಆಹಾರ ಅರಸಿ ಮನೆಯಂಗಳಕ್ಕೆ ಬಂದಿದ್ದ ಕಾಡಾನೆ ತನ್ನ ನೋಡಿ ಬೊಗಳುತ್ತಿದ್ದ ನಾಯಿಯನ್ನು ಬೆನ್ನಟ್ಟಿರುವ ಘಟನೆ ತಾಲ್ಲೂಕಿನ ಬಿಕ್ಕೋಡಿನಲ್ಲಿ ಭಾನುವಾರ ನಡೆದಿದ್ದು, ದೃಶ್ಯವನ್ನು ಮೊಬೈಲ್ ಕ್ಯಾಮರಾದಲ್ಲಿ ಸೆರೆ ಹಿಡಿಯುತ್ತಿದ್ದ ಯುವಕನತ್ತ ಧಾವಿಸಿ ಆತಂಕ ಸೃಷ್ಟಿಸಿತು.

ಜನವಸತಿ ಪ್ರದೇಶಕ್ಕೆ ಕಾಡಾನೆ ಲಗ್ಗೆ ಇಟ್ಟಿದ್ದರಿಂದ ನಾಯಿ ಜೋರಾಗಿ ಬೊಗಳುತ್ತಾ ಅದರತ್ತ ನುಗ್ಗಿದೆ. ಅದರಿಂದ ಆಕ್ರೋಶಗೊಂಡ ಆನೆ ನಾಯಿ ಕಡೆಗೆ ಧಾವಿಸಿ ಬಂದಿದೆ. ಆಗ ನಾಯಿ ಸುಮ್ಮನಾಗಿದ್ದು ಅದನ್ನು ಮನೆಯ ಅಂಗಳದಲ್ಲಿ



ನಿಂತು ವಿಡಿಯೋ ಮಾಡುತ್ತಿದ್ದ ಯುವಕನನ್ನು ಕಂಡು ಆ ಕಡೆಗೆ ಧಾವಿ ಸಿತು. ಗಾಬರಿಗೊಂಡ ಯುವಕ ತಕ್ಷಣ ಮನೆಯೊಳಗೆ ನುಗ್ಗಿ ಬಾಗಿಲು ಹಾಕಿ ಕೊಂಡಿದ್ದಾನೆ. ಈ ಭಯಾನಕ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗಿದೆ.

# ಆಯುರ್ವೇದ ಆರೋಗ್ಯಕ್ಕೆ ವರದಾನ: ಸಂಸದ ಶ್ರೇಯಸ್

• ಪ್ರಜೋದಯ ವರದಿ

**ಹಾಸನ:** ಆಯುರ್ವೇದ ಉತ್ಪನ್ನಗಳು ಮನುಷ್ಯನ ಆರೋಗ್ಯ ರಕ್ಷಣೆಗೆ ವರದಾನವೆಂದು ಸಂಸದ ಶ್ರೇಯಸ್ ಪಟೇಲ್ ಅವರು ಹೇಳಿದರು.

ನಗರದ ಚನ್ನಪಟ್ಟಣ ಬಡಾವಣೆಯಲ್ಲಿ ನೂತನವಾಗಿ ಆರಂಭವಾಗಿರುವ ಮೈ ಎಸ್.ಎಂ. ವೆಲ್ನೆಸ್ ಕೇರ್‌ನ ನೂತನ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚೆಗೆ ಬದಲಾದ ಆಹಾರ ಪದ್ಧತಿ, ಜೀವನ ಶೈಲಿಯಿಂದ ಮನುಷ್ಯನ ಆರೋಗ್ಯ ಹದಗೆಡುತ್ತಿದೆ. ಆರೋಗ್ಯದ ಸುರಕ್ಷತೆ ದೃಷ್ಟಿಯಿಂದ ಆಯುರ್ವೇದ ಉತ್ಪನ್ನಗಳನ್ನು ಬಳಸುವುದು ಒಳಿತು ಎಂದರು.



ರೋಗ ಮುಕ್ತ ಭಾರತ ನಿರ್ಮಾಣಕ್ಕೆ ಸಂಸ್ಥೆ ಕೆಲಸ ಮಾಡುತ್ತಿದ್ದು, ಅದಕ್ಕೆ ಎಲ್ಲರೂ ಕೈಜೋಡಿಸುವ ಅಗತ್ಯವಿದೆ. ಆರೋಗ್ಯ ಸಮಸ್ಯೆ ಉಲ್ಬಣಗೊಳ್ಳುವ ಮೊದಲೇ ಎಚ್ಚೆತ್ತು ಆಯುರ್ವೇದ ಉತ್ಪನ್ನಗಳ ಬಳಕೆ ಮಾಡಬೇಕು. ಹಾಸನದಲ್ಲಿ ಈ ಸಂಸ್ಥೆ ಕಳೆದ ನಾಲ್ಕು ವರ್ಷಗಳಿಂದ ಕೆಲಸ ಮಾಡಿ ಒಳ್ಳೆಯ ಹೆಸರು ಗಳಿಸಿದ್ದು ಮುಂದಿನ ದಿನಗಳಲ್ಲಿಯೂ ಜನರ ಹಿತಕ್ಕಾಗಿ ಕೆಲಸ ಮಾಡಲಿ ಎಂದು ಶುಭ ಹಾರೈಸಿದರು.

ರಕ್ತದೊತ್ತಡ, ಮಧುಮೇಹ, ಅಧಿಕ ಬೊಜ್ಜು ಹೀಗೆ ನಾನಾ ರೀತಿಯ ಖಾಯಿಲೆಗಳು ಜನರಿಗೆ ಬಳುವಳಿಯಾಗಿ ಬಂದಿವೆ. ಇಂತಹ ಎಲ್ಲಾ ಸಮಸ್ಯೆಗಳಿಗೆ ಕಡಿವಾಣ ಹಾಕಿ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಮುಂದಾಗಿರುವ ವೆಲ್ನೆಸ್ ಕೇರ್‌ನ ಸದುಪಯೋಗ ಪಡೆದುಕೊಳ್ಳಬೇಕೆಂದರು. ಸಂಸ್ಥೆಯ ಸಂಸ್ಥಾಪಕ ಯೂಸೀಫ್ ನಿರ್ದೇಶಕ ಮೊಹಮ್ಮದ್ ರಫೀಕ್ ಇತರರಿದ್ದರು.

# ನಾಳೆ ಶ್ರೀ ಡಾ.ಬಾಲಗಂಗಾಧರನಾಥ 13ನೇ ವರ್ಷದ ಪುಣ್ಯಾರಾಧನೆ

• ಪ್ರಜೋದಯ ವರದಿ

**ಹಾಸನ :** ಭೈರವೈಕ್ಯ ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರ 13ನೇ ವರ್ಷದ ಪುಣ್ಯಾರಾಧನೆ ಕಾರ್ಯಕ್ರಮ ಜ.13ರ ಮಂಗಳವಾರ ನಗರದ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿ ನೆರವೇರಲಿದೆ.

ಅಂದು ಬೆಳಿಗ್ಗೆ 6 ಗಂಟೆಯಿಂದ ಸಂಜೆ 6ರವರೆಗೆ ಮಹಾಗಣಪತಿಗೆ ಅಭಿಷೇಕ, ರಜತ ಕವಚಾಲಂಕಾರ, ಪರಮ ಪೂಜ್ಯ ಸ್ವಾಮೀಜಿ ಅವರ ಪಾದುಕೆಗಳಿಗೆ ಪಂಚಾಮೃತ ಅಭಿಷೇಕ, ಪುಷ್ಪಾರ್ಚನೆ, ದೀಪಾರಾಧನೆ ಬಳಿಕ ಮಧ್ಯಾಹ್ನ 12 ಗಂಟೆಗೆ ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ ನಡೆಯಲಿದೆ.

ಮಧ್ಯಾಹ್ನ 2 ರಿಂದ ಸಂಜೆ 6ರ ವರೆಗೆ ವಿವಿಧ ಭಜನಾ ಮಂಡಳಿ ಸದಸ್ಯರಿಂದ ಭಜನೆ ನೆರವೇರಲಿದ್ದು, ಸಂಜೆ 4 ಗಂಟೆಗೆ ಶ್ರೀ ಡಾ.ಬಾಲಗಂಗಾಧರನಾಥ ಮಹಾಸ್ವಾಮಿಯವರ ಪುತ್ಥಳಿಯ ಮುತ್ತಿನ ಪಲ್ಲಕ್ಕಿ ಉತ್ಸವ ಹಾಗೂ ದಿವ್ಯ ಜ್ಯೋತಿಯೊಂದಿಗೆ ನಗರದ ಹೇಮಾವತಿ ಪ್ರತಿಮೆ ಬಳಿಯಿಂದ ಭಕ್ತಿಯ ಮೆರವಣಿಗೆ ಶ್ರೀ ಮಠದ ಆವರಣದಲ್ಲಿ ಸಂಪನ್ನಗೊಳ್ಳಲಿದೆ. ನಂತರ ಮಹಾಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ ನೆರವೇರಲಿದೆ.

ಕಾರ್ಯಕ್ರಮದ ಸಾನ್ನಿಧ್ಯವನ್ನು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ವಹಿಸುವರು. ಪಾವನ ಸಾನ್ನಿಧ್ಯವನ್ನು ಹಾಸನ ಮಠದ ಶ್ರೀ ಶಂಭುನಾಥ ಸ್ವಾಮೀಜಿ ವಹಿಸಲಿದ್ದು, ಶ್ರೀ ಆದಿಚುಚಂಚನಗಿರಿ ಶಾಖಾ ಮಠದ ಸದ್ಗುರುಗಳು, ನಾಡಿನ ವಿವಿಧ ಮಠದ ಸಾಧು ಸಂತರು, ಜಿಲ್ಲೆಯ ಜನಪ್ರತಿನಿಧಿಗಳು ಹಾಗು ಮಠದ ಸದ್ಭಕ್ತರ ಬಳಗ ಭಾಗವಹಿಸಲಿದ್ದಾರೆ.

### ನರೇಗಾ ಹೋರಾಟ : ಜ.13 ರಂದು ಕಾಂಗ್ರೆಸ್ ಸಭೆ

• ಪ್ರಜೋದಯ ವರದಿ

**ಬೆಂಗಳೂರು:** ನರೇಗಾ ಬಚಾವ್ ಸಂಗ್ರಾಮ್ ಕಾರ್ಯಕ್ರಮದ ಆಯೋಜನೆ, ಬೂತ್ ಮಟ್ಟದ ಏಜೆಂಟರ ಪಟ್ಟಿ ತಯಾರಿ ಮತ್ತು ಸ್ಥಳಿಯ ಸಂಸ್ಥೆಗಳಿಗೆ ನಡೆಯಲಿರುವ ಚುನಾವಣೆಯ ಕುರಿತು ಚರ್ಚಿಸಲು ಜ.13ರಂದು ಅರಮನೆ ಮೈದಾನದಲ್ಲಿ ಕಾಂಗ್ರೆಸ್ ಮುಖಂಡರ ಸಭೆ ನಡೆಯಲಿದೆ.

ಅಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿರುವ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಎಐಸಿಸಿ ಕಾರ್ಯದರ್ಶಿಗಳು, ಪಕ್ಷದ ಸಂಸದರು, ಶಾಸಕರು, ಪರಿಷತ್ ಸದಸ್ಯರು, ನಿಗಮ ಮಂಡಳಿಗಳ ಅಧ್ಯಕ್ಷರು, ಪರಾಜಿತ ಅಭ್ಯರ್ಥಿಗಳು, ಮುಂಚೂಣಿ ಘಟಕಗಳ ಅಧ್ಯಕ್ಷರು, ಕೆಪಿಸಿಸಿ ಪದಾಧಿಕಾರಿಗಳು ಸೇರಿ ಎಲ್ಲಾ ನಾಯಕರು ಭಾಗವಹಿಸಲಿದ್ದಾರೆ. ನರೇಗಾ ಕಾಯ್ದೆಗೆ ತಿದ್ದುಪಡಿ ತಂದು, ಅದರ ಹೆಸರು ಬದಲಿಸುವ ಜೊತೆಗೆ ಮೂಲ ಸ್ವರೂಪಕ್ಕೇ ಧಕ್ಕೆ ತಂದಿರುವ ಕೇಂದ್ರ ಸರ್ಕಾರದ ನಡೆಯನ್ನು ಖಂಡಿಸಿ ದೇಶದಾದ್ಯಂತ ಪಕ್ಷ ಪ್ರತಿಭಟನೆ ಹಮ್ಮಿಕೊಳ್ಳಲಿದೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

## ಇಂದಿನಿಂದ ನೋಂದಣಿ ಆರಂಭ | 2.50 ಲಕ್ಷ ಕ್ವಿಂಟಾಲ್ ನಿಗದಿ

# ಬೆಳೆ ವ್ಯತ್ಯಾಸ ಪಾವತಿ ಯೋಜನೆಯಡಿ ಮೆಕ್ಕೆಜೋಳ ಖರೀದಿ

• ಪ್ರಜೋದಯ ವರದಿ

**ಹಾಸನ:** ಬೆಂಬಲ ಬೆಲೆಯಡಿ ಹೆಚ್ಚುವರಿ ಮೆಕ್ಕೆಜೋಳ ಖರೀದಿಸಬೇಕೆಂಬ ರೈತರ ಕೂಗಿಗೆ ಸ್ಪಂದಿಸಿರುವ ರಾಜ್ಯ ಸರ್ಕಾರ ಬೆಲೆ ವ್ಯತ್ಯಾಸ ಪಾವತಿ ಯೋಜನೆಯಡಿ ಖರೀದಿಗೆ ಮುಂದಾಗಿದ್ದು, ಜ.12ರಿಂದ ಜಿಲ್ಲಾದ್ಯಂತ ನೋಂದಣಿ ಪ್ರಕ್ರಿಯೆ ಪ್ರಾರಂಭವಾಗಲಿದೆ.

ಜಿಲ್ಲೆಯು 2,29,974 ಹೆಕ್ಟೇರ್ ಕೃಷಿ ಭೂಮಿ ಹೊಂದಿದೆ. 2025-26ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ 1,01,065 ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ಬಿತ್ತನೆ ಕೈಗೊಳ್ಳಲಾಗಿದೆ. 4,81,069 ಮೆಟ್ರಿಕ್ ಟನ್ ಉತ್ಪಾದನೆಯಾಗಿದೆ. ಹವಾಮಾನ ವೈಪರೀತ್ಯ ಹಾಗು ಬಿಳಿ ಸುಳಿ ರೋಗ ಕಾರಣದಿಂದ ಇಳುವರಿಯಲ್ಲಿ ಕುಸಿತ ಕಂಡಿದೆ. ಹೀಗಾಗಿ ಬೆಂಬಲ ಬೆಲೆಯಡಿ ಮೆಕ್ಕೆಜೋಳ ಖರೀದಿಸಬೇಕೆಂದು ಹಾಸನ ಸೇರಿ ರಾಜ್ಯಾದ್ಯಂತ ರೈತರು ಬೀದಿಗಿಳಿದು ಹೋರಾಟ ನಡೆಸಿದ್ದರು. ಅನ್ನದಾತರ ಆಕ್ರೋಶಕ್ಕೆ ಮಣಿದ ಸರ್ಕಾರ ಡಿ. 7ರಂದು ಪ್ರತಿ ಕ್ವಿಂಟಾಲ್‌ಗೆ 2,400



ರೂ.ನಂತೆ ಖರೀದಿಗೆ ಸಮ್ಮತಿ ಸೂಚಿಸಿತ್ತು. ಆ ಪ್ರಕಾರ ಜಿಲ್ಲೆಯಲ್ಲಿ 10 ಸಾವಿರ ಮೆಟ್ರಿಕ್ ಟನ್ ಮೆಕ್ಕೆ ಜೋಳವನ್ನು ಪಶು ಆಹಾರ ಉತ್ಪಾದನೆಗಾಗಿ ಕೆಎಂಎಫ್ ಮೂಲಕ ಖರೀದಿಸಲು ಆದೇಶಿಸಿತು. ಅದಕ್ಕೆ ಒಪ್ಪದ ರೈತರು ಕನಿಷ್ಠ 25 ಸಾವಿರ ಮೆಟ್ರಿಕ್ ಟನ್ ಖರೀದಿಸಬೇಕೆಂದು ಪಟ್ಟು ಹಿಡಿದರು. ಈ ವಿಚಾರವಾಗಿ ಕೆಎಂಎಫ್ ಹಾಗು ರೈತರ ನಡುವೆ ತೀವ್ರ ವಾಗ್ವಾದವೂ ನಡೆಯಿತು. ಈ ಪರಿಸ್ಥಿತಿಯನ್ನು ಮನಗಂಡ ಜಿಲ್ಲಾಡಳಿತ ಬೆಲೆ ವ್ಯತ್ಯಾಸ ಪಾವತಿ ಯೋಜನೆಯಡಿ ಮೆಕ್ಕೆಜೋಳ ಖರೀದಿಸ ಬೇಕೆಂದು ಪ್ರಸ್ತಾವನೆ ಸಲ್ಲಿಸಿದ ಹಿನ್ನಲೆಯಲ್ಲಿ ಹಸಿರು ನಿಶಾನೆ ದೊರೆತಿದೆ. ಸಕಲೇಶಪುರ ಹೊರತುಪಡಿಸಿ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಸೋಮವಾರದಿಂದ ನೋಂದಣಿ ಪ್ರಕ್ರಿಯೆ ಪ್ರಾರಂಭ ಆಗಲಿದ್ದು, ಎಪಿ ಎಂಸಿ ಸಕಲ ಸಿದ್ಧತೆ ಮಾಡಿಕೊಂಡಿದೆ.

**ರೈತರಿಗೆ ಸಿಗುವ ಬೆಲೆ ಎಷ್ಟು**

ಬೆಲೆ ವ್ಯತ್ಯಾಸ ಪಾವತಿ ಯೋಜನೆಯಡಿ ಮೆಕ್ಕೆಜೋಳ ಖರೀದಿಸಿದ ಮಾತ್ರಕ್ಕೆ ರೈತರಿಗೆ ಪ್ರತಿ ಕ್ವಿಂಟಾಲ್‌ಗೆ 2400 ರೂ. ಸಿಗುವುದಿಲ್ಲ. ರೈತರೇ ನೇರವಾಗಿ ಎಪಿಎಂಸಿಗೆ ಜೋಳವನ್ನು ಮಾರಾಟ ಮಾಡಬಹುದಾದರೂ ಇಲ್ಲಿ ಮಧ್ಯವರ್ತಿಗಳಿಗೂ ಅವಕಾಶ ಕಲ್ಪಿಸಲಾಗಿದೆ. ಗ್ರಾಮೀಣ ಪ್ರದೇಶದಿಂದ ಮಧ್ಯವರ್ತಿಗಳು ಮೆಕ್ಕೆಜೋಳವನ್ನು ಖರೀದಿಸಿ ಎಪಿಎಂಸಿಗೆ ನೀಡುತ್ತಾರೆ. ಪ್ರಸ್ತುತ ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಾಲ್‌ಗೆ 1,900 ರೂ. ದರ ನಿಗದಿಯಾಗಿದ್ದು, ವರ್ತಕರು ಅಷ್ಟು ಹಣವನ್ನು ರೈತರಿಗೆ ನೀಡುತ್ತಾರೆ. ಆ ಬಳಿಕ ರೈತರ ಖಾತೆಗೆ ಪ್ರತಿ ಕ್ವಿಂಟಾಲ್‌ಗೆ 250 ರೂ. ಸರ್ಕಾರದಿಂದ ಡಿಬಿಟಿ ಮೂಲಕ ಪಾವತಿಯಾಗಲಿದೆ. ಇಲ್ಲಿ ಮಧ್ಯವರ್ತಿಗಳಿಗೆ ಎಪಿಎಂಸಿಯಿಂದ ಪ್ರತ್ಯೇಕ ಲಾಭಾಂಶ ಸಂದಾಯವಾಗಲಿದೆ. ಈ ಯೋಜನೆಯಿಂದ ರೈತರಿಗೆ ಕ್ವಿಂಟಾಲ್‌ಗೆ 150 ರಿಂದ 250 ರೂಪಾಯಿ ಹೆಚ್ಚುವರಿಯಾಗಿ ಸಿಗುವ ಸಾಧ್ಯತೆಗಳಿವೆ. ರೈತರ ನಿರಂತರ ಹೋರಾಟದ ಪ್ರಯತ್ನವಾಗಿ ಸ್ವಲ್ಪ ಲಾಭವಾಗಿದೆ ಎನ್ನಬಹುದು.

**2.50 ಲಕ್ಷ ಕ್ವಿಂಟಾಲ್ ಖರೀದಿ**

ಬೆಳೆ ವ್ಯತ್ಯಾಸ ಪಾವತಿ ಯೋಜನೆಯಡಿ 2.50 ಲಕ್ಷ ಕ್ವಿಂಟಾಲ್ ಮೆಕ್ಕೆಜೋಳ ಖರೀದಿಗೆ ಅವಕಾಶವಿದೆ. ಫ್ರೂಟ್ ಐಡಿ ಹೊಂದಿರುವ ರೈತ ಪ್ರತಿ ಎಕರೆಗೆ ಕನಿಷ್ಠ 12 ರಿಂದ ಗರಿಷ್ಠ 50 ಕ್ವಿಂಟಾಲ್ ವರೆಗೆ ಮಾರಾಟ ಮಾಡಬಹುದು. ಮಧ್ಯವರ್ತಿಗಳು ಖರೀದಿಗೆ ಬಂದಾಗ ಫ್ರೂಟ್ಸ್ ಐಡಿ, ಆಧಾರ್ ನಂಬರ್ ಮತ್ತು ಬ್ಯಾಂಕ್ ಖಾತೆ ಸಂಖ್ಯೆ ಕೊಟ್ಟರೆ ಕೆಲಸ ಸುಲಭವಾಗಲಿದೆ. ಮಾರುಕಟ್ಟೆಗೆ ಬರಲು ಸಾಧ್ಯವಾಗದೆ ಇರುವ ರೈತರು ಮಧ್ಯವರ್ತಿಗಳ ನೆರವಿನಿಂದ ಯೋಜನೆಯ ಲಾಭ ಪಡೆಯಲು ಮುಂದಾಗಿದ್ದಾರೆ. ಈ ಪ್ರಕ್ರಿಯೆ 30 ದಿನಗಳ ವರೆಗೆ ಇರಲಿದೆ.

### ಕೆಎಂಎಫ್‌ನಿಂದ ಹಂತ ಹಂತವಾಗಿ ಹಣ ಜಮೆ

**ಕ್ವಿಂಟಾಲ್‌ಗೆ 2,400 ರೂ.ನಂತೆ ಮೆಕ್ಕೆಜೋಳ ಖರೀದಿಸಿದ್ದ ಕೆಎಂಎಫ್ ಒಂದು ತಿಂಗಳಾದರೂ ರೈತರ ಖಾತೆಗೆ ಹಣ ಜಮೆ ಮಾಡಿರಲಿಲ್ಲ. ಈ ಸಂಬಂಧ ರೈತ ಸಂಘಟನೆ ಮುಖಂಡರು ಜಿಲ್ಲಾಧಿಕಾರಿ ಅವರಿಗೆ ಮನವಿ ಸಲ್ಲಿಸಿದ ಬಳಿಕ ಹಣ ಜಮೆಯಾಗುತ್ತಿದೆ. ನಿತ್ಯ 150 ರಿಂದ 200 ರೈತರಿಗೆ ಹಣ ಪಾವತಿಯಾಗುತ್ತಿದೆ ಎಂದು ರೈತ ಮುಖಂಡ ಪಿ.ಭೂಮೇಶ್ ಅವರು ಹೇಳಿದ್ದಾರೆ.**


**" ಬೆಲೆ ವ್ಯತ್ಯಾಸ ಪಾವತಿ ಯೋಜನೆಯಡಿ ಮೆಕ್ಕೆಜೋಳ ಖರೀದಿ ನೋಂದಣಿಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಈ ಯೋಜನೆಯಿಂದ ರೈತರಿಗೆ ಪ್ರತಿ ಕ್ವಿಂಟಾಲ್‌ಗೆ 150 ರಿಂದ 250 ರೂ. ಲಾಭವಾಗಲಿದೆ. ಸಕಲೇಶಪುರ ಹೊರತುಪಡಿಸಿ ಎಲ್ಲಾ ತಾಲ್ಲೂಕುಗಳಲ್ಲಿ ನೋಂದಣಿ ಆರಂಭವಾಗಲಿದೆ.**

**-ಮಧು, ಎಪಿಎಂಸಿ ಅಧಿಕಾರಿ**

# ತಂದೆಯನ್ನೇ ಹತ್ಯೆ ಮಾಡಿದ ಪುತ್ರ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಕೌಟುಂಬಿಕ ಕಲಹದಿಂದ ಪುತ್ರನೇ ಕಬ್ಬಿಣದ ರಾಡ್‌ನಿಂದ ಹೊಡೆದು ತಂದೆಯನ್ನು ಹತ್ಯೆ ಮಾಡಿರುವ ಘಟನೆ ತಾಲ್ಲೂಕಿನ ಹಿರೀಸಾವೆಯಲ್ಲಿ ನಡೆದಿದೆ.




ಕೆರೆಬೀದಿಯ ಸತೀಶ್ (60) ಮೃತ ದುರ್ದೈವಿ. ಆರೋಪಿ ಪುತ್ರ ರಂಜಿತ್‌ನನ್ನು ಪೊಲೀಸರು ಬಂಧಿಸಿದ್ದಾರೆ. ಮೃತ ಸತೀಶ್ ಮತ್ತು ಪತ್ನಿ ನಿರ್ಮಲ ದಾಂಪತ್ಯ ಜೀವನದಲ್ಲಿ ಬಿರುಕುಂಟಾಗಿ ಮಕ್ಕಳಾದ ರಂಜಿತ್ ಹಾಗು ಗಿರೀಶ್ ಜೊತೆಗೆ ನಿರ್ಮಲ ಕೆ.ಆರ್.ನಗರದಲ್ಲಿ ವಾಸವಿದ್ದರು.

ಸತೀಶ್ ಅವರು ಹಿರೀಸಾವೆಯ ಮನೆಯಲ್ಲಿ ತಾಯಿ ಪುಟ್ಟಮ್ಮ ಜೊತೆಗೆ ವಾಸವಿದ್ದರು. ಶನಿವಾರ ಸಂಜೆ ಮನೆಗೆ ಬಂದ ರಂಜಿತ್ ತಂದೆ ಜೊತೆಗೆ ಜಗಳ ಶುರು ಮಾಡಿದ್ದ. ಮಾತಿಗೆ ಮಾತು ಬೆಳೆದು ಆತ ಮನೆಯಲ್ಲಿದ್ದ ಕಬ್ಬಿಣದ ರಾಡ್‌ನಿಂದ ತಲೆಗೆ ಹೊಡೆದ ಪರಿಣಾಮ ಸತೀಶ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸಾರ್ವಜನಿಕರು ನೀಡಿದ ದೂರು ಆಧರಿಸಿ ಪೊಲೀಸರು ಭೇಟಿ ನೀಡಿದಾಗ ಸತೀಶ್ ರಕ್ತದ ಮಡುವಿನಲ್ಲಿ ಬಿದ್ದಿದ್ದರು. ಅಲ್ಲಿಯೇ ಇದ್ದ ರಂಜಿತ್‌ನನ್ನು ವಶಕ್ಕೆ ಪಡೆಯಲಾಗಿದೆ. ಹಿರೀಸಾವೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

CMYK CMYK CMYK CMYK

# ಕಾರುಣ್ಯದ ಸನ್ಮೂರ್ತಿ ಶ್ರೀ ಗುರು ಬಾಲಗಂಗಾಧರನಾಥ ಮಹಾಗುರು



**ಜ್ಞಾನಶಕ್ತಿ ಸಮಾರೂಢಾಃ ತತ್ವಮಾಲಾ ವಿಭೂಷಿತಾಃ ಭುಕ್ತಿ ಮುಕ್ತಿ ಪ್ರದಾತಾ ಚತಸ್ಮೈ ಶ್ರೀ ಗುರವೇ ನಮಃ ಎಲ್ಲಾ ಜ್ಞಾನರತ್ನಗಳ ಒಡೆಯನೂ, ಅತ್ಯುನ್ನತ ತತ್ವಗಳ ಮಾಲೆಯಿಂದ ಅಲಂಕರಿಸಲ್ಪಟ್ಟವನೂ, ನಮಗೆ ಭೌತಿಕ** ಸಂಪತ್ತು ಮತ್ತು ಪರಮ ಮುಕ್ತಿಯನ್ನು ದಯಪಾಲಿಸುವವನೂ ಆಗಿರುವ ಶ್ರೀ ಗುರುವಿಗೆ ನಾನು ನಮಿಸುತ್ತೇನೆ. ಹಸಿದೊಡಲುಗಳಿಗೆ ಪೂರ್ಣಾನ್ನವನುಣಿಸಿ, ನೊಂದ ಮನಗಳಿಗೆ ಸಾಂತ್ವನದ ನುಡಿಯೊಂದಿಗೆ ಆಶ್ರಯವನಿತ್ತು, ಜ್ಞಾನ ದಾಹಿಗಳಿಗಾಗಿ ಶಿಕ್ಷಣ ಮಂದಿರಗಳನ್ನು ನಿರ್ಮಿಸಿ, ಸ್ವಸ್ಥ ಆರೋಗ್ಯ ಸರ್ವರಿಗೂ ಲಭಿಸಲು ಭವ ವೈದ್ಯರನ್ನು ನೇಮಿಸಿ ಇಡೀ ಸಮಾಜ ದುಸ್ಥಿತಿಗೆ ಚೊಂಕಟ್ಟೆ ನಿಂತಿರುವ ಮಠವೆಂದರೆ, ನಮ್ಮ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ.

ಸ್ವರ್ಗ ಸೀಮೆಯ ಸುಂದರ ಪ್ರಕೃತಿಯ ಮಡಿಲಿನಲ್ಲಿ ನೆಲೆನಿಂದ ನಿರ್ಸಾವ ನವಿಲಿನಿಂದುಗಳಿಂದ ಕಂಗೊಳಿಸುತ್ತಿರುವ ನಾಥ ಸಂಪ್ರದಾಯದ ಹಿನ್ನಲೆಯಿರುವ ಮಹಾಮನೆಯೇ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ. ಶ್ರೀ ಕ್ಷೇತ್ರದ ಅಧಿದೈವವಾಗಿರುವ ಶ್ರೀ ಕಾಲಭೈರವೇಶ್ವರಸ್ವಾಮಿಯ ಅನುಗ್ರಹ ಪಡೆಯಲು ಒಕ್ಕಲು ಮನೆತನದ ಅಸಂಖ್ಯಾತ ಭಕ್ತರು ಶ್ರೀಕ್ಷೇತ್ರಕ್ಕಾಗಮಿಸಿ ಮಹಾಗುರುಗಳ ಹಾಗೂ ಶ್ರೀ ಕಾಲಭೈರವೇಶ್ವರಸ್ವಾಮಿಯವರ ದಿವ್ಯಾನುಗ್ರಹ ಪಡೆದು ಪುನೀತಭಾವದಿಂದ ತೆರಳುವ ಸಂಪ್ರದಾಯ ಇಂದಿಗೂ ಅನೂಚಿನವಾಗಿ ನಡೆದು ಕೊಂಡು ಬರುತ್ತಿದೆ. 1974ರಲ್ಲಿ ಗುರು ಬಾಲಗಂಗಾಧರನಾಥ ಮಹಾಸ್ವಾಮೀಜಿಯವರು ಜಗದ್ಗುರುಗಳಾಗಿ ಪೀಠಾರೋಹಣ ಮಾಡಿದ ಸಂದರ್ಭದಲ್ಲಿ ಶ್ರೀ ಮಠದ ಕಾರ್ಯವ್ಯಾಪ್ತಿ ಬಹು ಚಿಕ್ಕದಾಗಿತ್ತು. ರೈತರು ನೀಡಿದ ಭಿಕ್ಷಾನ್ನದಿಂದ ಶ್ರೀಮಠವು ನಡೆಯುವ ಪರಿಸ್ಥಿತಿ ಇತ್ತು. ಕೆಲವೇ ಕೆಲವು ವಿದ್ಯಾರ್ಥಿಗಳಿದ್ದ ಆ ಸಮಯದಲ್ಲಿ ಮಹಾಗುರುಗಳು ಸ್ವತಃ ತಾವೇ ಸಂಸ್ಕೃತ ಪಠ್ಯ ಬೋಧನೆ ಮಾಡುವ ಮೂಲಕ ಸಂಸ್ಕಾರದ ಮಾರ್ಗೋಪದೇಶ ಬೋಧಿಸುತ್ತಿದ್ದರು. ಅವರಿಂದ ಕಲಿತ ವಿದ್ಯೆ ಹಾಗೂ ಸಂಸ್ಕಾರದಿಂದ ಅನೇಕರು ಇಂದು ಸಮಾಜದಲ್ಲಿ ಅತ್ಯುನ್ನತ ಹುದ್ದೆಗಳನ್ನಲಂಕರಿಸಿ ತಮ್ಮ ಬದುಕಿನ ನೆಲೆ ಕಂಡುಕೊಂಡಿದ್ದಾರೆ. ಅಂದಿನ ಆ ಕಷ್ಟಕರ ಸಮಯ ದಲ್ಲಿ ಶ್ರೀ ಮಠದಲ್ಲಿದ್ದ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರೀತಿಯ ಮಕ್ಕಳೇ.....

ಹೊಟ್ಟೆ ತುಂಬಾ ಮುದ್ದೆ ಉಂಡು ಬಾಯ್ತುಂಬಾ ಅನ್ನ ತಿನ್ನಿ ಎಂದು ತಾಯ್ತನದ ಅಕ್ಕರೆಯ ಮಾತುಗಳನ್ನಾಡಿ, ವಿದ್ಯಾವಂತರಾಗಲು ಪ್ರೇರೇಪಿಸುತ್ತಿದ್ದರು. ಸ್ವತಃ ತಾವೇ ನೇಗಿಲಿಡಿದು ಭೂಮಿಯನ್ನು ಉತ್ತು ಬಿತ್ತಿ ಬೆಳೆದು ಹಸಿದು ಬಂದ ಭಕ್ತರೊಡಲಿಗೆ ಅನ್ನ ದಾಸೋಹದ ಮಹಾಪ್ರಸಾದವ ಉಣಬಡಿಸುತ್ತಿದ್ದರು. ಎತ್ತಿನ ಬಂಡಿಯ ಮೇಲೆ ಕುಳಿತು ಗ್ರಾಮ ಗ್ರಾಮ ಗಳಿಗೆ ಭೇಟಿ ನೀಡಿ ರೈತರು ಉದಾರವಾಗಿ ಭಕ್ತಿಯಿಂದ ನೀಡಿದ ರಾಗಿ, ಭತ್ತ, ದವಸ-ಧಾನ್ಯ ತೆಂಗುಗಳನ್ನು ಪ್ರೀತಿಯಿಂದ ಸ್ವೀಕರಿಸಿ ಮಠದ ಮಕ್ಕಳ ಉದರ ಪೋಷಣೆ ಮಾಡುತ್ತಿದ್ದರು. ಮಹಾಗುರುಗಳ ಈ ಪರಿಯ ಸೇವೆಯನ್ನು ಮನಗಂಡ ಭಕ್ತರು ಶ್ರೀಮಠಕ್ಕೆ ನಾ ಮುಂದೆ..... ತಾ ಮುಂದೆ ಎಂದುಕೊಂಡು ಬರತೊಡಗಿದರು. ತಮ್ಮ ಶಕ್ತಾನುಸಾರ ಧನ, ದಾನ್ಯಗಳನ್ನು ನೀಡಿದರು.

ಮಹಾಗುರುಗಳ ಅನೇಕ ಬಗೆಯ ಸಾಮಾಜಿಕ ಸೇವಾ ಕಾರ್ಯಗಳಿಗೆ ನೆರವಿನ ಹಸ್ತ ನೀಡಿದರು. ಕಾಲಕ್ರಮೇಣ ಮಠವು ಮಹಾಸಂಸ್ಥಾನ ಮಠವಾಗಿ ಹೆಮ್ಮರವಾಗಿ ಬೆಳೆಯ ತೊಡಗಿತು. ನಮ್ಮ ಗ್ರಾಮೀಣ ಯುವ ಜನರ, ರೈತರ ಏಳಿಗೆ ವಿದ್ಯೆಯಿಂದ ಮಾತ್ರ ಸಾಧ್ಯ, ಎಂದರಿತ ಮಹಾಗುರು ಶಾಲೆಗಳನ್ನು ಜೊತೆಗೆ ವಿದ್ಯಾರ್ಥಿನಿಲಯಗಳನ್ನು ಆರಂಭಿಸಿದರು. ಬಡವರ, ಅಶಕ್ತರ, ನಿರ್ಗತಿಕರ ಅನೇಕ ಮಕ್ಕಳು ಜಾತಿ ಮತ ಭೇದವಿಲ್ಲದೆ ಶ್ರೀ ಮಠದಲ್ಲಿ ಅಧ್ಯಯನ ಮಾಡ ತೊಗಿದರು. ಅಂದಿನಿಂದ ಆರಂಭಗೊಂಡ ಶಿಕ್ಷಣ ಸಂಸ್ಥೆಗಳು ಇಂದಿಗೆ 575 ಕ್ಕೂ ಅಧಿಕವಾಗಿ ವಿದ್ಯಾದಾನವನ್ನು ನೀಡುತ್ತಿವೆ. ಈ ಬಗೆಯ ಶೈಕ್ಷಣಿಕ ಕ್ರಾಂತಿಯ ಹರಿಕಾರರು. ಈ ಯುಗದ ಯುಗಯೋಗಿ, ಶಿಕ್ಷಣ ಭೀಷ್ಮ, ಅಕ್ಷರಸಂತ, ಪರಮಪೂಜ್ಯ ಜಗದ್ಗುರು ಶ್ರೀ ಡಾ. ಬಾಲಗಂಗಾಧರನಾಥ ಮಹಾಗುರು. ದೀಪ ತನ್ನನ್ನು ತಾನು ಸುಟ್ಟುಕೊಂಡು ಸುತ್ತಲಿನ ಕತ್ತಲನ್ನು ಹೊರದೂಡಿ ಬೆಳಕನ್ನು ನೀಡುವಂತೆ ತಮ್ಮ ಎಲ್ಲಾ ಬಗೆಯ ಸುಖವನ್ನು ತ್ಯಾಗ ಮಾಡಿ ನಮ್ಮಂತಹ ಅನೇಕ ದೀನ ದಲಿತರ ಬದುಕಿಗೆ ಬೆಳಕಾದರು. ಮಹಾಗುರುಗಳು ನೀಡಿದ ವಿದ್ಯೆ ಹಾಗೂ ಉದ್ಯೋಗದಿಂದ ನಾವಿಂದು ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗಿದೆ.

ನನ್ನ ತಂದೆ-ತಾಯಿಯವರು ಈ ಧರೆಗೆ ನನ್ನ ಪರಿಚಯಿಸಿದರೆ, ನನ್ನನ್ನು ಒಬ್ಬ ಸಂಸ್ಕಾರ ಯುತ ಸತ್ಪ್ರಜೆಯನ್ನಾಗಿ ರೂಪಿಸಿ ಅನುಗ್ರಹಿಸಿದವರು ನನ್ನ ಬದುಕಿನ ನಿಜ ಸೂರ್ಯರಾದ ಪರಮಪೂಜ್ಯ ಜಗದ್ಗುರು ಪದ್ಮಭೂಷಣ ಶ್ರೀ ಡಾ. ಬಾಲಗಂಗಾಧರನಾಥ ಮಹಾಗುರುಗಳು. ಜಾತಿಯ ವಿಷ ಜ್ವಾಲೆಯಲ್ಲಿ ನೊಂದು ಬೆಂದು ಬಸವಳಿದ ನಮ್ಮಂತವರನ್ನು ಕನಿಕರದಿಂದ ಸ್ವಂತ ಮಕ್ಕಳೆಂದು ಭಾವಿಸಿ, ಅಕ್ಕರೆಯ ಸಿಹಿ ಮಾತಿನ ತುತ್ತನ್ನು ನೀಡಿ ನಾವೂ ಕೂಡ ಮನುಷ್ಯರೆಂದು ಭಾವಿಸಿ ಎಲ್ಲರಂತೆ ನಾವುಗಳು ಎಲ್ಲರೊಡನೆ ಬೆರೆಯುವ ಸದಾವಕಾಶ ಕಲ್ಪಿಸಿ, ನಮ್ಮಲ್ಲಿದ್ದ ಜಾತಿಯ ಕೀಳರಿಮೆಯನ್ನು ಹೋಗಲಾಡಿಸಿದ ಮಹಾಸಂತರು ನನ್ನ ಮಹಾಗುರುಗಳಾದ ಪರಮಪೂಜ್ಯ ಜಗದ್ಗುರು ಪದ್ಮಭೂಷಣ ಶ್ರೀ ಡಾ.ಬಾಲಗಂಗಾಧರನಾಥ ಮಹಾಗುರುಗಳು.

ನಾನು ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿರುವ ಶ್ರೀ ಕಾಲಭೈರವೇಶ್ವರ ಸಂಸ್ಕೃತ-ವೇದಾಗಮ ಮಹಾವಿದ್ಯಾಲಯದಲ್ಲಿ ಸಂಸ್ಕೃತ ಸಹಶಿಕ್ಷಕನಾಗಿ ಸೇವೆ ಸಲ್ಲಿಸುತ್ತಿದ್ದಾಗ ಮಹಾಗುರುಗಳನ್ನು ಅತ್ಯಂತ ಸಮೀಪದಲ್ಲಿ ದರ್ಶನ ಮಾಡುವ ಸುಯೋಗ ನನ್ನದಾಗಿತ್ತು. ಭಕ್ತಿಯಿಂದ ಮಹಾ ಗುರುಗಳ ಪಾದ ಕಮಲಗಳಿಗೆ ನಮಸ್ಕರಿಸಿ ಧನ್ಯತಾ ಭಾವದಿಂದ ಅವರೆದುರಿಗೆ ಕೈಮುಗಿದು ನಿಂತಾಗ ವಹಾಗುರುಗಳು ನಮ್ಮನ್ನು ಕಣ್ತುಂಬ ದೃಷ್ಟಿಸಿ ಮುಗುಳು ನಗೆ ಬೀರುವ ಮಂದಸ್ಮಿತ ಮೊಗವನ್ನು ನೋಡಿದಾಗ ನಮಗಾಗುತ್ತಿದ್ದ ಆ ಆನಂದವನ್ನು ನಾನು ಮನಸಾ ಅನುಭವಿಸಿದ್ದೇನೆ. ಪ್ರತಿಯೊಬ್ಬ ಭಕ್ತರನ್ನು ದೃಷ್ಟಿಸಿ ನೋಡಿ ಮೆಲುದನಿಯಲ್ಲಿ ಮಾತನಾಡಿಸುತ್ತಿದ್ದ ಮಹಾಗುರುಗಳ ನಿಷ್ಕಲ್ಮಶ ಭಾವಶುದ್ಧತೆಯನ್ನು ಇದುವರೆಗೆ ನಾ ಯಾರಲ್ಲಿಯೂ ಕಾಣಲೇ.. ಇಲ್ಲ, ಸಾಕ್ಷಾತ್ ದೇವರ ದರ್ಶನವನ್ನೇ ಮಾಡಿದ ಅನುಭವ ನಮಗಾಗುತ್ತಿತ್ತು. ಹತ್ತಿರ ಕರೆದು ಬಾಯ್ತುಂಬ ಮಾತನಾಡಿಸಿ ಅಲ್ಲಿಯೇ ಇರುತ್ತಿದ್ದ ಹಣ್ಣುಗಳನ್ನು ಪ್ರಸಾದದ ರೂಪದಲ್ಲಿ ಹಂಚುತ್ತಿದ್ದ ಅವರ ಶುದ್ಧ ಮನಸ್ಥಿತಿ ಎಂತಹ ನಾಸ್ತಿಕನನ್ನೂ ಸೂಜಿಗಲ್ಲಿನಂತೆ ಸೆಳೆಯುತ್ತಿತ್ತು. ಕಾಲೇಜಿನ ಕರ್ತವ್ಯಕ್ಕಾಗಿ ಚುಂಚನಗಿರಿಯ ರಾಜಬೀದಿಯಲ್ಲಿ ನಡೆದು ಕೊಂಡು ಹೋಗುವ ಸಂದರ್ಭದಲ್ಲಿ ನಮ್ಮೆದುರಿಗೆ ಮಹಾ ಗುರುಗಳು ಕಾರಿನಲ್ಲಿ ಬರುವಾಗ ನಾವು ಅಲ್ಲಿಯೇ ನಮ್ಮ ಪಾದರಕ್ಷೆಗಳನ್ನು ಕಳಚಿ ಕೈಮುಗಿದು ನಮಸ್ಕರಿಸುವಾಗ ಮಹಾ ಗುರುಗಳು ಕಾರಿನ ಕಿಟಕಿಯ ಗಾಜನ್ನು ಇಳಿಸಿ ನಮ್ಮತ್ತ ಬಲಗೈಯಿಂದಲೇ ಅಭಯ ಹಸ್ತದಿಂದ ಆಶೀರ್ವಾದ ಮಾಡುತ್ತಿದ್ದ ದೃಶ್ಯ ನಮ್ಮಿಂದ ಇಂದಿಗೂ ಮರೆಯಲಾಗದು. ಯಾರಲ್ಲಿಯೂ ಜಾತಿಯ ಭೇದವನೆಣಿಸದ ಮಹಾ ಮಾನವೀಯ ಮೌಲ್ಯ ಗಳ ಸರದಾರರು ನನ್ನ ಮಹಾಗುರುಗಳು. ಇಂತಹ ಮಹಾಗುರುಗಳ ಸನ್ನಿಧಿಯಲ್ಲಿ ಬೆಳೆದ ನಾನು ಬಹು ಭಾಗ್ಯವಂತನೆಂದು ಭಾವಿಸುತ್ತೇನೆ. ಹತ್ತು ವರ್ಷಗಳು ಮಹಾಗುರುಗಳ ಸನಿಹ ದಲ್ಲಿ ಸೇವೆ ಮಾಡುವ ಸುಯೋಗ ನನ್ನದಾಗಿತ್ತು. ಶಿಕ್ಷಕನಾಗಿದ್ದುಕೊಂಡು ವಿದ್ವತ್ ಪದವಿ, ಬಿ.ಇಡಿ ಪದವಿ, ಎಂ.ಎ, ಸ್ನಾತಕೋತ್ತರ ಪದವಿಗಳನ್ನು ಪಡೆಯಲು ಅನುಕೂಲ ಮತ್ತು ಅವಕಾಶ ಕಲ್ಪಿಸಿದ ಮಹಾಗುರುಗಳ ಆಶೀರ್ವಾದದಿಂದ ಸರ್ಕಾರಿ ಪ್ರೌಢಶಾಲೆಗೆ ಸಂಸ್ಕೃತ ಸಹ ಶಿಕ್ಷಕನಾಗಿ ಆಯ್ಕೆಯಾದೆ. ಇವೆಲ್ಲವೂ ಪರಮಪೂಜ್ಯ ಜಗದ್ಗುರು ಶ್ರೀ ಡಾ. ಬಾಲಗಂಗಾಧರನಾಥ ಮಹಾಗುರುಗಳು ನನಗೆ ನೀಡಿದ ಪ್ರಸಾದ ರೂಪದ ಮಹತ್ತರವಾದ ಭಿಕ್ಷೆ. ಅನುದಿನವೂ ಅನು ಕ್ಷಣವೂ ಮಹಾಗುರುಗಳ ನಾಮಸ್ಮರಣೆ ಮಾಡದೆ ನನ್ನ ದೈನಂದಿನ ಕಾಯಕಗಳು ಮುಂದು ವರೆಯುವುದಿಲ್ಲ. ನನ್ನ ಬದುಕಿನ ನೆಮ್ಮದಿಗೆ ಕಾರಣೀಭೂತರಾದವರೇ ನನ್ನ ಮಹಾಗುರುಗಳು.

ಜಾತಿ ವಿಜಾತಿಯ ಬೇಧವನೆಣಿಸದೆ ಸರ್ವ ಜನಾಂಗವನ್ನು ಸರ್ವ ಧರ್ಮಗಳನ್ನು ಸಮಚಿತ್ತತೆ ಯಿಂದ ಕಂಡ ವಿಶ್ವಮಾನ್ಯತೆಯ ಯುಗ ಪುರುಷರಿವರು. ಸಮಾಜದ ತುಳಿತಕ್ಕೊಳಗಾಗಿ ಅಸ್ಪೃಶ್ಯತೆಯ ಕಾಳ್ಗಿಚ್ಚಿನಿಂದ ನೊಂದು ಬೆಂದ ನನ್ನಂತಹ ಅನೇಕರ ಒಡಲುಗಳಿಗೆ ಪ್ರೀತಿಯ ತೈಲವನಚ್ಚಿ, ಆಸರೆ ನೀಡಿ ನಮ್ಮ ಬದುಕು ಹಸನು ಮಾಡಿದ ಮಹಾಸಂತರಿವರು.



ಮಹಾಗುರುಗಳ ಕಂಗಳಲ್ಲಿದ್ದ ಆಕರ್ಷಕ ಹೊಳಪು, ಮೊಗದಲ್ಲಿದ್ದ ಮಂದಸ್ಮಿತ ನಗುವಿ ನಿಂದೊಡಗೂಡಿದ ತೇಜಸ್ಸು, ಹಣೆಯ ಮೇಲೆ ಕಾಣಸಿಗುವ ಭಸ್ಮಲೇಪಿತ ತಿಲಕ, ಕೊರಳಲ್ಲಿದ್ದ ರುದ್ರಾಕ್ಷಿಯ ಹಾರ, ಜ್ಞಾನೋದಯದ ಸಂಕೇತವಾಗಿ ಧರಿಸಿದ್ದ ಕಾಷಾಯ ವಸ್ತ್ರ, ಪಾದಗಳಲ್ಲಿದ್ದ ಮರದ ಹಾವುಗೆಗಳು(ಪಾದುಕೆಗಳು), ತಾಯ್ತನದ ಮಮತೆಯ ಪರಿಶುದ್ಧ ಅಂತಃಕರಣದ ಮನೋಮೂರ್ತಿಯನ್ನು ಕಂಡಾಗ ಸಾಕ್ಷಾತ್ ದೇವರ ಅಪರಾವತಾರದ ರೂಪದಲ್ಲಿ ಭಕ್ತರಿಗೆ ದರ್ಶನ ನೀಡುತ್ತಿದ್ದ ಧರ್ಮ ಸೂರ್ಯರಿವರು.

ಸಮ ಸಮಾಜದ ನಿರ್ಮಾಣದ ಕನಸು ಹೊತ್ತು ಅದನ್ನು ಸಾಕಾರಗೊಳಿಸುವಲ್ಲಿ ಶ್ರಮಿಸಿದ ಈ ಯುಗದ ಮಹಾ ಯೋಗಿಗಳಾದ ಪ್ರಾತಃಸ್ಮರಣೀಯ ಯುಗಯೋಗಿ ಪರಮ ಪೂಜ್ಯ ಜಗದ್ಗುರು ಪದ್ಮಭೂಷಣ ಶ್ರೀ ಡಾ. ಬಾಲಗಂಗಾಧರ ನಾಥ ಮಹಾಗುರುಗಳು..... ಇಡೀ ಜಗತ್ತಿಗೆ ಬೆಳಕು ನೀಡುವ ಸೂರ್ಯ ತನ್ನ ಪಥವನ್ನು ಬದಲಿಸುವ ಉತ್ತರಾಯಣದ ಪುಣ್ಯ ಕಾಲದ ಶುಭ ಸಂಕ್ರಾಂತಿಯ ಸನಿಹದ ದಿನವಾದ ಅಂದರೆ 2013ರ ಜ.13ರ ಇಳಿ ಹೊತ್ತಿನಲ್ಲಿಯೇ ಶ್ರೀ ಆದಿಚುಂಚನಗಿರಿಯ ಪುಣ್ಯಕ್ಷೇತ್ರದ ಸೂರ್ಯ ತಮ್ಮ ಇಹಲೋಕದ ಪಥ ಬದಲಿಸಿ ಶ್ರೀ ಕಾಲಭೈರವನೆಡೆಗೆ ಪಯಣಿಸಿದ ಅತ್ಯಂತ ದುಃಖಕರವಾದ ದಿನ. ಈ ದಿನ ನಮ್ಮಂತಹ ಅನೇಕರ ಬದುಕಿಗೆ ಕಾರ್ಗತ್ತಲು ಕವಿದಂತಾಯಿತು. ಅನಾಥಪ್ರಜ್ಞೆ ಕಾಡತೊಡಗಿತು. ವರ್ಣಿಸಲಾಗದ ದುಃಖದ ಕಣ್ಣೀರಿನಿಂದ ಕಣ್ಣುಗಳು ಮಂಜಾದವು. ಹೃದಯ ಭಾರವಾಯಿತು. ದುಃಖ ಉಮ್ಮಳಿಸಿ ಬಿಕ್ಕಿ ಬಿಕ್ಕಿ ಅತ್ತೆವು. ಮಹಾಗುರುಗಳನ್ನು ನೆನೆ ನೆನೆದು ಗೋಗರೆದೆವು. ಮನಸ್ಸು ಶೂನ್ಯದೆಡೆಗೆ ಹೊರಳಿತು. ಬಾರದ ಲೋಕಕ್ಕೆ ಪಯಣಿಸಿದ ನಮ್ಮ ಮಹಾಗುರುಗಳಿಗೆ ನಮ್ಮ ಆರ್ತನಾದ ಕೇಳಿಸಿತೋ ಇಲ್ಲವು ತಿಳಿಯದಾದೆವು.

ಆ ದಿನ ರಾತ್ರಿ ಒಂಭತ್ತು ಘಂಟೆಗೆ ಹಾಸನದಿಂದ ಬೆಂಗಳೂರಿಗೆ ಹೊರಟೆವು. ದಾರಿಯುದ್ದಕ್ಕೂ ಮಹಾಗುರುಗಳ ಸನಿಹದಲ್ಲಿದ್ದ ಚಿತ್ರಣವನ್ನೇ ಮೆಲುಕು ಹಾಕುತ್ತಾ, ಅವರ ಸಮಾಜಮುಖೀ ಕಾರ್ಯಗಳನ್ನು ಮನಸಾ ಹೊಗಳುತ್ತಾ, ಬೆಂಗಳೂರಿನ ವಿಜಯ ನಗರ ಮಠಕ್ಕೆ ಬಂದೆವು. ಮಠದ ಅಂಗಳದಲ್ಲಿ ಗಾಜಿನ ಪೆಟ್ಟಿಗೆಯಲ್ಲಿ ನಿಸ್ತೇಜವಾಗಿ ಪವಡಿಸಿದ್ದ ನನ್ನ ಬದುಕಿಗೆ ಜ್ಞಾನದ ಪ್ರಕಾಶವನ್ನು ಬಿತ್ತಿ ಬೆಳಗೆಂದು ಕರುಣೆಯೊಳು ಕಾರುಣ್ಯವ ಬೀರಿ, ಈ ಒಡಲೆಂಬ ಬಂಡಿಗೆ ನಿಲೆ ಬೆಲೆಯನಿಟ್ಟು ಹರಸಿ ಹಾರೈಸಿ ಬೆಳೆಸಿದ ನನ್ನ ಮಹಾಗುರುಗಳ ಅಂತಿಮ ದರ್ಶನ ಮಾಡಿದೆ. ಗುರುಗಳೆದುರಿನಲ್ಲಿ ಕಣ್ಮುಚ್ಚಿ ಕೈಮುಗಿದು ನನ್ನಂತಹ ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಕನಿಕರಿಸಿ ಕೈ ಹಿಡಿದು ನಡೆಸಿ ಎಲ್ಲಾ ಬಗೆಯ ಸುಖ ಸೌಭಾಗ್ಯಗಳನ್ನೂ ಕರುಣಿಸಿದ ಓ.. ಗುರುವೇ,,, ಈಗ ನಾನೇನು ನಿಮಗೆ ನೀಡಬಲ್ಲೆ ಎಂದು ಅಂತರಂಗಲ್ಲಿಯೇ ದುಃಖಿಸಿದೆ. ಈ ಸಂದರ್ಭದಲ್ಲಿ ನನ್ನ ಕಣ್ಣೀರನ್ನು ಬಿಟ್ಟರೆ ನಾನೇನೂ ಅರ್ಪಿಸಲಾಗಲಿಲ್ಲ. ಮಹಾ ಗುರುಗಳನ್ನೆ ಕಣ್ತುಂಬಿ ಕೊಂಡು ಭಾರವಾದ ಮನಸ್ಸಿನಿಂದಲೇ ಹಾಸನಕ್ಕೆ ಬಂದೆ.

ಇಹಲೋಕದಿಂದ ಮಹಾಗುರುಗಳು ಭೌತಿಕವಾಗಿ ನಮಗೆ ಕಾಣದಿರಬಹುದು. ಅವರು ಸಾಧಿಸಿರುವ, ನಿರ್ಮಿಸಿರುವ ಗುಡಿ ಗೋಪುರಗಳಲ್ಲಿ, ಶಾಲಾ-ಕಾಲೇಜುಗಳಲ್ಲಿ ಅನಾಥರ ಕಂಗಳಲ್ಲಿ, ದೀನದಲಿತರ ಸಾರ್ಥಕ ಬದುಕಿನಲ್ಲಿ, ಪರಮಪೂಜ್ಯ ಜಗದ್ಗುರು ಶ್ರೀ ಡಾ. ನಿರ್ಮಲಾನಂದನಾಥ ಮಹಾ ಸ್ವಾಮೀಜಿಯವರಲ್ಲಿ ಶ್ರೀ ಮಠದ ಎಲ್ಲಾ ಪರಮಪೂಜ್ಯರ ಆದರ್ಶ ಬದುಕಿನಲ್ಲಿ ಇಂದಿಗೂ ನಮ್ಮ ಮಹಾಗುರುಗಳನ್ನು ಅನುಕ್ಷಣವೂ ಕಾಣುತ್ತಾ.. ಹಾಸನದ ಶ್ರೀ ಆದಿಚುಂಚನಗಿರಿ ಮಠದ ಪೂಜ್ಯ ಶ್ರೀ ಶಂಭುನಾಥ ಸ್ವಾಮೀಜಿಯವರ ಆಶ್ರಯದಲ್ಲಿದ್ದುಕೊಂಡು ಅತ್ಯಂತ ಶ್ರದ್ಧೆ, ಬದ್ಧತೆ ಹಾಗೂ ಪ್ರಾಮಾಣಿಕತೆಯಿಂದ ನಿಸ್ವಾರ್ಥ ಸೇವೆ ಮಾಡುವ ಅವಕಾಶ ದೊರಕಿದ್ದು ನನ್ನ ಸೌಭಾಗ್ಯವೆಂದು ಭಾವಿಸುತ್ತೇನೆ. ಇಂದು ನಮ್ಮ ಮಹಾ ಗುರುಗಳ 13ನೇ ವರ್ಷದ ಪುಣ್ಯಾರಾಧನೆ ಇಡೀ ನಾಡಿನಾದ್ಯಂತ ಅತ್ಯಂತ ಶ್ರದ್ಧೆ ಭಕ್ತಿಯಿಂದ ನೇರವೇರುತ್ತಿದೆ. ಮಹಾಗುರುಗಳಿಗೆ ಮತ್ತೊಮ್ಮೆ ಈ ಧರೆಗೆ ಅವತರಿಸಿರೆಂದು ಪ್ರಾರ್ಥಿಸುತ್ತಾ ಇದುವರೆವಿಗೂ ನಾನು ಮಾಡಿರುವ ಸೇವೆಯನ್ನು ಒಪ್ಪಿಕೊಂಡು ಆಶೀರ್ವ ದಿಸಿದ ಮಹಾಗುರುಗಳಿಗೆ ಹಾಗೂ ಪರಮಪೂಜ್ಯರಿಗೆ ನನ್ನ ಸದ್ಭಕ್ತಿಯ ಮನಃಪೂರ್ವಕ ನಮನಗಳನ್ನು ಅರ್ಪಿಸುತ್ತೇನೆ.

**-ಹೆಚ್.ಕೆ. ಲಕ್ಷ್ಮಿನಾರಾಯಣ**
ಸಂಸ್ಕೃತ ಭಾಷಾ ಉಪನ್ಯಾಸಕ

## ದೇಶ ಸುತ್ತಿದರೆ ಏನಾಗುತ್ತೆ?



6ನೇ ತರಗತಿಯಲ್ಲಿ ಓದುತ್ತಿರುವ ಚಿಂಟುಗೆ ಮನೆಯಲ್ಲಿ ಕನ್ನಡ ಪಾಠ ನಡೆದಿತ್ತು. ಕನ್ನಡ ಮನೆಯ ಮಾತಾದ್ದರಿಂದ ಓದಲು ಬರೆಯಲು ಅವನಿಗೆ ಕಷ್ಟ ಏನಿರಲಿಲ್ಲ. ಆದರೆ ಗಾದೆ, ನುಡಿಗಟ್ಟುಗಳೆಂದರೆ ಗೊಂದಲ ಅವನಿಗೆ. ದೇಶ ಸುತ್ತು ಕೋಶ ಓದು ಗಾದೆಯನ್ನು ಅವನ ವಿವರಿಸಿ ಹೇಳುತ್ತಿದ್ದರು. ದೇಶ ಸುತ್ತಿದರೆ ಏನಾಗುತ್ತಪ್ಪಾ? ಎಂದು ತಂದೆ ಕೇಳಿದರೆ, ಟೇಬಲ್ ಸುತ್ತ ಸುತ್ತುತ್ತಿದ್ದ ಚಿಂಟು, ದೇಶ ಸುತ್ತಿದರೆ ಏನಾಗುತ್ತೆ? ಸುಸ್ತಾಗತ್ತೆ... ಎನ್ನಬೇಕೆ?.

-ಅಂಬಿಕಾ ಆರ್.

## ಸೇರಿಗೆ ಸವ್ವಾಸೇರು

ಗುಂಡೂರಾಯರು ಕುಖ್ಯಾತ ಲಾಯರು. ತಮ್ಮ ಕಕ್ಷಿದಾರರಿಂದ ಹೆಚ್ಚಿನ ಹಣ ಪೀಕುತ್ತಾರೆ ಎನ್ನುವುದಕ್ಕೆ ಅವರು ಫೇಮಸ್ಸು. ಒಮ್ಮೆ ತಮ್ಮ 30 ವರ್ಷದ ಮಗ ಹಠಾತ್ ಹೃದಯಾ ಘಾತದಿಂದ ಆಸ್ಪತ್ರೆ ಸೇರಿದ. 45 ದಿನಗಳ ಸಾವು ಬದುಕಿನ ಹೋರಾಟದ ನಂತರ ಮಗ ಗುಣಮುಖನಾದ. ಅದೇ ಖುಷಿಯಲ್ಲಿ ಗುಂಡೂರಾಯರು ಡಾಕ್ಟರ್ ಹತ್ತಿರ ಮಾತನಾಡುತ್ತಾ, ನನ್ನ ಮಗನ ಪ್ರಾಣ ಉಳಿಸಿದ್ದೀರಿ. ನಿಮ್ಮ ಋಣ ತೀರಿಸಲಾರೆ. ತಮ್ಮ ಫೀಸ್ ಎಷ್ಟು ಹೇಳಿ ಎಂದು ಕೇಳಿದರು. ಈ ಮೊದಲು ಅವರು ಮಗ ಗುಣಮುಖನಾಗದಿದ್ದರೆ ಕೇಸು ಜಡಿಯು ವುದಾಗಿ ವೈದ್ಯರಿಗೆ ಹೇಳಿದ್ದರು. ಅದನ್ನು ನೆನೆಸಿಕೊಂಡ ವೈದ್ಯರು, ನಿಮ್ಮ ಮಗನನ್ನು ಬದುಕಿಸುವ ನನ್ನ ಪ್ರಯತ್ನದಲ್ಲಿ ಸೋತಿದ್ದರೆ, ನನ್ನಿಂದ ಎಷ್ಟು ಹಣ ಪರಿಹಾರಕ್ಕಾಗಿ ದಾವೆ ಹೂಡುತ್ತಿದ್ದೀರಿ. ಹೇಳಿ? ಎಂದ. ಕನಿಷ್ಠ 10 ಕೋಟಿ ರೂಪಾಯಿಗೆ ದಾವೆ ಹಾಕುತ್ತಿದ್ದೆ ಎಂದರು. ವೈದ್ಯರು. ಹಾಗಾದ್ರೆ ಅದರ ಅರ್ಧದಷ್ಟು, ಅಂದರೆ ನನ್ನ ಫೀಸ್ 5 ಕೋಟಿ ರೂಪಾಯಿ ಎಂದರು. ಕ್ಷಣ ಗುಂಡೂರಾಯರ ಹೃದಯ ಬಡಿತವೇ ನಿಂತ ಹಾಗಾಯಿತು.

-ಆರ್. ಎಸ್.ಪ್ರಕಾಶ್

## ಭಾಷೆಯ ಅವಾಂತರ

ನಮ್ಮಜ್ಜಿ ಹೇಳಿದ ಘಟನೆಯಿದು ದೇವದುರ್ಗದ ನಮ್ಮ ಸೋದರತ್ತೆಗೆ ಅಂಧ್ರದ ಕರ್ನೂಲಿನ ಹುಡುಗ ಅಳಿಯನಾಗಿ ಬಂದಿದ್ದ. ಬೆಳಗೆದ್ದು ಅಂಗಳ ಕಸ ಬಳಿಯುತ್ತಿದ್ದ ನಮ್ಮಜ್ಜಿಯ ಮುಂದೆ ಬಂದು ನಿಂತ ಅಳಿಯ ಮಹಾಶಯ, ಅಮ್ಮ, ಬಗ್ಗು, ಬಗ್ಗು ಎನ್ನತೊಡಗಿದ ಏನೆಂದು ಅರಿಯದ ಅಜ್ಜಿ ಕೈಲಿರುವ ಕಸಬರಿಗೆಯನ್ನು ಕೆಳಹಾಕಿ. ಮಗಳನ್ನು ಕೂಗಿದಳು. ನೋಡಮ್ಮಾ ನಿನ್ನ ಗಂಡ ಬಂದು ಅವಾಗಿಂದ ಬಗ್ಗು ಬಗ್ಗು ಅಂತಿದ್ದಾನೆ. ಏನಿದು ಬೆಳಗೆದ್ದು ಅಪಸವ್ಯ. ಎಂದಾಗ, ಅಯ್ಯೋ ಅಮ್ಮಾ ಬಗ್ಗು ಅಂದರೆ ಇದ್ದಿಲು, ಹಲ್ಲುಜ್ಜಲು ಇದ್ದಿಲು ಕೇಳ್ತಿದ್ದಾರೆ ಎಂದಾಗ ಅಜ್ಜಿ ಸಹಜಸ್ಥಿತಿಗೆ ಬಂದಿದ್ದು.

-ವಿಜಯಭಾಸ್ಕರ್ ಅದಿತಿ

ನೇರ ಪ್ರಸಾರ ಕಾರ್ಯಕ್ರಮ!

ಎಫ್ ಎಂ ರೇಡಿಯೋ ಕೇಂದ್ರಕ್ಕೆ ಫೋನ್ ಮಾಡಿದ ಪಪ್ಪು ಇದು ಎಫ್.ಎಂ. ರೇಡಿಯೋ ತಾನೆ? ಎಂದ. ರೇಡಿಯೋ ಜಾಕಿ ಹೌದೆಂದ. ನನ್ನ ಮಾತು ಪೂರ್ತಿ ಪಟ್ಟಣಕ್ಕೆ ಕೇಳಿಸುವುದೆ? ಎಂದ. ಜಾಕಿ ಕೇಳಿಸುತ್ತದೆಯೆಂದ, ಮನೆಯಲ್ಲಿ ಎಫ್. ಎಂ. ಆಲಿಸುತ್ತಿರುವ ನನ್ನ ತಂಗಿಗೂ ಕೇಳಿಸುವುದೆ? ಈ ಬಾರಿ ರೇಡಿಯೋ ಜಾಕಿ ಹೌದೆಂದು ಕೊಂಚ ಅಸಮಾಧಾನದಿಂದಲೇ ಹೇಳಿದ. ಪಪ್ಪು ನಿರಾಳತೆಯ ನಿಟ್ಟುಸಿರು ಬಿಡುತ್ತಾ ಉಸುರಿದ, ಹಲೋ ಪಿಂಕಿ, ನಾನು ನಿನ್ನಣ್ಣ ಪಪ್ಪು... ಎಫ್. ಎಂ ನಲ್ಲಿ ನನ್ನ ಧ್ವನಿ ಕೇಳಿಸುತ್ತಿದ್ದರೆ ತಕ್ಷಣ ಮೋಟಾರ್ ಚಾಲೂ ಮಾಡು. ನಾನು ಮಹಡಿ ಮೇಲಿನ ಟಾಯ್ಲೆಟ್ ನಲ್ಲಿದ್ದೇನೆ ಮತ್ತು ನೀರು ಖಾಲಿಯಾಗಿದೆ. ನಿನ್ನ ಫೋನ್ ಕೂಡಾ ಸ್ವಿಚ್ ಆಫ್ ಆಗಿರುವ ಹಾಗಿದೆ... ರೇಡಿಯೋ ಜಾಕಿ ಆತನ ಸಮಯ ಪ್ರಜ್ಞೆಗೆ ಬೆರಗಾಗಿ ಹೋದ.

-ರಮಣ್ ಶೆಟ್ಟಿ ರೆಂಜಾಳ್

## ಬರಹಗಾರರ ಬಳಗ

ಮಾತು ಮುತ್ತಿನಂತಿರಬೇಕು ಬಲ್ಲವರ ನುಡಿ, ಮಾತೇ ಮಾಣಿಕ್ಯ, ಮಾತೇ ಮೃತ್ಯುವಿಗೂ ದಾರಿ, ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು. ಕೆಲವರ ಮಾತಿನ ವೈಖರಿ ಘಟಸರ್ಪದ ಘೋರ ವಿಷಕ್ಕಿಂತಲೂ ಮಿಗಿಲಂತೆ. ಮಾತುಮನೆ ಕೆಡಿಸಿತು ತೂತು ಒಲೆ ಕೆಡಿಸಿತು, ಎಲುಬಿಲ್ಲದ ನಾಲಿಗೆಯಲ್ಲಿ ಮಾತು ಹೇಗೆ ಬೇಕಾದರೂ ಸುರುಳಿ ಸುರುಳಿಯಾಗಿ ಬಿಚ್ಚಿಕೊಂಡು ರಿಂಗಣ ಹಾಕಬಹುದು. ಮಾತು ಚಂದವಾಗಿರಲಿ,ಸತ್ಯದ ಛಾಪೆಯಂತಿರಲಿ, ಮಿಥ್ಯ ಇಣುಕದಿರಲಿ. ಎಷ್ಟೋ ಸಂಬಂಧಗಳು ಈ ಮಾತಿನ ಧಾಟಿಯಿಂದ ಹಾಳಾದ್ದಿದೆ.ಇತ್ತೀಚೆಗೆ ವಿವಾಹ ಸಂಬಂಧಗಳು ಕೇವಲ ದೂರವಾಣಿ ಸಂಭಾಷಣೆಗಳಿಂದಾಗಿ ಮುರಿದು ಬೀಳುತ್ತಿದೆ. ಸಲಿಗೆಯೋ, ಸದರವೋ ಸಹ ಇರಬಹುದು. ಬಾಯಿ ಮಾತಿನಲ್ಲಿ ಬಡಾಯಿ ಬೇಡ. ಇದ್ದುದನ್ನು ಹೇಳಲು ಪ್ರಯತ್ನಿಸಬೇಕು. ಹೃದಯದಿಂದ ಮಾತು ಹೊಮ್ಮಲಿ. ಮಾತು ಪ್ರಿಯವಾಗಿದ್ದು, ಇತರರಿಗೆ ಮನಸ್ಸು ಹಿಂಡುವಂತಿರದೆ ಮನವರಳುವಂತಿರಲಿ. ಕೆಲವರಿಗೆ ಚುಚ್ಚಿ, ಹಂಗಿಸಿ ಮಾತನಾಡದಿದ್ದರೆ ಉಂಡ ಅನ್ನ ಕರಗದಂತೆ, ಹಿರಿಯರು ಹೇಳಿದ್ದನ್ನು ಕೇಳಿದ್ದೇನೆ. ಅವರಿಗೆ ಅದರಲ್ಲಿ ಏನು ತೃಪ್ತಿಯೋ, ಆ ದೇವರಿಗೇ ಗೊತ್ತು. ನಯವಾದ ನಾಲಿಗೆ ಯೊಳು ಪ್ರಾಮಾಣಿಕ ಮಾತುಗಳು ಹೊಮ್ಮಲಿ.

-ರತ್ನಾ ಕೆ.ಭಟ್ ತಲಂಜೇರಿ

## ಕವನ

ಯಾವುದಕ್ಕಾಗಿದ್ವೇಷಿಸುತ್ತಾರೋ ಅವರಬಗ್ಗೆಯೆ ಅನುಕಂಪದಿಂದ ಇರೋಣ. ಯಾರು ನಮ್ಮೊಂದಿಗೆ ನಡೆಯು ತ್ತಾರೋ ಅವರೊಡನೆ ಪ್ರೀತಿಯಿಂದ ಇರೋಣ

ಜೀವನವೆಂದರೆ ಏಳು ಸುತ್ತಿನೊ ಳಗಿನ ಕಂದಕದ ಕೋಟೆಯೆಂದೇ ಹೇಳುವಿಯಾ

ಸೋತವರು ಹತ್ತಿರವಿದ್ದರೆ ಅವ ರನ್ನು ಕೈ ಹಿಡಿಯುತ್ತಲೆ ಕರುಣೆಯಿಂದ ಇರೋಣ. ಬರೆದುದೆಲ್ಲವನ್ನು ಹರಿದು ರದ್ದಿ ಯೊಳಗೆ ಬಿಸಾಡುತ್ತಿದ್ದರೆ ಸಾಹಿತ್ಯ ಯಾಕೆ ಬೇಕು

ಮಾತಿನೊಳಗೆ ಸೌಧವನ್ನು ಕಟ್ಟುವ ವರಜೊತೆಗೆ ಹುಷಾರಿಯಿಂದ ಇರೋಣ.

ಒಲವೆಂದರೆ ನಾವು ನಮ್ಮೊಳಗೆ ತಿಳಿ ದಷ್ಟುಸುಲಭದವಸ್ತುವಲ್ಲವೋ ಅರಿಯು

ಪ್ರೇಮದೊಳಗೂ ಹಲವು ಕಣ್ಣಿದೆ ಯೆನ್ನುವವರ ಒಟ್ಟಿಗೇ ಹಿಂದಿನಿಂದ ಇರೋಣ. ಪ್ರತಿಯೊಂದುಮರದಲ್ಲೂ ಹೂವುಗಳು ಬಿಟ್ಟಾಗಲಷ್ಟೇ ಪ್ರೀತಿಯ ರಳುತ್ತದೆ ಈಶಾ. ಯೌವನದಲ್ಲೂ ಕಡಿವಾಣವಿದೆಯೆ ನ್ನುವವರ ಹಿಂದೆಯೇದೂರದಿಂದ ಇರೋಣ


-ಹಾ ಮ ಸತೀಶ ಬೆಂಗಳೂರು

## ಐಲುದೊರೆಯ ಅಧಿಕಪ್ರಸಂಗ



ಕೇಡುಗಾಲದಲ್ಲಿ ನಾಯಿ ಮೊಟ್ಟೆ ಇಡ್ತಂತೆ ಎಂಬುದೊಂದು ಮಾತು ನಮ್ಮ ಜನರ ನಡುವೆ ಚಾಲ್ತಿಯಲ್ಲಿದೆ. ಅಮೇರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಇತ್ತೀಚಿನ ಒಂದಷ್ಟು ವರಸೆ ಗಳನ್ನು ನೋಡಿದಾಗ ಈ ಮಾತು ಯಾರಿಗಾದರೂ ನೆನಪಾದರೆ ಅದೇನೂ ಅಚ್ಚರಿಯಲ್ಲ. ತನ್ನನ್ನು ಚುನಾಯಿಸಿದ ಜನರ ಹಿತಾಸಕ್ತಿಯನ್ನು ಕಾಪಾಡಬೇಕಾದ್ದು ಪ್ರತಿಯೊಬ್ಬ ಜನನಾಯಕನ ಆದ್ಯ ಕರ್ತವ್ಯ ಆಗಬೇಕು ಎಂಬುದೇನೋ ನಿಜ. ಆದರೆ ಜನ ಕಲ್ಯಾಣದ ಹುಸಿ ಹಣೆಪಟ್ಟಿಯನ್ನು ಲಗತ್ತಿಸಿಕೊಂಡು, ಕುತ್ಸಿಕ ಚಿಂತನೆಗಳ ನೆರವೇರಿಕೆಗೆ ಆತ ಇಳಿದಿದ್ದೇ ಆದಲ್ಲಿ, ಅದನ್ನು ಸರ್ವಥಾ ಸ್ವೀಕರಿಸಲಾಗದು. ಪ್ರಸ್ತುತ ಟ್ರಂಪ್ ಮಹಾಶಯರು ತೊಡಗಿಸಿಕೊಂಡಿರುವುದು ಇಂಥ ಸ್ವೀಕಾ ರ್ಹವಲ್ಲದ ಕಾರ್ಯಗಳಲ್ಲೇ. ಅಮೇರಿಕಕ್ಕೆ ತೆರಳುವವರು ಪಡೆಯಬೇಕಾಗುವ ವೀಸಾದ ವಾರ್ಷಿಕ ಶುಲ್ಕವನ್ನು ಅತಿರೇಕದ ಮಟ್ಟಕ್ಕೆ ಏರಿಸಿ ಹಲವರ ಹುಬ್ಬೇರಿಸಿದ್ದ ಟ್ರಂಪ್, ಕೆಲ ತಿಂಗಳ ಹಿಂದೆ ಸುಂಕ ಸಮರಕ್ಕೂ ಮುಂದಾಗಿದ್ದನ್ನು ಜಗತ್ತೇ ಕಂಡಿದೆ. ಅಮೇರಿಕಾಕ್ಕೆ ಆಮದಾಗುವ ಚೀನಾ ಮುಂತಾದ ಅನ್ಯದೇಶಗಳ ಸರಕುಗಳ ಮೇಲೆ ಅತಿರೇಕದ ಸುಂಕ ಹೇರಿ ಕೇಕೆ ಹಾಕಿದ ಟ್ರಂಪ್, ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳುತ್ತಿದೆ ಎಂಬ ಕಾರಣವನ್ನು ಮುಂದು ಮಾಡಿ ಭಾರತದ ಉತ್ಪನ್ನಗಳಿಗೂ ಇದೇ ಕ್ರಮವನ್ನು ಅನ್ವಯಿಸಿದ್ದರು. ಅದಕ್ಕೆ ಭಾರತ ಸೊಪ್ಪು ಹಾಕಲಿಲ್ಲ. ಈಗ ಸರದಿ ಸುಂಕವನ್ನು ಬರೋಬರಿ ಶೇ. 500ರ ಮಟ್ಟಕ್ಕೆ ಏರಿಸುವ, ತನ್ಮೂಲಕ ಭಾರತದ ಮೇಲೆ ವಾಣಿಜ್ಯಕ ನಿರ್ಬಂಧ ಹೇರುವ ದುಸ್ಸಾಹಸಕ್ಕೆ ಟ್ರಂಪ್ ಕೈಹಾಕಿದ್ದಾರೆ. ಈ ಸಂಬಂಧದ ವಿಧೇಯಕಕ್ಕೆ ಸಹಿ ಹಾಕಿರುವ ಅವರು ಸದ್ಯದಲ್ಲೇ ಅಮೇರಿಕಾದ ಸಂಸತ್ತಿನಲ್ಲಿ ಅದನ್ನು ಮಂಡಿಸಲಿದ್ದಾರೆ. ಅದು ಅಂಗೀಕಾರಗೊಳ್ಳುತ್ತೋ ಬಿಡುತ್ತದೋ ಎಂಬುದನ್ನು ಕಾಲಕ್ಕೆ ಬಿಡೋಣ. ಆದರೆ ಇಂಥ ಐಲುದೊರೆಗಳು ಸಿಂಹಾಸನದಲ್ಲಿ ಕೂತಿದ್ದರೆ ಮಿಕ್ಕವರು ಎಷ್ಟೊಂದು ಮುಜುಗರ ಅನುಭವಿಸಬೇಕಾಗುತ್ತದೆಯಲ್ಲಾ? ಎಂಬುದು ಸದ್ಯದ ಪ್ರಶ್ನೆ. ಇದಕ್ಕೆ ಅಮೇ ರಿಕನ್ನರ ಬಳಿಯೂ ಉತ್ತರವಿದ್ದಂತಿಲ್ಲ!

## ಬರಹಗಾರರ ಬಳಗ




**ರಂಜು** ಅಂಗಡಿಗೆ ಹೋಗಿ 2026ರ ಕ್ಯಾಲೆಂಡರ್‌ಗಳ ಆಯ್ಕೆ ಮಾಡುತ್ತಿದ್ದ ತುಂಬಾ ಸುಂದರವಾಗಿ ಕಾಣುವ ವಿನೂತನವಾಗಿರುವ ಎಲ್ಲಾ ಮಾಹಿತಿಗಳನ್ನು ಹೊತ್ತಿರುವ ಕ್ಯಾಲೆಂಡರನ್ನು ಆಯ್ಕೆ ಮಾಡಿಯೂ ಮನೆಗೆ ತಂದಿದ್ದ. ಕಣ್ಣಿಗೆ ಕಾಣುವ ಹಾಗೆ ಗೋಡೆಯ ಮೇಲೆ ನೇತು ಹಾಕಿ ಪ್ರತಿ ದಿನಾಂಕಗಳ ಮೇಲೆ ತಾನು ಸಾಧಿಸಬೇಕಾದನ್ನ ಬರೆದಿಡುತ್ತಾ ಹೋಗ್ತಾ ಇದ್ದ. ವಾರಕ್ಕೊಂದು ತಿಂಗಳಿಗೊಂದು ವರ್ಷದಂತೆ ಆಗಬೇಕಾಗಿರುವ ಎಲ್ಲವನ್ನ ದಾಖಲಿಸಿ ಸಾಧನೆಗೆ ದಿನಗಳನ್ನ ದಾಖಲಿಸ್ತಾ ಹೋದ. ಇವನ ಹುಚ್ಚಾಟವನ್ನು ಕಂಡು ಅಮ್ಮ ಪಕ್ಕದಲ್ಲಿ ಕುಳಿತು ಮಾತ ನಾಡುವುದ್ದಕ್ಕೆ ಪ್ರಾರಂಭ ಮಾಡಿದ್ರು. ನೋಡು ಹೊಸ ವರ್ಷದ ಕ್ಯಾಲೆಂಡರ್‌ಗಳು ಬದಲಾ ಗ್ತಾನೇ ಇರ್ತವೆ. ಆದರೆ ಈ ಹೊಸ ವರ್ಷದ ಕ್ಯಾಲೆಂಡರ್ ಬಂದ ಕಾರಣಕ್ಕೆ ನೀನು ಬದಲಾ ಗುವುದಲ್ಲ ಮನೆಯ ಪರಿಸ್ಥಿತಿ ನೋಡು, ನಿನ್ನ ಜವಾಬ್ದಾರಿಗಳನ್ನು ನೋಡು ನಿನ್ನ ಕನಸುಗಳನ್ನು ಕಣ್ಣ ಮುಂದೆ ಆಗಬೇಕಾಗಿರುವುದನ್ನ ಯೋಚಿಸಿಕೋ ಆಗ ನೀನು ಬದಲಾಗಬೇಕು. ಹೊಸ ವರ್ಷದ ಕ್ಯಾಲೆಂಡರ್‌ಗಳ ಮೇಲೆ ದಿನಾಂಕಗಳನ್ನು ಬರೆದು ಸಾಧನೆ ಗಳನ್ನು ಬರೆದು ಕನಸುಗಳನ್ನು ಬರೆದು ಕೆಲಸ ಮಾಡಿದರೆ ಸಾಕಾಗುವುದಿಲ್ಲ.ನಿನ್ನ ಮನಸ್ಸಿ ಗೆ ನಿನ್ನ ಮನೆಯ ಪರಿಸ್ಥಿತಿಗೆ ಮತ್ತು ಜವಾಬ್ದಾರಿಗೆ ಎಲ್ಲಕ್ಕೂ ಹೊಂದಾಣಿಕೆಯಾಗುವ ದಿನ ಸಿಕ್ಕಿದಾಗ ಮಾತ್ರ ನೀನು ಬದಲಾಗುತ್ತಿ.ಅದು ನಿನ್ನ ವೈಯಕ್ತಿಕ ವಿವೇಚನೆಗೆ ಬಿಟ್ಟದ್ದು..ಅಮ್ಮನ ಮಾತು ಕೇಳಿದರೂ ಅವನ ಹುಚ್ಚಾಟ ಮುಗಿದಿರಲಿಲ್ಲ.

- ಧೀರಜ್ ಬೆಳ್ಳಾರೆ

## ಕ್ರಿಪ್ಟೋಕರೆನ್ಸಿ ಕ್ಷೇತ್ರದ ಮೋಸಗಳು



**ಯಾ**ವುದೇ ಹೊಸತು ಬಂದ ಕೂಡಲೇ ಕೆಲವರು ಅದಕ್ಕೆ ಹಾರುವುದು ಸಹಜ. ಪ್ರಪಂಚವೆಲ್ಲ ಮುಂದಕ್ಕೆ ಹೋಗುತ್ತದೆ, ನಾನು ಹಿಂದೆ ಉಳಿದುಬಿಡುತ್ತೇನೆ ಎಂಬ ಭಯವು ಜನರನ್ನು ಹಾಗೆ ಮಾಡಿಸುತ್ತದೆ. ಇದು ತಂತ್ರಜ್ಞಾನ ಇರಲಿ ಹೊಸ ಹಣಕಾಸಿನ ವ್ಯವಹಾರವಿರಲಿ ಎಲ್ಲೆಡೆ ನಡೆಯುತ್ತಿದೆ. ಹಣಕಾಸು ಮತ್ತು ತಂತ್ರಜ್ಞಾನ ಒಟ್ಟು ಸೇರಿದರೆ? ಅದಕ್ಕೆ ಉತ್ತಮ ಉದಾಹರಣೆ ಗೂಢನಾಣ್ಯ. ಎಲ್ಲಿ ಮನುಷ್ಯರಿರುತ್ತಾರೋ ಅಲ್ಲೆಲ್ಲ ಒಳ್ಳೆಯದು ಮತ್ತು ಕೆಟ್ಟದ್ದು ಇರುತ್ತವೆ. ಎಲ್ಲಿ ತನಕ ಮೋಸ ಹೋಗುವವರಿರುತ್ತಾರೋ ಅಲ್ಲಿ ತನಕ ಮೋಸ ಮಾಡುವವರಿರುತ್ತಾರೆ. ಈ ಲೇಖನದಲ್ಲಿ ಗೂಢನಾಣ್ಯದ ಕ್ಷೇತ್ರದಲ್ಲಿ ನಡೆಯುತ್ತಿರುವ ವಂಚನೆಗಳ ಬಗ್ಗೆ ತಿಳಿದುಕೊಳ್ಳೋಣ. ಗೂಢನಾಣ್ಯ ಅರ್ಥಾತ್ ಕ್ರಿಪ್ಟೋಕರೆನ್ಸಿ ಎಂದರೆ ಬ್ಲಾಕ್‌ಚೈನ್ ತಂತ್ರಜ್ಞಾನವನ್ನು ಬಳಸಿ ನಡೆಯುವ ಒಂದು ವಿಕೇಂದ್ರಿತ ವಿತ್ತ ವ್ಯವಸ್ಥೆ. ಇದು ಡಿಜಿಟಲ್ ಹಣ. ಇದಕ್ಕೆ ಮುದ್ರಿತ ನೋಟು, ಭೌತಿಕ ನಾಣ್ಯಗಳು ಇಲ್ಲ. ಈ ಹಣವನ್ನು ಇಟ್ಟುಕೊಳ್ಳಲು ಒಂದು ಡಿಜಿಟಲ್ ವ್ಯಾಲೆಟ್ (ಪರ್ಸ್ ಎನ್ನಬಹುದು) ಇರುತ್ತದೆ. ಡಿಜಿಟಲ್ ಹಣವನ್ನು ಒಂದು ವ್ಯಾಲೆಟ್‌ನಿಂದ ಇನ್ನೊಂದಕ್ಕೆ ಅಂತರ ಜಾಲದ ಮೂಲಕ ವರ್ಗಾಯಿಸಲಾಗುತ್ತದೆ. ಅದರ ಬೆಲೆ ಯನ್ನೂ ವರ್ಗಾಯಿಸಲಾಗುತ್ತದೆ. ಈ ಎಲ್ಲ ವ್ಯವಹಾರ ಗಳೂ ಅಂತರಜಾಲದ ಮೂಲಕವೇ ನಡೆಯುತ್ತದೆ. ತುಂಬ ಜನಪ್ರಿಯವಾದ ಗೂಢನಾಣ್ಯ ಎಂದರೆ ಬಿಟ್‌ಕಾಯಿನ್. ಒಮ್ಮೆ ಇದರ ಬೆಲೆ ಒಂದು ಬಿಟ್‌ಕಾಯಿನ್‌ಗೆ 52 ಲಕ್ಷ ರೂ. ತನಕ ಹೋಗಿತ್ತು. ಈಗಿನ ಬೆಲೆ ಸುಮಾರು 15 ಲಕ್ಷ ರೂ. ಅಂದರೆ ಬಿಟ್‌ಕಾಯಿನ್‌ಗೆ ಹಣ ಹಾಕಿದ ವರಿಗೆ ಭರ್ಜರಿ ನಷ್ಟ. ಇದನ್ನು ಮೋಸ, ವಂಚನೆ ಎನ್ನುವಂತಿಲ್ಲ. ಶೇರು ಮಾರುಕಟ್ಟೆ ಕೂಡ ಇದೇ ರೀತಿ ಮೇಲೆ ಕೆಳಗೆ ಹೋಗುತ್ತಿರುತ್ತದೆ. ಅದರಲ್ಲಿ ಹಣ ಹಾಕುವವರು ಈ ವಿಷಯ ಗೊತ್ತಿದ್ದೇ ಹಾಕಿರುತ್ತಾರೆ. ಆದರೆ ಗೂಢನಾಣ್ಯದ ಲೋಕದಲ್ಲಿ ಹಲವು ರೀತಿಯ ಮೋಸದ ವಂಚನೆಗಳು ನಡೆಯುತ್ತಿವೆ. ಅವು ಯಾವುವು ಎಂದು ನೋಡೋಣ.

**ಮೋಸದ ಕಿರುತಂತ್ರಾಂಶಗಳು (ಆಪ್)**

ಗೂಢನಾಣ್ಯಗಳ ವ್ಯವಹಾರಕ್ಕೆ ಹಲವು ಜಾಲತಾಣಗಳು ಮತ್ತು ಆಪ್‌ಗಳಿವೆ. ಎಲ್ಲಾ ವಿಷಯಗಳಲ್ಲಿರುವಂತೆ ಇಲ್ಲೂ ಸಾಚಾ ಮತ್ತು ಮೋಸದ ಆಪ್‌ಗಳಿವೆ. ಈ ಮೋಸದ ನಕಲಿ ಆಪ್‌ಗಳೂ ಇತರೆ ಸಾಚಾ ಆಪ್‌ಗಳಂತೆಯೇ ಇರುತ್ತವೆ. ಅವುಗಳಲ್ಲೂ ಸಾಚಾ ಆಪ್‌ಗಳಂತೆ ಗೂಢನಾಣ್ಯಗಳನ್ನು ಇಟ್ಟುಕೊಳ್ಳಲು ವ್ಯಾಲೆಟ್ ಇರುತ್ತದೆ. ಈ ವ್ಯಾಲೆಟ್ ಅಂದರೆ ಡಿಜಿಟಲ್ ಪರ್ಸ್ ಎನ್ನಬಹುದು. ಗೂಢನಾಣ್ಯ ಎಂಬುದು ಒಂದು ಉದ್ದದ, ಬರಿಗಣ್ಣಿಗೆ ಅಸಂಬದ್ಧ ಎಂದು ಅನ್ನಿಸುವಂತಹ, ಪಠ್ಯಗಳ ಸರಪಣಿಯಾಗಿರುತ್ತದೆ. ಗೂಢನಾಣ್ಯದ ವ್ಯವಹಾರದಲ್ಲಿ ಬಳಸುವ ಪ್ರತಿ ವ್ಯಾಲೆಟ್‌ಗೂ ಒಂದು ಡಿಜಿಟಲ್ ವಿಳಾಸವಿರುತ್ತದೆ. ಆಪ್‌ಗಳಲ್ಲಿ ಬಳಕೆಯಾಗುವುದು ಆನ್‌ಲೈನ್ ವ್ಯಾಲೆಟ್. ಈ ವ್ಯಾಲೆಟ್‌ನಲ್ಲಿ ನೀವು ನಿಮ್ಮ ಗೂಢ ನಾಣ್ಯವನ್ನು ಸಂಗ್ರಹಿಸಿ ಇಡಬೇಕು. ಬೇಕಿದ್ದಾಗ ಮಾರಾಟ ಮಾಡಬಹುದು. ನಕಲಿ ಆಪ್‌ಗಳು ಈ ರೀತಿ ಹಣ ಇಟ್ಟುಕೊಂಡು ಒಂದು ದಿನ ಇದ್ದಕ್ಕಿದ್ದಂತೆ ನಾಪತ್ತೆಯಾಗುತ್ತವೆ. ಅದರಲ್ಲಿ ಇಟ್ಟವರ ಹಣ ಮಂಗಮಾಯ.

**ಫಿಶಿಂಗ್ ವಂಚನೆ**

ಅಂತರಜಾಲದ ಮೂಲಕ ಜನರನ್ನು ಸೆಳೆದು ಅವರಿಂದ ಗೌಪ್ಯ ಮಾಹಿತಿಗಳನ್ನು ಪಡೆದು ಕೊಳ್ಳುವುದಕ್ಕೆ ಫಿಶಿಂಗ್ ಎನ್ನುತ್ತಾರೆ. ಇದು ಸಾಮಾನ್ಯವಾಗಿ ಇಮ್ಮೈಲ್ ಅಥವಾ ವಾಟ್ಸ್ ಆಪ್ ಇತ್ಯಾದಿ ಸಂದೇಶದ ಮೂಲಕ ನಡೆಯುತ್ತದೆ. ಬಂದ ಸಂದೇಶದಲ್ಲಿ ಯಾವುದೋ ಕಾರಣ ನೀಡಿ ಹೆಚ್ಚಿನ ಮಾಹಿತಿಗೆ ಇಲ್ಲಿ ಕ್ಲಿಕ್ ಮಾಡಿ ಎಂದಿರುತ್ತದೆ. ಉದಾಹರಣೆಗೆ ನಿಮ್ಮ ಗೂಢನಾಣ್ಯ ವ್ಯವಹಾರದ ವ್ಯಾಲೆಟ್‌ನ್ನು ಇನ್ನೊಮ್ಮೆ ಖಾತರಿಪಡಿಸಿಕೊಳ್ಳಲು ಇಲ್ಲಿ ಕ್ಲಿಕ್ ಮಾಡಿ ಎಂದಿರುತ್ತದೆ. ಅಲ್ಲಿ ಕ್ಲಿಕ್ ಮಾಡಿದಾಗ ಅದು ನಿಮ್ಮ ಲಾಗಿನ್, ಪಾಸ್‌ವರ್ಡ್ ಕೇಳುತ್ತದೆ. ಅಲ್ಲಿ ಅವನ್ನು ನೀಡಿ ದಿರೋ ಅಲ್ಲಿಗೆ ಮುಗಿಯಿತು. ನಿಮ್ಮ ಹಣವನ್ನು ಅವರು ತಮ್ಮ ಖಾತೆಗೆ ವರ್ಗಾಯಿಸಿಕೊಳ್ಳುತ್ತಾರೆ. ಇದು ತುಂಬ ಸಾಮಾನ್ಯವಾದ ವಂಚನೆ. ಆದುದರಿಂದ ಅನುಮಾನಾಸ್ಪವಾದ ಆಪ್ ಅಥವಾ ಜಾಲತಾಣಗಳಲ್ಲಿ ನಿಮ್ಮ ಲಾಗಿನ್ ಪಾಸ್‌ವರ್ಡ್ ನೀಡಬೇಡಿ.

**ಡಿಜಿಟಲ್ ಆಟ ಮತ್ತು ಸಂಗ್ರಹಗಳು**

ಆನ್‌ಲೈನ್ ಆಟಗಳನ್ನು ಆಡುವವರಿಗೆ ಆಟದಲ್ಲಿಯ ಹಂತಗಳನ್ನು ದಾಟುವ ಅಂದರೆ ಹಂತ ಗಳನ್ನು ಗೆಲ್ಲುವ ಅತೀವ ಉತ್ಕಟತೆ ಇರುತ್ತದೆ. ಆಟದ ಪ್ರತಿ ಹಂತದಲ್ಲೂ ಏನೋ ಬಹುಮಾನ ದೊರೆಯುತ್ತದೆ. ಅವುಗಳನ್ನು ತಮ್ಮಂತೆಯೇ ಆಟದ ಹುಚ್ಚಿರುವವರಿಗೆ ತೋರಿಸಿ ಹೆಮ್ಮೆ ಪಟ್ಟು ಕೊಳ್ಳುವ ಇರಾದೆ ಇರುತ್ತದೆ. ಅಂತಹವರನ್ನು ವಂಚಕರು ಆಮಿಷಗಳ ಮೂಲಕ ಸೆಳೆಯುತ್ತಾರೆ. ಯಾವುದೋ ಆಟದ ಯಾವುದೋ ಟ್ರೋಫಿಯನ್ನು ಆಮಿಷವಾಗಿ ತೋರಿಸುತ್ತಾರೆ. ಅದು ಬೇಕಿದ್ದರೆ ಇಂತಿಷ್ಟು ಬಿಟ್‌ಕಾಯಿನ್ ಕೊಡಬೇಕೆನ್ನುತ್ತಾರೆ. ಇದರ ಬಲೆಗೆ ಬಿದ್ದ ಕೆಲವರು ಗೂಢ ನಾಣ್ಯಗಳ ಮೂಲಕ ಹಣ ನೀಡಿ ಮೋಸ ಹೋಗುತ್ತಾರೆ.

**ಹೊಸ ಹೊಸ ಗೂಢನಾಣ್ಯಗಳು**

ಗೂಢ ನಾಣ್ಯಗಳು ಬ್ಲಾಕ್‌ಚೈನ್ ಎಂಬ ತಂತ್ರಜ್ಞಾನವನ್ನು ಬಳಸುತ್ತವೆ. ಇವೇ ಮಾದರಿಯಲ್ಲಿ ಇನ್ನೂ ಹಲವಾರಿವೆ. ಈ ತಂತ್ರಜ್ಞಾನ ಹೇಗಿದೆ ಎಂದರೆ ಯಾರು ಬೇಕಾದರೂ ತಮ್ಮದೇ ಆದ ಗೂಢನಾಣ್ಯ ಪ್ರಾರಂಭಿಸಬಹುದು. ಯಾವುದೇ ಕ್ಷೇತ್ರದಲ್ಲಿ ಮೊದಲು ನುಗ್ಗಿದವರಿಗೆ ಲಾಭ ಜಾಸ್ತಿ. ಇದೇ ತತ್ವವನ್ನು ಬಳಸಿ ಜನರನ್ನು ಸೆಳೆಯುತ್ತಾರೆ. ತಮ್ಮದೇ ಆದ ಹೊಚ್ಚ ಹೊಸ ಗೂಢ ನಾಣ್ಯ ಇದೆ. ಇದನ್ನು ಪ್ರಾರಂಭದಲ್ಲಿ ಅತಿ ಕಡಿಮೆ ಬೆಲೆಗೆ ನೀಡುತ್ತಿದ್ದೇವೆ. ನಂತರ ಬೆಲೆ ಜಾಸ್ತಿ ಯಾಗುತ್ತದೆ ಎಂದೆಲ್ಲ ನಂಬಿಸುತ್ತಾರೆ. ನಂಬಿ ಹಣ ಹಾಕಿದವರಲ್ಲಿ ಬಹುತೇಕ ಮಂದಿ ಹಣ ಕಳೆದುಕೊಂಡಿದ್ದಾರೆ. ಯಾಕೆಂದರೆ ಈ ಗೂಢ ನಾಣ್ಯಗಳಲ್ಲಿ ಬಹುತೇಕ ಮೋಸ. ಅವುಗಳು ಯಾವುದೇ ಬ್ಲಾಕ್‌ಚೈನ್ ಅಥವಾ ಅಂತಹುದೇ ತಂತ್ರಜ್ಞಾನವನ್ನು ಬಳಸುತ್ತಿಲ್ಲ. ಅವುಗಳಿಗೆ ಯಾವುದೇ ಅಧಿಕೃತ ಸ್ವೀಕೃತಿಯಿಲ್ಲ. ಅವುಗಳನ್ನು ಮಾರಲು ಆಗುವುದಿಲ್ಲ. ಅಂದರೆ ಹಾಕಿದ ಹಣ ಹೋಯಿತು. ಆದುದರಿಂದ ಹೆಸರೇ ಕೇಳದ ಗೂಢ ನಾಣ್ಯಗಳನ್ನು ಕೊಳ್ಳಲು ಹೋಗದಿರುವದೇ ಉತ್ತಮ.

ನೆಟ್‌ವರ್ಕ್ ಮಾರ್ಕೆಟಿಂಗ್

ನೆಟ್‌ವರ್ಕ್ ಮಾರ್ಕೆಟಿಂಗ್ ಕೇಳಿರಬಹುದು. ನೀವು ಮೊದಲು ಸ್ವಲ್ಪ ಹಣ ನೀಡಿ ಸದಸ್ಯ ರಾಗಬೇಕು. ನಂತರ 4, 8, 16 ಇತ್ಯಾದಿ ಸಂಖ್ಯೆಯಲ್ಲಿ ಸದಸ್ಯರನ್ನು ಮಾಡಬೇಕು. ಅವರು ನೀಡಿದ ಸದಸ್ಯತ್ವದಲ್ಲಿ ನಿಮಗೆ ಪಾಲು ಇರುತ್ತದೆ. ನಿಮಗೆ ಒಂದು ಕಿಟ್ ನಿಡಲಾಗುತ್ತದೆ. ಅದರಲ್ಲಿರುವ ವಸ್ತುಗಳನ್ನು ಮಾರಿದರೆ ಅದರ ಲಾಭ ನಿಮಗೆ. ಈಗ ಈ ಕಿಟ್‌ನಲ್ಲಿರುವ ವಸ್ತು ಭೌತಿಕ ವಸ್ತು ಆಗಿರದೆ ಬಿಟ್‌ಕಾಯಿನ್ ಮಾದರಿಯ ಯಾವುದೋ ಗೂಢನಾಣ್ಯ ಆಗಿದೆ ಎಂದಿಟ್ಟುಕೊಳ್ಳಿ. ಇದುವೇ ಗೂಢನಾಣ್ಯಗಳ ನೆಟ್‌ವರ್ಕ್ ಮಾರ್ಕೆಟಿಂಗ್. ಇಂದು ಒಂದು ರೀತಿಯ ಪಿರಮಿಡ್‌ನಂತೆ. ಅದರ ಕೆಳಭಾಗದಲ್ಲಿದ್ದವರು ಲಾಭ ಮಾಡುತ್ತಾರೆ. ಮೇಲುಭಾಗದಲ್ಲಿರುವವರು ಹಣ ಕಳೆದುಕೊಳ್ಳುತ್ತಾರೆ. ಇದರ ಕಡೆಗೆ ಗಮನ ಕೊಡದಿರುವುದೇ ಉತ್ತಮ.

**-ಡಾ. ಯು.ಬಿ.ಪವನಜ**



# ತಮಿಳುನಾಡಿನಲ್ಲಿ ಅಧಿಕಾರ ಹಂಚಿಕೆಗೆ ಕಾಂಗ್ರೆಸ್ ಪಟ್ಟು: ಡಿಎಂಕೆ ನಕಾರ

• ಪ್ರಜೋದಯ ವರದಿ

**ದಿಂಡಿಗಲ್ (ತಮಿಳುನಾಡು):** ರಾಜ್ಯದಲ್ಲಿ ಡಿಎಂಕೆ ಮಿತ್ರಪಕ್ಷಗಳೊಂದಿಗೆ ಅಧಿಕಾರ ಹಂಚಿಕೊಳ್ಳಬೇಕೆಂಬ ಕಾಂಗ್ರೆಸ್ ಬೇಡಿಕೆಯನ್ನು ಡಿಎಂಕೆ ಭಾನುವಾರ ತಿರಸ್ಕರಿಸಿದೆ.

ತಮಿಳುನಾಡಿನಲ್ಲಿ ಮೈತ್ರಿ ಸರ್ಕಾರಕ್ಕೆ ಯಾವುದೇ ಅವಕಾಶವಿಲ್ಲ, ಮಿತ್ರ ಪಕ್ಷಗಳೊಂದಿಗೆ ಅಧಿಕಾರ ಹಂಚಿಕೊಳ್ಳುವುದು ಅಸಾಧ್ಯ ಎಂದು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ದೃಢ ನಿಲುವು ಹೊಂದಿದ್ದಾರೆ ಎಂದು ಸಚಿವ ಪೆರಿಯಸಾಮಿ ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಧಿಕಾರವನ್ನು ಹಂಚಿಕೊಳ್ಳಬೇಕೆಂದು ಕಾಂಗ್ರೆಸ್ ಬೇಡಿಕೆ ಇಟ್ಟಿದೆ. ಕೇಳುವ ಹಕ್ಕು ಕಾಂಗ್ರೆಸ್‌ಗೆ ಇದೆ. ಆದರೆ ಡಿಎಂಕೆ ಎಂದಿಗೂ ಇಂತಹ ಪ್ರಸ್ತಾವಕ್ಕೆ ಒಪ್ಪಿಕೊಂಡಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ರಾಜ್ಯದಲ್ಲಿ ಇವರೆಗೂ ಯಾವುದೇ ಮೈತ್ರಿ ಸರ್ಕಾರ ರಚನೆಯಾಗಿಲ್ಲ, ಡಿಎಂಕೆ ಸ್ವತಂತ್ರವಾಗಿ ಆಡಳಿತ ನಡೆಸಿದೆ. ಪಕ್ಷದ ನಿಲುವಿನಲ್ಲಿ ಯಾವುದೇ ಅನುಮಾನವಿಲ್ಲ. ಮುಖ್ಯ ಮಂತ್ರಿಗಳು ತಮ್ಮ ನಿಲುವಿಗೆ ಬದ್ಧರಾ ಗಿದ್ದಾರೆಂದು ಸಚಿವರು ಹೇಳಿದರು.

ಬರಲಿರುವ ಮಾರ್ಚ್- ಏಪ್ರಿಲ್‌ನಲ್ಲಿ ವಿಧಾನಸಭೆ ಚುನಾವಣೆ ನಡೆಯಲಿದ್ದು ಡಿಎಂಕೆ ನೇತೃತ್ವದ ಮೈತ್ರಿಕೂಟ ಗೆದ್ದರೆ ಅಧಿಕಾರದಲ್ಲಿ ಪಾಲು ನೀಡಬೇಕೆಂದು ತಮಿಳುನಾಡು ಕಾಂಗ್ರೆಸ್ ಒತ್ತಾಯಿಸಿದೆ.



ಇತ್ತೀಚೆಗೆ ಕಾಂಗ್ರೆಸ್ ಸಂಸದ ಮಣಿಕಂ ಟಾಗೋರ್ ಅವರು ಅಧಿಕಾರ ಹಂಚಿಕೆ ಕುರಿತು ಚರ್ಚೆ ನಡೆಯಬೇಕಾದ ಸಮಯ ಈಗ ಬಂದಿದೆ ಎಂದು ಹೇಳಿದ್ದರು. ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಹಾಗೂ ಶಾಸಕ ಎಸ್.ರಾಜೇಶ್ ಕುಮಾರ್ ಕೂಡ ಮೈತ್ರಿ ಸರ್ಕಾರದಲ್ಲಿ ಅಧಿಕಾರ ಹಂಚಿಕೆಯಾಗಬೇಕೆಂದು ಒತ್ತಾಯಿಸಿದ್ದಾರೆ.

ಯಾವುದೇ ರಾಜಕೀಯ ಪಕ್ಷಗಳು ನಮಗೆ ಅಧಿಕಾರ ಬೇಡ ಎಂದು ಹೇಳುತ್ತವೆಯೇ? ಎಂದು ತಮಿಳುನಾಡು ಕಾಂಗ್ರೆಸ್ ಉಸ್ತುವಾರಿ ಗಿರೀಶ್ ಚೋದಂಕರ್ ಅವರು ಪ್ರಶ್ನೆ ಮಾಡಿದ್ದರು.

1967ರಿಂದ ಡಿಎಂಕೆ ಹಾಗೂ ಎಐಎಡಿಎಂಕೆ ಇತರ ಪಕ್ಷಗಳೊಂದಿಗೆ ಮೈತ್ರಿಮಾಡಿಕೊಂಡು ಚುನಾವಣೆ ಎದುರಿಸಿದರೂ ಸ್ವತಂತ್ರವಾಗಿ ಸರ್ಕಾರ ರಚನೆ ಮಾಡಿವೆ. 2006ರಲ್ಲಿ ಡಿಎಂಕೆ ಬಹುಮತ ಪಡೆಯದಿದ್ದರೂ ಮಿತ್ರಪಕ್ಷಗಳ ಸಹಕಾರದೊಂದಿಗೆ ಸರ್ಕಾರ ರಚನೆ ಮಾಡಿತ್ತು. ಆದಾಗ್ಯೂ ಕಾಂಗ್ರೆಸ್‌ಗೆ ಅಧಿಕಾರ ಹಂಚಿಕೆ ಮಾಡಿರಲಿಲ್ಲ.

# ಗುಜರಾತ್‌ನ ಸೋಮನಾಥದಲ್ಲಿ ಶೌರ್ಯಯಾತ್ರೆ

## ಡಮರು ಬಾರಿಸಿದ ಪ್ರಧಾನಿ ನರೇಂದ್ರ ಮೋದಿ

• ಪ್ರಜೋದಯ ವರದಿ

**ಸೋಮನಾಥ (ಗುಜರಾತ್):** ಸೋಮನಾಥ ದೇವಾಲಯದ ಆವರಣದಲ್ಲಿ ಭಾನುವಾರ ನಡೆದ ಶೌರ್ಯ ಯಾತ್ರೆಯಲ್ಲಿ ಭಾಗವಹಿಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರನ್ನು ರಾಜ್ಯದ ವಿವಿಧೆಡೆಯಿಂದ ಬಂದಿದ್ದ 108 ಅಶ್ವಾರೋಹಿಗಳ ತಂಡದ ಜೊತೆಗೆ ಡಮರು ಬಾರಿಸಿದ ಯುವಕರ ತಂಡವು ಆತ್ಮೀಯವಾಗಿ ಸ್ವಾಗತಿಸಿತು.

ಇಲ್ಲಿನ ಶಂಖ ವೃತ್ತದಿಂದ ತೆರೆದ ವಾಹನದಲ್ಲಿ ಮೆರವಣಿಗೆ ಆರಂಭಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ದೇವಾಲಯದ ಮುಂಭಾಗದಲ್ಲಿರುವ ವೀರ್ ಹಮೀರ್‌ಜಿ ವೃತ್ತದವರೆಗೂ ಸಾಗಿದರು. ಈ ವೇಳೆ ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್, ಉಪಮುಖ್ಯಮಂತ್ರಿ ಹರ್ಷ ಸಾಂಘವಿ ಜೊತೆಗಿದ್ದರು.

ಡಮರು ಬಾರಿಸಿದ ಗುಂಪು ಕೂಡ ಮೆರವಣಿಗೆಯಲ್ಲಿ ಸಾಗಿತು. ಪ್ರಧಾನಿ ಕೂಡ ಡಮರು ಬಾರಿಸಿ, ನಂತರ ಅದನ್ನು ಭದ್ರತಾ ಪಡೆಗಳಿಗೆ ಹಸ್ತಾಂತರಿಸಿದರು. ರಸ್ತೆಯ ಇಕ್ಕೆಲಗಳಲ್ಲಿ ನಿಂತಿದ್ದ ಸಾವಿರಾರು ಮಂದಿ ಮೆರವಣಿಗೆಯಲ್ಲಿ ಹಾದುಹೋಗುತ್ತಿದ್ದ ಕಲಾವಿದರ ಮೇಲೆ ಹೂಮಳೆಗರೆದರು. ಮಾರ್ಗದಲ್ಲಿ ಅಲ್ಲಲ್ಲಿ ನಿರ್ಮಿಸಿದ್ದ ವೇದಿಕೆಗಳಲ್ಲಿ, ಕಲಾವಿದರು ಕಲಾ ಪ್ರದರ್ಶನ ನೀಡಿದರು. ಬಿಳಿ ಅಂಗಿ,



ಖಾಕಿ ಪ್ಯಾಂಟ್, ಕೇಸರಿ ಬಣ್ಣದ ರುಮಾಲು ಧರಿಸಿದ್ದ 108 ಅಶ್ವರೋಹಿಗಳ ತಂಡವು ಶೌರ್ಯ ಯಾತ್ರೆಯ ಮೆರವಣಿಗೆಯಲ್ಲಿ ಗಮಸೆಳೆಯಿತು.

ಈ ಕುದುರೆಗಳು ಹಾಗೂ ಅವುಗಳ ಸವಾರರನ್ನು ಗುಜರಾತ್‌ನ ವಿವಿಧೆಡೆಯಿಂದ ಕರೆ ತರಲಾಗಿದೆ. ನಾವೆಲ್ಲರೂ ಗುಜರಾತ್ ಪೊಲೀಸ್ ಇಲಾಖೆಗೆ ಸೇರಿದ್ದು, ಕಳೆದೊಂದು ವಾರ ದಿಂದ ಅಭ್ಯಾಸ ನಡೆಸಿದ್ದೇವೆ. ನಾನು ಪಠಾಣ್ ಜಿಲ್ಲೆಯಲ್ಲಿ ಕಾನ್‌ಸ್ಟೇಬಲ್ ಆಗಿ ಕೆಲಸ ಮಾಡುತ್ತಿದ್ದು, ಈ ಶೌರ್ಯ ಯಾತ್ರೆಯಲ್ಲಿ ಭಾಗವಹಿಸಿರುವುದಕ್ಕೆ ಹೆಮ್ಮೆಯಾಗಿದೆ ಎಂದು ಭರತ್ ಕುಮಾರ್ ಸಂತಸ ವ್ಯಕ್ತಪಡಿಸಿದರು.

ನಾನು ಸವಾರಿ ಮಾಡಿದ ಕುದುರೆಗೆ 17 ವರ್ಷ ವಯಸ್ಸಾಗಿದ್ದು, ಕಥಿಯಾವಾರಿ ಮಾರ್ವಾರಿಯ ಮಿಶ್ರತಳಿಯಾಗಿದೆ. ಜಿಲ್ಲೆಯಿಂದಲೇ 10 ಕುದುರೆಗಳನ್ನು ಕರೆತಂದಿದ್ದು, ನನ್ನ ಕುದುರೆಗೆ ಗರುಡ ಎಂದು ನಾಮಕರಣ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಸೋಮನಾಥ ಸ್ವಾಭಿಮಾನ್ ಪರ್ವದಲ್ಲಿ ಭಾಗವಹಿಸುವ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರವೇ ಇಲ್ಲಿಗೆ ಭೇಟಿ ನೀಡಿದ್ದು, ಭಾನುವಾರ ಬೆಳಿಗ್ಗೆ ಮೆರವಣಿಗೆಯಲ್ಲಿ ಭಾಗವಹಿಸಿ, ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಪರ್ವದ ಅಂಗವಾಗಿ ಜನವರಿ 8ರಿಂದ 11 ರವರೆಗೆ ವಿಶೇಷ ಕಾರ್ಯಕ್ರಮಗಳು ಜರುಗಿದವು.



ಆಲೂರು: ತಾಲ್ಲೂಕಿನ ಕುಂದೂರು ಹೋಬಳಿ ಗಂಜಿಗೆರೆ ಗ್ರಾಮದ ಶ್ರೀ ಲಕ್ಷ್ಮೀ ವೆಂಕಟರಮಣ ದೇವಸ್ಥಾನದ ದೇವರ ಬಸವ ಭಾನುವಾರ ಅನಾರೋಗ್ಯದಿಂದ ಮತಪಟ್ಟಿತು. ಕಳೆದ 16 ವರ್ಷದಿಂದ ದೇವಸ್ಥಾನಕ್ಕೆ ಬಿಟ್ಟಿದ್ದ ಬಸವನ ಅಗಲಿಕೆಗೆ ಗ್ರಾಮಸ್ಥರು ಕಂಬನಿ ಮಿಡಿದಿದ್ದಾರೆ.

# ಜಿಲ್ಲಾ ಸೈನಿಕರ ಸಂಘದ ಕ್ಯಾಲೆಂಡರ್ ಬಿಡುಗಡೆ



• ಪ್ರಜೋದಯ ವರದಿ

**ಹಾಸನ:** ನಗರದ ಸೈನಿಕರ ಭವನದಲ್ಲಿ ಶಾಸಕ ಹೆಚ್.ಪಿ.ಸ್ವರೂಪ್ ಅವರು ಜಿಲ್ಲಾ ಸೈನಿಕರ ಸೌಹಾರ್ದ ಸಹಕಾರ ಸಂಘದ ಕ್ಯಾಲೆಂಡರ್ ಬಿಡುಗಡೆ ಮಾಡಿದರು.

ಈ ವೇಳೆ ಮಾತನಾಡಿದ ಅವರು, ಸಹಕಾರ ಸಂಘಗಳು ದೇಶದ ಆರ್ಥಿಕತೆಗೆ ಅವಶ್ಯಕವಾಗಿವೆ. ಹೆಚ್‌ಡಿಸಿಸಿ ಬ್ಯಾಂಕ್ ಅಧ್ಯಕ್ಷರೊಂದಿಗೆ ಚರ್ಚಿಸಿ ಸಂಘದ ಬೆಳವಣಿಗೆಗೆ ಸಹಕಾರ ನೀಡಲಾಗುವು ದೆಂದು ಭರವಸೆ ನೀಡಿದರು.

ಮಹಾನಗರ ಪಾಲಿಕೆ 4ನೇ ವಾರ್ಡ್ ನಿಕಟಪೂರ್ವ ಸದಸ್ಯ ವಾಸುದೇವ, ಸಹಕಾರ ಸಂಘದ ಗೌರವಾಧ್ಯಕ್ಷ ಬೆಟ್ಟೇಗೌಡ, ಅಧ್ಯಕ್ಷ ಜಿ.ಎನ್.ನಾಗರಾಜು, ಉಪಾಧ್ಯಕ್ಷ ಪ್ರದೀಪ್ ಸಾಗರ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗಂಗಾಧರ್ ಇತರರಿದ್ದರು.

# ಗುರುಮೂರ್ತಿ ಆಯ್ಕೆ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಶ್ರವಣಬೆಳಗೊಳದ ಸ್ಯಾಕ್ಸೋಫೋನ್ ವಿದ್ವಾಂಸ ಎಸ್.ಎ.ಗುರುಮೂರ್ತಿ ಅವರು ಜಿಲ್ಲಾ ಸವಿತಾ ಮಂಗಲ ವಾದ್ಯ ಕಲಾವಿದರ ಸಂಘದ ನೂತನ ಅಧ್ಯಕ್ಷರಾಗಿ ಅವಿ ರೋಧವಾಗಿ ಆಯ್ಕೆಯಾಗಿದ್ದಾರೆ.

ಹಾಸನದ ಕನ್ನಡ ಸಾಹಿತ್ಯ ಪರಿಷತ್ತಿನ ಜ್ವಾಲನಯ್ಯ ವೇದಿಕೆಯಲ್ಲಿ ಆಯೋಜಿಸಿದ್ದ ಸದ್ಗುರು ತ್ಯಾಗರಾಜರ ಹಾಗು ಪುರಂದರ ದಾಸರ ಆರಾಧನಾ ಕಾರ್ಯಕ್ರಮದಲ್ಲಿ ನಡೆದ ಸಭೆಯಲ್ಲಿ ಆಯ್ಕೆಯನ್ನು ಘೋಷಿಸಲಾಯಿತು.

ಹಾಲಿ ಜಿಲ್ಲಾಧ್ಯಕ್ಷ ಸಂಜೀವ್ ಕುಮಾರ್ ಹಾಗು ಜಿಲ್ಲೆಯ ಎಲ್ಲಾ ತಾಲ್ಲೂಕು ಹೋಬಳಿ ಮಟ್ಟದ ಅಧ್ಯಕ್ಷರು, ಪದಾಧಿಕಾರಿಗಳ ನೇತೃತ್ವದಲ್ಲಿ ಆಯ್ಕೆಯನ್ನು ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ಘೋಷಿಸಿದರು.

# ಗುಣಮಟ್ಟದ ಶಿಕ್ಷಣಕ್ಕೆ ಹೆಚ್ಚು ಒತ್ತು: ಎ.ಮಂಜು

• ಪ್ರಜೋದಯ ವರದಿ

**ಅರಕಲಗೂಡು:** ಶಿಕ್ಷಣದಿಂದ ಮಾತ್ರ ಸಮಾಜದಲ್ಲಿ ಅಪೇಕ್ಷಿತ ಬದಲಾವಣೆ ತರಲು ಸಾಧ್ಯ. ಸಮಾಜ, ವ್ಯಕ್ತಿಗಳ ಸುಧಾರಣೆ ಕೂಡ ಶಿಕ್ಷಣದಿಂದಲೆ ಆಗಬೇಕಿದೆ. ಅದನ್ನು ಅರ್ಥಮಾಡಿಕೊಂಡು ವಿದ್ಯಾರ್ಥಿಗಳು ವಿದ್ಯೆ ಕಲಿಯಬೇಕೆಂದು ಶಾಸಕ ಎ.ಮಂಜು ಅವರು ತಿಳಿಸಿದರು.

ತಾಲ್ಲೂಕಿನ ಬಸವಾಪಟ್ಟಣ ಗ್ರಾಮದ ಕೆಪಿಎಸ್ ಪದವಿ ಪೂರ್ವ ಕಾಲೇಜಿಗೆ ನೂತನವಾಗಿ ನಿರ್ಮಿಸಿರುವ ನೂತನ ಕೊಠಡಿಗಳ ಉದ್ಘಾಟನೆ ಹಾಗೂ 2025-26ನೇ ಸಾಲಿನ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಕಳೆದ 4 ವರ್ಷಗಳಿಂದ ಈ ಕಾಲೇಜಿನ ವಿದ್ಯಾರ್ಥಿಗಳು ಬಾಲ್ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ರಾಜ್ಯಮಟ್ಟದವರವಿಗೂ ತಲುಪಿದ್ದು ಅವರನ್ನು ಕ್ಷೇತ್ರದ ಜನತೆಯ ಪರವಾಗಿ ಅಭಿನಂದಿಸುತ್ತೇನೆಂದು ಸಾಧಕರಿಗೆ ನಗದು ಪುರಸ್ಕಾರ ನೀಡಿ ಗೌರವಿಸಿದರು.

ಬಸವಾಪಟ್ಟಣ ಸರ್ಕಾರಿ ಪ್ರೌಢ ಶಾಲೆಯು ಜಿಲ್ಲೆಯಲ್ಲೇ ಉತ್ತಮ ಶಾಲೆಯಾಗಿದ್ದು, ಇಲ್ಲಿ ಕಲಿತ ಎಷ್ಟೋ ವಿದ್ಯಾರ್ಥಿಗಳು ಇಂದು ವಿದೇಶಗಳಲ್ಲಿ ಉನ್ನತ ಹುದ್ದೆಗಳಲ್ಲಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣಕ್ಕೇ ಹೆಚ್ಚು ಒತ್ತು ನೀಡಲಾಗಿದ್ದು, ಗುಣಮಟ್ಟದ ಉಪನ್ಯಾಸಕರ ಆಯ್ಕೆ ನಡೆಯುತ್ತದೆ. ಸರ್ಕಾರವೂ ಅನೇಕ ಸೌಲಭ್ಯಗಳನ್ನು ನೀಡುತ್ತಿದೆ. ವಿದ್ಯಾರ್ಥಿಗಳೆಲ್ಲಾರೂ ಕಷ್ಟಪಟ್ಟು ಅಧ್ಯಯನ ಮಾಡಬೇಕು. 9ರಿಂದ 12ನೇ ತರಗತಿಯಲ್ಲಿನ ಶೈಕ್ಷಣಿಕ ವರ್ಷಗಳು ವಿದ್ಯಾರ್ಥಿಯ ಜೀವನದ ಮುಖ್ಯ ಘಟ್ಟವಾಗಿದ್ದು, ವಿದ್ಯಾರ್ಥಿಗಳು ಎಚ್ಚರಿಕೆಯಿಂದ ತಮ್ಮ ಭವಿಷ್ಯ ರೂಪಿಸಿಕೊಳ್ಳಲು ಮುಂದಾಗುವಂತೆ ಹೇಳಿದರು.



ಕಾಲೇಜು ಪ್ರಾಂಶುಪಾಲ ಹರೀಶ್ ಅವರು ಮಾತನಾಡಿ, ತಾಲೂಕಿನಲ್ಲಿನೇ ಏಕೈಕಾ ಕೆಪಿಎಸ್ ಶಾಲೆ ಬಸವಾಪಟ್ಟಣದಲ್ಲಿ ಕಾರ್ಯನಿರ್ವಹಿಸುತ್ತಿದೆ. ಕಾಲೇಜು ವಿಭಾಗದಲ್ಲಿ 112 ಮಕ್ಕಳು ದಾಖಲಾಗಿದ್ದಾರೆ. ನುರಿತ ಉಪನ್ಯಾಸಕರಿಂದ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಮುಂದಿನ ಶೈಕ್ಷಣಿಕ ಸಾಲಿನಲ್ಲಿ ತೇರ್ಗಡೆಯಾದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳನ್ನು ಇಲ್ಲಿಗೆ ದಾಖಲಾಗುವಂತೆ ಶಾಸಕರಾದ ಮಂಜಣ್ಣನವರು ಶಾಲಾ ಮುಖ್ಯಸ್ಥರಿಗೆ ಮಾರ್ಗದರ್ಶನ ನೀಡಬೇಕೆಂದು ಮನವಿ ಮಾಡಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ರಾಧಶೇಖರ್, ಉಪಾಧ್ಯಕ್ಷ ಕುಮಾರ್, ಉಪ ಪ್ರಾಂಶುಂಪಾಲ ಚಂದ್ರಪ್ಪ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಹರೀಶ್, ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕಿ ಸರಸ್ವತಿ, ಮುಖಂಡರಾದ ಮಹೇಂದ್ರ, ಕುಮಾರ್, ಕಂಬೇಗೌಡ, ಕುಮಾರ್, ಕೊಣನೂರು ಕಾಲೇಜು ಪ್ರಾಂಶುಪಾಲ ಗಿರೀಶ್, ಎಸ್. ಡಿ. ಎಂ.ಸಿ. ಸದಸ್ಯರಾದ ಕುಸುಮಾ ಮಹೇಶ್, ಜಯ ಶಂಕರ್, ಉಪನ್ಯಾಸಕ ವರ್ಗ ಸಾರ್ವಜನಿಕರು ವಿದ್ಯಾರ್ಥಿಗಳು ಹಾಜರಿದ್ದರು.

# ಸಂಸ್ಕಾರಯುತ ಗುಣದಿಂದ ಮನಃಶಾಂತಿ ಸಾಧ್ಯ

• ಪ್ರಜೋದಯ ವರದಿ

**ಅರಸೀಕೆರೆ:** ವಿದ್ಯಾಭ್ಯಾಸ ಭೌತಿಕವಾಗಿ ತಮಗೆ ಬೇಕಾದನ್ನು ಪಡೆದುಕೊಳ್ಳಲು ಸಹಕಾರಿಯಾದರೆ ಸಂಸ್ಕಾರಯುತ ಗುಣ ಬೆಳೆಸಿಕೊಳ್ಳುವುದು ಸನಾತನ ಧರ್ಮದ ಬಗ್ಗೆ ತಿಳಿದುಕೊಳ್ಳುವುದು ನಮ್ಮ ಆತ್ಮ ಬಲವನ್ನು ಹೆಚ್ಚಿಸುವ ಜೊತೆಗೆ ಮನಃಶಾಂತಿ ನೀಡುತ್ತದೆಂದು ನೊಣವಿನಕೆರೆ ಕಾಡು ಸಿದ್ದೇಶ್ವರ ಮಠದ ಡಾ.ಕರಿ ವೃಷಭ ದೇಶಿ ಕೇಂದ್ರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ರುದ್ರಾಕ್ಷ ಫೌಂಡೇಶನ್ ವತಿಯಿಂದ ಶುಭಮಸ್ತು ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಮಕ್ಕಳ ಕೈಯಲ್ಲಿ ಮಾದೇವ ಚಿತ್ರಕಲೆ ಸ್ಪರ್ಧೆಯಲ್ಲಿ ವಿಜೇತರದ ಮಕ್ಕಳಿಗೆ ಬಹುಮಾನ ವಿತರಣಾ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಶಿವಸ್ಮರಣೆಗೆ ಒಂದು ಸುಂದರ ಅನುಭವ ಶಿವನ ಬಗ್ಗೆ ಧ್ಯಾನ ಜಪ ತಪ ಮಾಡುವುದು ಮನುಷ್ಯನ ಅಂತರಂಗದ ನೋವು ದುಃಖ ದುಮ್ಮನಗಳಿಗೆ ಉಪಶಮನವಿದ್ದಂತೆ ಶಿವನಾಮಸ್ಮರಣೆ ಎಂದು ಹೇಳಿದರು.

ಯಳನಾಡು ಮೂರು ಕಳಸ ಮಠದ ಜ್ಞಾನಪ್ರಭು ಸಿದ್ದರಾಮ ದೇಶಿ ಕೇಂದ್ರ ಸ್ವಾಮೀಜಿ ಮಾತನಾಡಿ, ಮಕ್ಕಳ ಕೈಯಲ್ಲಿ ಮಹದೇವ ಎಂಬ ಶೀರ್ಷಿಕೆಯೇ ವಿಶಿಷ್ಟತೆಯಿಂದ ಕೂಡಿದೆ. ಇನ್ನು ಮಕ್ಕಳ ಕೈಯಿಂದ ವಿವಿಧ ರೂಪದಲ್ಲಿ ಮಾದೇವನ ಚಿತ್ರ ಮೂಡಿ ಬಂದಿರುವುದು ನೋಡುವ ಕಣ್ಣುಗಳಿಗೆ ಹಬ್ಬವೆನಿಸಿದೆ. ಈ ಚಿತ್ರಕಲಾ ಸ್ಪರ್ಧೆಯಲ್ಲಿ ಪಾಲ್ಗೊಂಡಿರುವ ಪ್ರತಿಯೊಬ್ಬ ಕಲಾವಿದರ ಮೇಲು ಶಿವನ ಅನುಗ್ರಹವಿರಲಿ ಎಂದು ಶುಭ ಹಾರೈಸಿದರು.




ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಮಾತನಾಡಿ, ಜಗತ್ತು ಆಧುನಿಕ ನಾಗಾಲೋಟದಲ್ಲಿ ಸಾಗುತ್ತಿದೆ. ಪದವಿ ಐಶ್ವರ್ಯಕ್ಕಾಗಿ ಉನ್ನತ ಸ್ಥಾನಮಾನಗಳಿಗಾಗಿ ಮನುಷ್ಯ ಅಪಆಪಿಸುವ ಕಾಲಘಟ್ಟದಲ್ಲಿ ನಾವಿದ್ದೇವೆ. ಹಾಗಾಗಿ ಮನಸ್ಸಿನ ಶಾಂತಿ ನೆಮ್ಮದಿ ಮಾಯವಾಗುತ್ತಿದೆ. ಮನಶಾಂತಿ, ಆತ್ಮಸ್ಥೈರ್ಯ ಹೆಚ್ಚಬೇಕಾದರೆ ಧಾರ್ಮಿಕ ಮನೋಭಾವದಿಂದ ಮಾತ್ರ ಸಾಧ್ಯ. ಬಾಲ್ಯದಿಂದಲೇ ಮಕ್ಕಳಿಗೆ ವಿದ್ಯಾಭ್ಯಾಸದ ಜೊತೆಗೆ ನಮ್ಮ ಸನಾತನ ಧರ್ಮ ಆಚಾರ-ವಿಚಾರಗಳ ಬಗ್ಗೆ ತಿಳಿಸಿಕೊಡುವ ಕೆಲಸ ಪೋಷಕರು ಮಾಡಬೇಕಿದೆ ಎಂದರು.

ರುದ್ರಾಕ್ಷ ಫೌಂಡೇಶನ್‌ನ ಸಂಸ್ಥಾಪಕರಾದ ಜಯಪ್ರಕಾಶ್ ಗುರೂಜಿ ಮಾತನಾಡಿ, ನಮ್ಮ ಫೌಂಡೇಶನ್ ಧಾರ್ಮಿಕ ಕ್ಷೇತ್ರ ಸೇರಿದಂತೆ ಆಧ್ಯಾತ್ಮಿಕ ಸಾಮಾಜಿಕ ಪರಿಸರ ಆರೋಗ್ಯ ಹೀಗೆ ಹಲವು ಸೇವಾ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಾ ಸಾಗುತ್ತಿದೆ. ಅದೇ ರೀತಿ ಸನಾತನ ಧರ್ಮದ ಮಹತ್ವ ಆಚಾರ-ವಿಚಾರದ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವ ಸೇವೆಯನ್ನು ಸಹ ಫೌಂಡೇಶನ್ ಮಾಡುತ್ತಿದೆ ಎಂದು ಹೇಳಿದರು.

ಸಮಾರಂಭದಲ್ಲಿ ಅನಂತ ಶಿಕ್ಷಣ ಸಮೂಹ ಸಂಸ್ಥೆಗಳ ಚೇರ್ಮನ್ ಆರ್.ಅನಂತಕುಮಾರ್, ನಗರ ಸಭೆಯ ನಿಕಟಪೂರ್ವ ಸದಸ್ಯ ದರ್ಶನ್ ಮಾತನಾಡಿದರು, ಚಿತ್ರ ಬಿಡಿಸುವ ಸ್ಪರ್ಧೆಯಲ್ಲಿ ಪಾಲ್ಗೊಂಡು ಗಮನ ಸೆಳೆಯುವ ರೀತಿಯಲ್ಲಿ ಮಹದೇವರ ಚಿತ್ರ ಬಿಡಿಸಿದ ಮೂವರು ವಿದ್ಯಾರ್ಥಿಗಳಿಗೆ ಪ್ರಥಮ, ದ್ವಿತೀಯ ಬಹುಮಾನವನ್ನು ನೀಡಿದರೆ, ಸ್ಪರ್ಧೆಯಲ್ಲಿ ಪಾಲ್ಗೊಂಡ ಪ್ರತಿಯೊಬ್ಬ ವಿದ್ಯಾರ್ಥಿಗೂ ಪ್ರಶಸ್ತಿ ಪತ್ರದೊಂದಿಗೆ ಸಮಾಧಾನಕರ ಬಹುಮಾನ ನೀಡಲಾಯಿತು.

# ಹಾಸನದಲ್ಲಿ ಭೀಮಾ ಕೋರೆಗಾಂವ್ ವಿಜಯೋತ್ಸವ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮಹಾರ್ ಸೈನಿಕರ ಶೌರ್ಯದ ಸ್ಮರಣಾರ್ಥ ಭೀಮಾ ಕೋರೆಂಗಾವ್ ವಿಜಯೋತ್ಸವ ಆಚರಣೆ ಸಮಿತಿಯಿಂದ ಜ.20ರ ಬೆಳಿಗ್ಗೆ 10 ಗಂಟೆಗೆ ಹಾಸನದ ಪ್ರಜಾಸೌಧದ ಪಕ್ಕದಲ್ಲಿರುವ ರಸ್ತೆಯಲ್ಲಿ ಭೀಮಾ ಕೋರೆಗಾಂವ್ ವಿಜಯೋತ್ಸವ ಆಯೋಜಿಸಲಾಗಿದೆ ಎಂದು ಆಚರಣೆ ಸಮಿತಿ ಅಧ್ಯಕ್ಷ ಹೆಚ್.ಕೆ.ಸಂದೇಶ್ ಅವರು ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಟಿಯಲ್ಲಿ ಮಾತನಾಡಿ, ಅಂಬೇಡ್ಕರ್ ಅವರಿಗೆ ಸಂವಿಧಾನ ಬರೆಯಲು ಸ್ಫೂರ್ತಿ ನೀಡಿದ ಪ್ರಮುಖ ಸಂಗತಿಗಳಲ್ಲಿ ಭೀಮಾ ಕೊರೆಗಾಂವ್ ವಿಜಯ ಕೂಡ ಒಂದಾಗಿದೆ. ಈ ಘಟನೆಯ ವಿದ್ಯಮಾನಗಳನ್ನು ಇಂದಿನ ತಲೆಮಾರಿಗೆ ತಿಳಿಸುವ ಪ್ರಯತ್ನ ನಾಡಿನಾದ್ಯಂತ ಆಗುತ್ತಿದೆಯೆಂದರು.

1818ರ ಜ.1 ರಂದು ಪುಣೆ ಹತ್ತಿರದ ಭೀಮಾ ನದಿ ದಂಡೆ ಮೇಲಿನ ಕೋರೆಗಾಂವ್ ಬಳಿ 28 ಸಾವಿರ ಸೈನಿಕರಿದ್ದ ಪೇಶ್ವೆ ಹಾಗು 500 ಮಹಾರ್ ಯೋಧರ ಮಧ್ಯೆ ಯುದ್ಧ ನಡೆದು ಕೊರೆಗಾಂವ್ ವೀರರು ಅವಿರತವಾಗಿ ಹೋರಾಟ ನಡೆಸಿ 2ನೇ ಬಾಜಿರಾಯನ ಮಗನನ್ನು ಕೊಂದ ನೆನಪಿಗೆ ವಿಜಯೋತ್ಸವ ಆಚರಿಸಲಾಗುತ್ತಿದೆ. ಕ್ರೂರ ಜಾತಿ ಪದ್ಧತಿ, ಅಸ್ಪೃಶ್ಯತೆಯ ನಡುವೆಯೂ ದಲಿತರು ನಡೆಸಿದ ಹೋರಾಟ ಅಂಬೇಡ್ಕರ್ ಅವರ ಬದುಕಿಗೆ ತಿರುವು ಕೊಟ್ಟ ಸಂಗತಿಯಾಗಿದೆ. ಡಾ.ಬಿ.ಆರ್.ಅಂಬೇಡ್ಕರ್ ಅವರು ಪ್ರತಿವರ್ಷ ಭೀಮಾ ಕೋರೆಗಾಂವ್‌ಗೆ ಭೇಟಿ ನೀಡಿ ಹುತಾತ್ಮರ ಸ್ಮರಣಾರ್ಥ ಬ್ರಿಟಿಷ್ ಸರ್ಕಾರ ನಿರ್ಮಿಸಿರುವ ವೀರ ಯೋಧರ ಸ್ಮಾರಕಕ್ಕೆ ಗೌರವ ಸಲ್ಲಿಸುತ್ತಿದ್ದರು. ಮಹಾನ್ ಯೋಧರ ತ್ಯಾಗ ವ್ಯರ್ಥವಾಗಲು ಬಿಡಬಾರದು. ಅವರ ಸಮಾನತೆಯ ಕನಸು ನನಸಾಗಿಸುವುದು ನಮ್ಮ ಗುರಿಯಾಗಬೇಕೆಂದರು.

ಕಾರ್ಯಕ್ರಮಕ್ಕೆ ಅಂಬೇಡ್ಕರ್ ಅವರ ಮೊಮ್ಮಗ ಭೀಮರಾವ್ ಯಶ್ವಂತ್ ರಾವ್ ಅಂಬೇಡ್ಕರ್ ಹಾಗು ಭಾರತೀಯ ಭೌದ್ಧ ಮಹಾಸಭಾ ಅಧ್ಯಕ್ಷ, ನಿವೃತ್ತ ಡಿಸಿಪಿ ಎಸ್.ಸಿದ್ದರಾಜು ಹಾಗು ಭಾರತೀಯ ಬೌದ್ಧ ಮಹಾ ಸಭಾದ ಅನೇಕರು ಪಾಲ್ಗೊಳ್ಳಲಿದ್ದಾರೆಂದರು.

ಸುದ್ದಿಗೋಷ್ಟಿಯಲ್ಲಿ ಸಮಾಜದ ಮುಖಂಡರಾದ ರಾಜು ಗೊರೂರು, ಮಂಜು ಕುರುವಂಕ ಭಾಗವಹಿಸಿದ್ದರು.

# ಅಂಬೇಡ್ಕರ್ ಕುರಿತು ಪ್ರಬಂಧ: ವಿಜೇತರಿಗೆ ಬಹುಮಾನ

• ಪ್ರಜೋದಯ ವರದಿ

**ಅರಕಲಗೂಡು:** ಗಣರಾಜ್ಯೋತ್ಸವ ಅಂಗವಾಗಿ ವಿಶ್ವ ಚೇತನ ಜೈಭೀಮ್ ಚಾರಿಟಬಲ್ ಟ್ರಸ್ಟ್ ಅರಕಲಗೂಡು ವತಿಯಿಂದ ಭಾರತದ ಸಂವಿಧಾನ ಮತ್ತು ಪ್ರಸ್ತುತ ಸಮಾಜ ಕುರಿತು ಪಟ್ಟಣದ ಶಿಕ್ಷಕರ ಭವನದಲ್ಲಿ ಆಯೋಜಿಸಲಾಗಿದ್ದ ಪ್ರಬಂಧ ಸ್ಪರ್ಧೆಯಲ್ಲಿ ಒಟ್ಟು 248 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ತಹಶೀಲ್ದಾರ್ ಕೆ.ಸಿ.ಸೌಮ್ಯ ಅವರು ಅಂಬೇಡ್ಕರ್ ಭಾವಚಿತ್ರ ಹಾಗೂ ಸಂವಿಧಾನ ಪೀಠಿಕೆಗೆ ಪುಷ್ಪ ನಮನ್ನು ಸಲ್ಲಿಸಿ ಮಾತನಾಡಿದ ಅವರು, ಇಂದಿನ ಸಮಾಜದಲ್ಲಿ ವಿದ್ಯೆ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಅಂಬೇಡ್ಕರ್, ಭಾರತೀಯ ಸಂವಿಧಾನ ಹಾಗೂ ಯುವ ಜನರ ಪಾತ್ರ ಕುರಿತು ಅಧ್ಯಯನದ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಇಂದು ಆಯೋಜನೆ ಮಾಡಿರುವ ಪ್ರಬಂಧ ಸ್ಪರ್ಧೆ ಪೂರಕವಾಗಿದೆ. ಅತ್ಯುತ್ತಮವಾದ ವರದಿಗೆ ಬಹುಮಾನ ಬರುತ್ತದೆ. ಆದರೆ ಇಲ್ಲಿ ಸೇರಿರುವ ಎಲ್ಲರೂ ಕೂಡ ಪ್ರಬಂಧ ಸ್ಪರ್ಧೆಯ ವಿಜೇತರಾಗಿದ್ದೀರಿ. ಅದು ನಿಮ್ಮ ಭಾಗವಹಿಸುವಿಕೆಯಿಂದ ಸಾಧ್ಯವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ತಾಲ್ಲೂಕು ಕಚೇರಿ ಆಡಳಿತಾಧಿಕಾರಿ ಸೋಮಶೇಖರ್, ತಾಲ್ಲೂಕು ಎಸ್‌ಸಿ, ಎಸ್‌ಟಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಪ್ರಕಾಶ್, ಶಿಕ್ಷಕ ಬಸವರಾಜು, ಟ್ರಸ್ಟ್‌ನ ಅಧ್ಯಕ್ಷ ಎ.ಸಿ.ಕಿರಣ್, ಪ್ರಧಾನ ಕಾರ್ಯದರ್ಶಿ ಕೆ.ಜೆ.ಪ್ರದೀಪ್, ಕಾರ್ಯದರ್ಶಿ ಮೋಹನ್ ಕುಮಾರ್, ನಿರ್ದೇಶಕರಾದ ಡಿ.ಎಸ್.ಅಶೋಕ್, ಖಜಾಂಚಿ ಎಂ.ಕೆ.ಗಣೇಶ್, ಉಪನ್ಯಾಸಕ ರವಿಕುಮಾರ್ ಕೆಲ್ಲೂರು ಹಾಜರಿದ್ದರು.

ಪ್ರಬಂಧ ಸ್ಪರ್ಧೆಯಲ್ಲಿ ಪ್ರೌಢ ಶಾಲಾ ವಿಭಾಗದಿಂದ 146 ವಿದ್ಯಾರ್ಥಿಗಳು, ಪದವಿ ಪೂರ್ವ ವಿಭಾಗದಿಂದ 76, ಪದವಿ ವಿಭಾಗ 26 ಒಟ್ಟು 248 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ತಾಲ್ಲೂಕಿನ ವಿವಿಧ ಶಾಲಾ-ಕಾಲೇಜುಗಳಿಂದ ವಿದ್ಯಾರ್ಥಿಗಳನ್ನು ಕರೆತಂದಿದ್ದ ಶಿಕ್ಷಕರು, ಉಪನ್ಯಾಸಕರು ಹಾಗೂ ಎಲ್ಲಾ ವಿದ್ಯಾರ್ಥಿಗಳಿಗೆ ಉಪಹಾರದ ವ್ಯವಸ್ಥೆ ಮಾಡಲಾಗಿತ್ತು.

# ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣಕ್ಕೆ ಭೂಮಿ ಪೂಜೆ

• ಪ್ರಜೋದಯ ವರದಿ

**ಬೇಲೂರು:** ಪ್ರಧಾನಿ ನರೇಂದ್ರ ಮೋದಿಯವರ ಆಶಯದಂತೆ 24 ಗಂಟೆಯೂ ರೋಗಿಗಳಿಗೆ ಚಿಕಿತ್ಸೆ ಸಿಗಬೇಕೆಂಬ ಉದ್ದೇಶ ಹಾಗೂ ಸಾರ್ವಜನಿಕರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಆರೋಗ್ಯ ಮಂದಿರಗಳನ್ನು ನಿರ್ಮಿಸಲು ಮುಂದಾಗಿದ್ದು, ತುರ್ತು ಸಂದರ್ಭದಲ್ಲಿ ಚಿಕಿತ್ಸೆ ಕೊಡಿಸಲು ಇದು ಸಹಕಾರಿ ಎಂದು ಶಾಸಕ ಹೆಚ್.ಕೆ. ಸುರೇಶ್ ಅವರು ತಿಳಿಸಿದರು.

ತಾಲ್ಲೂಕಿನ ಮಲಸಾವರ ಗ್ರಾಮದಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ, ಕಟ್ಟಡ ನಿರ್ಮಾಣಕ್ಕೆ ಜಾಗ ದಾನ ನೀಡಿದ ಸೋಮಶೇಖರ್ ಕುಟುಂಬ ಸದಸ್ಯರನ್ನು ಸನ್ಮಾನಿ ಮಾತನಾಡಿದ ಅವರು, ಆಸ್ಪತ್ರೆಗೆ ಬರುವ ರೋಗಿಗಳನ್ನು ವೈದ್ಯರು, ಸಿಬ್ಬಂದಿ ಯೋಗಕ್ಷೇಮ ವಿಚಾರಿಸಿದರೆ ಅವರಲ್ಲಿ ಸ್ವಲ್ಪ ಕಾಯಿಲೆ ಗುಣ ಮುಖವಾಗಲು ಸಾಧ್ಯ. ಆಯುಷ್ಮಾನ್ ಆಸ್ಪತ್ರೆ ಕಟ್ಟಡ ನಿರ್ಮಿಸಲು ಜಾಗ ಕೊಟ್ಟಿರುವ ಜಾಗಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ದಾನಿಗಳಾದ ಸೋಮಶೇಖರ್ ಮತ್ತು ಕುಟುಂಬ ಸದಸ್ಯರ ಹೆಸರು ಚಿರಸ್ಥಾಯಿಯಾಗಿರಲಿದ್ದು, ಅವರ ಕುಟುಂಬದವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಆಸ್ಪತ್ರೆ ಸುತ್ತಲೂ ಕಾಂಪೌಂಡ್ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು. ತಾಲ್ಲೂಕಿನಾದ್ಯಂತ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಕೆಲಸ ಮಾಡಿಸಲಾಗುತ್ತಿದೆ ಎಂದರು.



ಮಲಸಾವರ ಗ್ರಾಮ ಪಂಚಾಯಿತಿ ಸದಸ್ಯ ಭೂಪಾಲ್ ಅವರು ಮಾತನಾಡಿ, ಆಯುಷ್ಮಾನ್ ಕಟ್ಟಡ ನಿರ್ಮಾಣಕ್ಕೆ ಜಾಗದ ಸಮಸ್ಯೆ ಇತ್ತು. ಅದಕ್ಕೆ ಗ್ರಾಮದ ಸೋಮಶೇಖರ್ ಮತ್ತು ಕುಟುಂಬದವರು ಜಾಗ ಧಾನ ಕೊಟ್ಟಿರುವುದು ಶ್ಲಾಘನೀಯ. ಜೊತೆಗೆ ಹಲವಾರು ಜನರು ಗ್ರಾಮದ ಅಭಿವೃದ್ಧಿಗೆ ತಮ್ಮ ಕೈಲಾದ ಸಹಕಾರ ನೀಡುತ್ತಿರುವುದರಿಂದ ಅವರೆಲ್ಲರಿಗೂ ಅಭಿನಂದನೆ ಸಲ್ಲಿಸುತ್ತೇನೆ. ಶಾಸಕರು ಸಹ ಪಂಚಾಯಿತಿಗೆ 3 ಕೋಟಿ ರೂ. ಅನುದಾನ ತಂದು ಕೆಲಸ ಮಾಡಿಸುತಿದ್ದಾರೆ. ಮುಂದಿನ ದಿನಗಳಲ್ಲಿ ಈ ಭಾಗದ ರಸ್ತೆಗಳ ಅಭಿವೃದ್ಧಿಗೆ ಶಾಸಕರು ಸಹಕಾರ ನೀಡಬೇಕು ಎಂದರು.


ಆಸ್ಪತ್ರೆ ಕಟ್ಟಡಕ್ಕೆ ನಿವೇಶನ ನೀಡಿದ ದಾನಿಗಳಾದ ಎಸ್.ಟಿ.ಸೋಮಶೇಖರ್, ಸುಭದ್ರ, ವಿಜಯ್, ಪವಿತ್ರ, ಮಲಸಾವರ ಗ್ರಾಮ ಪಂಚಾಯಿತಿ ಸದಸ್ಯರಾದ ಪರ್ವಿನ್ ತಾಜ್, ಲತಾ, ಡಾ.ವಿಜಯ್, ಪಿಡಿಒ ರಿಹಾನ್ ಪಾಷಾ, ಸ್ಥಳೀಯರಾದ ಮುರಳಿಧರ್, ತೀರ್ಥಮಲ್ಲೇಶ್, ಮತ್ತಣ್ಣ, ರಮೇಶ್ ಸುವರ್ಣ ಇದ್ದರು.

# ನವೋದಯ ಸಂಸ್ಥೆಯಿಂದ ಎಲ್‌ಕೆಜಿ-ಯುಕೆಜಿ ಆರಂಭ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಪ್ರತಿಷ್ಠಿತ ವಿದ್ಯಾಸಂಸ್ಥೆ ಎನ್ನಿಸಿಕೊಂಡಿರುವ ನವೋದಯ ವಿದ್ಯಾಸಂಸ್ಥೆಯಲ್ಲಿ ಇಂದಿನ ಕಾಲಘಟ್ಟಕ್ಕೆ ತಕ್ಕಂತೆ ಬದಲಾವಣೆಗೆ ಮುಂದಾಗಿ ಮುಂದಿನ 2026-27ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಮಾಂಟೇಸರಿ ಪದ್ಧತಿಯ ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳನ್ನು ಆರಂಭಿಸಲಾಗುತ್ತಿದೆಂದು ವಿದ್ಯಾ ಸಂಸ್ಥೆಯ ಅಧ್ಯಕ್ಷ ಸಿ.ಜೆ.ಮಂಜುನಾಥ್ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲ್ಲೂಕಿನ ಬಡಜನರ ವಿದ್ಯಾಭ್ಯಾಸದ ಸಲುವಾಗಿ ಸ್ವಾತಂತ್ರಪೂರ್ವದಲ್ಲಿ ಆರಂಭಿಸಲಾದ ನವೋದಯ ವಿದ್ಯಾಸಂಸ್ಥೆಯೂ ಅಯಾ ಕಾಲಘಟ್ಟಕ್ಕೆ ಗುಣಮಟ್ಟದ ಶಿಕ್ಷಣ ನೀಡುತ್ತಾ ಜಿಲ್ಲೆಯಲ್ಲಿಯೇ ನಂ.1 ವಿದ್ಯಾಸಂಘವಾಗಿತ್ತು. ಇತ್ತೀಚಿಗೆ ಖಾಸಗಿ ಶಿಕ್ಷಣ ಸಂಸ್ಥೆಗಳ ವೈಭವೀಕರಣ, ಪ್ರಚಾರದ ಹಿನ್ನಲೆಯಲ್ಲಿ ನವೋದಯ ವಿದ್ಯಾಸಂಘವು ತನ್ನ ವೈಭವವನ್ನು ಕಳೆದುಕೊಳ್ಳುತ್ತಾ ಸಾಧಾರಣ ಮಟ್ಟಕ್ಕೆ ಕುಸಿದಿತ್ತು. ಇದೀಗ ತಮ್ಮ ನೇತೃತ್ವದ ಆಡಳಿತ ಮಂಡಳಿಯೂ ಕಳೆದ 2 ವರ್ಷಗಳಿಂದ ಸಂಸ್ಥೆಯ ಏಳ್ಗೆಗೆ ಶ್ರಮಿಸುತ್ತಿದ್ದೇವೆ.



ಸಂಸ್ಥೆಯಲ್ಲಿ ಇದೀಗ 1 ಸಾವಿರ ವಿದ್ಯಾರ್ಥಿಗಳ ದಾಖಲಾತಿ ಹೊಂದಿ, ಗುಣಮಟ್ಟದ ಶೌಚಾಲಯ, ಕ್ರೀಡಾಂಗಣ, ಉತ್ತಮ ಭೋದಕರಿಂದ ಪಾಠ, ಕಟ್ಟಡಗಳ ದುರಸ್ತಿಯೊಂದಿಗೆ ಅತ್ಯಾಧುನಿಕವಾಗಿ ಸಜ್ಜುಗೊಳಿಸಲಾಗಿದೆ ಎಂದರು.

ಆಡಳಿತ ಮಂಡಳಿ ತೀರ್ಮಾನದ ಮೇರೆಗೆ ಮುಂದಿನ ಶೈಕ್ಷಣಿಕ ವರ್ಷದಿಂದ ಮಾಂಟೇಸರಿ ಮಾದರಿ ಎಲ್‌ಕೆಜಿ-ಯುಕೆಜಿ ತರಗತಿಗಳನ್ನು ಆರಂಭಿಸಲು ತೀರ್ಮಾನಿಸಲಾಗಿದೆ. ಹಂತ ಹಂತ ವಾಗಿ ಇಂಗ್ಲೀಷ್ ಮೀಡಿಯಂನ ಪ್ರೈಮರಿ, ಹೈಯರ್ ಪ್ರೈಮರಿ ತರಗತಿಗಳನ್ನು ಆರಂಭಿಸಲಾಗುವುದು, ಪಟ್ಟಣದ ಹೃದಯಭಾಗದಲ್ಲಿರುವ ನಮ್ಮ ಶಾಲೆಗೆ ತಾಲ್ಲೂಕಿನ ಜನತೆ ತಮ್ಮ ಮಕ್ಕಳನ್ನು ದಾಖಲಾತಿ ಮಾಡಿಸಿ ಗುಣಮಟ್ಟದ ಶಿಕ್ಷಣದ ಲಾಭ ಪಡೆಯುವಂತೆ ಮನವಿ ಮಾಡಿದರು.

ಸಂಸ್ಥೆಯ ಕಾರ್ಯದರ್ಶಿ ಕೆ.ಪಿ. ಶರತ್ ಕಂಬಾಳು ಅವರು ಮಾತನಾಡಿ, ನಮ್ಮ ಸಂಸ್ಥೆಯಲ್ಲಿ ದಾಖಲಾತಿ ಪ್ರಮಾಣ ಕ್ಷೀಣಿಸಿತ್ತು, ತಮ್ಮ ಆಡಳಿತ ಮಂಡಳಿರಚನೆಯಾದ ನಂತರ ಇದೀಗ 1 ಸಾವಿರ ಮಕ್ಕಳು ಶಿಕ್ಷಣ ಕಲಿಯುತ್ತಿದ್ದು, ಸದ್ಯ 1ರಿಂದ 7ನೇ ತರಗತಿವರೆಗೂ ಕನ್ನಡ ಮೀಡಿಯಂ, ಪ್ರೌಢ ಶಾಲಾ ವಿಭಾಗದಲ್ಲಿ ಕನ್ನಡ ಮತ್ತು ಇಂಗ್ಲೀಷ್ ಮೀಡಿಯಂ, ಸೇರಿ ಪಿಯು ತರಗತಿಗಳು ನಡೆಯುತ್ತಿದ್ದು, ಇದೀಗ ಎಲ್‌ಕೆಜಿ ಮತ್ತು ಯುಕೆಜಿ ಆರಂಭದ ಮೂಲಕ 1ರಿಂದ 10ನೇ ತರಗತಿವರೆಗೂ ಇಂಗ್ಲೀಷ್ ಮೀಡಿಯಂ ಆರಂಭಿಸುವ ಗುರಿ ಹೊಂದಲಾಗಿದೆ ಎಂದರು.

ಆಡಳಿತ ಮಂಡಳಿ ಗೌರವಾಧ್ಯಕ್ಷ ಡಾ.ಶೇಷಶಯನ, ನಿರ್ದೇಶಕರಾದ ಆನಂದ್ ಕಾಳೇನಹಳ್ಳಿ, ಆದರ್ಶ, ಗನ್ನಿ ಗಿರೀಶ್, ಎಂ.ಆರ್.ಸಂತೋಷ್, ರಾಘವೇಂದ್ರ, ಇದ್ದರು.

# ಎಸ್.ಐ.ಆರ್. ಹೆಸರಿನಲ್ಲಿ ದಮನಿತ ವರ್ಗಗಳ ಕಡಗಣನೆ

• ಪ್ರಜೋದಯ ವರದಿ

**ಸಕಲೇಶಪುರ:** ದೇಶದಲ್ಲಿ ಎಸ್.ಐ.ಆರ್. ಹೆಸರಿನಲ್ಲಿ ಮುಸ್ಲಿಂರು ಹಾಗೂ ದಮನಿತ ವರ್ಗಗಳನ್ನು ಮತದಾನ ಪ್ರಕ್ರಿಯೆಯಿಂದ ಹೊರಗಿಡುವ ಸಂಚು ನಡೆಯುತ್ತಿದ್ದು, ಅದರ ವಿರುದ್ಧ ಪ್ರತಿಯೊಬ್ಬರೂ ಎಚ್ಚರವಹಿಸಬೇಕೆಂದು ಎಸ್.ಡಿ.ಪಿ.ಐ. ರಾಜ್ಯ ಕೋಶಾಧಿಕಾರಿ ಅಮ್ಜದ್ ಖಾನ್ ಎಚ್ಚರಿಸಿದರು.

ಪಟ್ಟಣದ ಒಕ್ಕಲಿಗ ಸಮುದಾಯ ಭವನದಲ್ಲಿ ಸೋಶಿಯಲ್ ಡೆಮಾಕ್ರಾಟಿಕ್ ಪಾರ್ಟಿ ಆಫ್ ಇಂಡಿಯಾ ವತಿಯಿಂದ ಆಯೋಜಿಸಿದ್ದ ಪಕ್ಷ ಸಮಾವೇಶ ಉದ್ದೇಶಿಸಿ ಮಾತನಾಡಿದ ಅವರು, ಎಸ್.ಐ.ಆರ್. ಪ್ರಕ್ರಿಯೆಯನ್ನು ನುಸುಳುಕೋರರ ವಿರುದ್ಧ ಎಂದು ಹೇಳಲಾಗುತ್ತಿದೆ ಯಾದರೂ, ಅದರ ಹಿಂದಿನ ನಿಜವಾದ ಉದ್ದೇಶ ದೇಶದ ದಮನಿತ ವರ್ಗಗಳನ್ನು ರಾಜಕೀಯ ವಾಗಿ ಅಧಿಕಾರವಂಚಿತರನ್ನಾಗಿಸುವುದೇ ಆಗಿದೆ ಎಂದು ಆರೋಪಿಸಿದರು.

ಬಿಹಾರದಲ್ಲಿ 66 ಲಕ್ಷ ಜನರನ್ನು, ತಮಿಳುನಾಡಿನಲ್ಲಿ ಶೇ.16ರಷ್ಟು ಮತದಾರರನ್ನು ಹಾಗೂ ಉತ್ತರ ಪ್ರದೇಶದಲ್ಲಿ 3 ಕೋಟಿ ಜನರನ್ನು ಮತದಾನ ಪ್ರಕ್ರಿಯೆಯಿಂದ ಹೊರಗಿಡಲಾಗಿದೆ. ಪಶ್ಚಿಮ ಬಂಗಾಳದಲ್ಲೂ ಇದೇ ರೀತಿಯ ಪರಿಸ್ಥಿತಿ ನಿರ್ಮಾಣವಾಗಿದೆ. 11 ದಾಖಲಾತಿಗಳನ್ನು ಕಡ್ಡಾಯಗೊಳಿಸುವ ಚುನಾವಣಾ ಆಯೋಗ, ನಿವೃತ್ತಿ ಪ್ರಮಾಣ ಪತ್ರ ಅಥವಾ ಪಾಸ್‌ಪೋರ್ಟ್ ಎಲ್ಲರ ಬಳಿ ಇರಲು ಸಾಧ್ಯವೇ ಎಂಬುದನ್ನು ಚಿಂತಿಸಬೇಕಿದೆ. ಆಧಾರ್‌ಗೆ ಮಾನ್ಯತೆ ನೀಡದೇ ಇರುವುದು ಸಂಶಯ ಹುಟ್ಟಿಸುತ್ತಿದೆಂದು ಹೇಳಿದರು.





ಎಸ್.ಐ.ಆರ್. ಪ್ರಕ್ರಿಯೆ ತೆರೆ ಮರೆಯಲ್ಲಿ ನಡೆಯುತ್ತಿದ್ದು, ಪಶ್ಚಿಮಬಂಗಾಳ ಹಾಗೂ ಬಿಹಾರದಲ್ಲಿ ಒತ್ತಡದಿಂದ ಹಲವು ಪ್ರಾಮಾಣಿಕ ಅಧಿಕಾರಿ ಗಳು ಮೃತಪಟ್ಟಿದ್ದಾರೆ. ರಾಜ್ಯದಲ್ಲೂ ಸಹ ಎಸ್.ಐ.ಆರ್. ಪ್ರಕ್ರಿಯೆ ಸದ್ದಿಲ್ಲದೇ ಆರಂಭವಾಗುತ್ತಿದ್ದು, ಮುಸ್ಲಿಂ ಮತಗಳನ್ನು ವ್ಯವಸ್ಥಿತವಾಗಿ ತೆಗೆದು ಹಾಕುವ ಪ್ರಯತ್ನ ನಡೆಯುತ್ತಿದೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗಮನ ಹರಿಸದಿದ್ದಲ್ಲಿ ಎಸ್.ಡಿ.ಪಿ.ಐ. ವತಿಯಿಂದ ರಾಜ್ಯ ವ್ಯಾಪಿ ಹೋರಾಟ ನಡೆಸಲಾಗುವುದೆಂದು ಎಚ್ಚರಿಸಿದರು.

ವುಮೆನ್ಸ್ ಇಂಡಿಯಾ ಮೂವ್‌ಮೆಂಟ್ ರಾಜ್ಯ ಪ್ರಧಾನ ಕಾರ್ಯದರ್ಶಿ ನಸ್ರಿಯಾ ಬೆಳ್ಳಾರೆ ಮಾತನಾಡಿ, ಪ್ರಸ್ತುತ ರಾಜಕೀಯದಲ್ಲಿ ಮುಸ್ಲಿಂರು ದ್ವೇಷ ರಾಜಕಾರಣಕ್ಕೆ ಬಲಿಯಾಗುತ್ತಿದ್ದಾರೆ. ಬಡವರು ಹಾಗೂ ಮಹಿಳೆಯರಿಗೆ ಅಗತ್ಯ ದಾಖಲೆಗಳನ್ನು ಒದಗಿಸುವುದು ಕಷ್ಟಕರವಾಗಿದ್ದು, ಎಸ್.ಐ.ಆರ್. ಕುರಿತು ಸೂಕ್ತ ಮಾಹಿತಿ ಇಲ್ಲ. ಹೀಗಾಗಿ ಬೂತ್ ಮಟ್ಟದಲ್ಲಿ ಮನೆ ಮನೆಗೆ ತೆರಳಿ ಜಾಗೃತಿ ಮೂಡಿಸಬೇಕಿದೆ. ನಮ್ಮ ಹಕ್ಕುಗಳನ್ನು ನಾವು ಸಂಘಟಿತ ಹೋರಾಟದ ಮೂಲಕವೇ ಪಡೆದುಕೊಳ್ಳಬೇಕೆಂದರು.

ಎಸ್.ಡಿ.ಪಿ.ಐ. ಜಿಲ್ಲಾ ಅಧ್ಯಕ್ಷ ಇಮ್ರಾನ್ ಅರೇಹಳ್ಳಿ, ಜಿಲ್ಲಾ ಉಪಾಧ್ಯಕ್ಷ ಸಿದ್ದಿಕ್ ಆನೆ ಮಹಲ್, ತಾಲ್ಲೂಕು ಅಧ್ಯಕ್ಷ ವಾಜೀದ್ ಪಾಷ, ಉಪಾಧ್ಯಕ್ಷ ಸೈಯದ್ ಮೈದೀನ್, ಮುಖಂಡರಾದ ಹೈದರ್ ಆನೆ ಮಹಲ್, ಸಾಧಿಕ್ ಮಂಜರಾಬಾದ್, ಸಲೀಂ ಉಪಸ್ಥಿತರಿದ್ದರು.

# ಇಂದು ರಾಷ್ಟ್ರೀಯ ಯುವ ಸಪ್ತಾಹ

• ಪ್ರಜೋದಯ ವರದಿ



**ಹಾಸನ:** ನಗರದ ಧರ್ಮಸ್ಥಳ ಮಂಜುನಾಥೇಶ್ವರ ಮಹಾ ಆಯುರ್ವೇದ ಮಹಾವಿದ್ಯಾಲಯದಲ್ಲಿ ಸ್ವಾಮಿ ವಿವೇಕಾನಂದರ 163ನೇ ಜನ್ಮ ದಿನಾಚರಣೆ ಅಂಗವಾಗಿ ಜ.12ರ ಬೆಳಿಗ್ಗೆ 10 ಗಂಟೆಗೆ ರಾಷ್ಟ್ರೀಯ ಯುವ ಸಪ್ತಾಹ ಕಾರ್ಯಕ್ರಮ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಗೌರವ ಉಪಸ್ಥಿತಿ ವಹಿಸಲಿದ್ದಾರೆ. ಶಾಸಕ ಸ್ವರೂಪ್ ಪ್ರಕಾಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಸದ ಶ್ರೇಯಸ್ ಎಂ. ಪಟೇಲ್, ಶಾಸಕರಾದ ಹೆಚ್.ಡಿ. ರೇವಣ್ಣ, ಸಿ.ಎನ್.ಬಾಲಕೃಷ್ಣ, ಎ.ಮಂಜು, ಹೆಚ್.ಕೆ.ಸುರೇಶ್, ಸಿಮೆಂಟ್ ಮಂಜು ಇತರರು ಭಾಗವಹಿಸಲಿದ್ದಾರೆ.

## ಸೈಬರ್ ವಂಚನೆ ಬಗ್ಗೆ ಎಚ್ಚರವಿರಲಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ನಗರ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿದ್ದ ಸೈಬರ್ ವಂಚನೆ ಇದೀಗ ಹಳ್ಳಿಗಳಿಗೂ ಕಾಲಿಟ್ಟಿದ್ದು, ಸರಕಾರಿ ಯೋಜನೆಗಳ ನೆಪದಲ್ಲಿ ಮುಗ್ಧರನ್ನು ವಂಚಿಸುವ ಜಾಲ ಸಕ್ರಿಯವಾಗಿದೆ.

ಇಂತಹದ್ದೇ ಒಂದು ಪ್ರಕರಣ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನ ಶ್ರವಣಬೆಳಗೊಳ ಹೋಬಳಿ ಸುಂಡಹಳ್ಳಿ ಗ್ರಾಮದಲ್ಲಿ ನಡೆದಿದೆ. ಇಲ್ಲಿನ ನಿವಾಸಿ ನಾಗಣ್ಣ ಎಂಬುವವರ ಮಗಳು ಪಲ್ಲವಿಗೆ ಸರಕಾರಿ ಯೋಜನೆಯೊಂದರ ನೆಪದಲ್ಲಿ 12ಸಾವಿರ ರೂ. ವಂಚನೆ ಮಾಡಲಾಗಿದೆ.

ಶನಿವಾರ ಪಲ್ಲವಿ ಅವರಿಗೆ ಅಪರಿಚಿತ ಸಂಖ್ಯೆಯೊಂದರಿಂದ ಕರೆ ಬಂದಿದ್ದು, ನಾವು ಸರ್ಕಾರಿ ಇಲಾಖೆಯೊಂದರಿಂದ ಮಾತನಾಡುತ್ತಿದ್ದೇವೆಂದು ಆರೋಪಿಗಳು ಪರಿಚಯಿಸಿ ಕೊಂಡಿದ್ದಾರೆ. ಅಂಗನವಾಡಿಯಿಂದ ಬರುವ ಸೌಲಭ್ಯಗಳಿಂದ ಇಂದು ನಿಮ್ಮ ಖಾತೆಗೆ ಸರ್ಕಾರ 12,000 ರೂ.ಜಮೆ ಮಾಡುತ್ತದೆ ಎಂದು ತಿಳಿಸಿದ್ದಾರೆ.

ಅನಂತರ ಈ ಹಣವನ್ನು ಪಡೆಯಲು ತಾವು ನಾವು ಕಳಿಸುವ ಸಂದೇಶದ ಮೇಲಿರುವ ಲಿಂಕ್ ಅನ್ನು ಕ್ಲಿಕ್ ಮಾಡಿ ಎಂದು ಹೇಳಿದ್ದಾರೆ. ಹಣ ಬರುತ್ತದೆ ಎಂಬ ಆಸೆಗೆ ಬಿದ್ದ ಪಲ್ಲವಿ, ಲಿಂಕ್ ಕ್ಲಿಕ್ ಮಾಡುತ್ತಿದ್ದಂತೆ ಅವರ ಖಾತೆಯಿಂದ 12 ಸಾವಿರ ರೂಪಾಯಿ ಕಟ್ ಆಗಿದೆ. ತಮ್ಮ ಖಾತೆಗೆ ಹಣ ಬರುತ್ತದೆ ಎಂಬ ಆಸೆಯಿಂದ ಲಿಂಕ್ ಕ್ಲಿಕ್ ಮಾಡಿ, ಹಣ ಕಳೆದುಕೊಂಡ ಪಲ್ಲವಿ ಅವರು, ಇದೀಗ ಶ್ರವಣಬೆಳಗೊಳ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿದ್ದಾರೆ.

ಇಂತಹ ಅಪರಿಚಿತ ಕರೆಗಳಿಂದ ಮೋಸ ಹೋಗಿ ಹಣ ಕಳೆದುಕೊಳ್ಳಬೇಡಿ, ನಿಮ್ಮ ಮುಗ್ಧತೆಯನ್ನೇ ಕಳ್ಳರು ದುರುಪಯೋಗ ಮಾಡಿಕೊಳ್ಳುತ್ತಾರೆಂದು ಪಿಎಸ್‌ಐ ನವೀನ್ ಹಾಗೂ ಸುಬ್ರಹ್ಮಣ್ಯ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

# ಕೊಹ್ಲಿ ಬ್ಯಾಟಿಂಗ್: ಭಾರತಕ್ಕೆ 4 ವಿಕೆಟ್ ಜಯ

• ಪ್ರಜೋದಯ ವರದಿ

**ವಡೋದರಾ:** ವಿರಾಟ್ ಕೊಹ್ಲಿ ಅವರ ಅರ್ಧ ಶತಕದ ನೆರವಿನಿಂದ ಭಾರತ 49 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 306 ರನ್ ಗಳಿಸುವ ಮೂಲಕ 4 ವಿಕೆಟ್‌ಗಳ ಗೆಲುವು ಸಾಧಿಸಿದೆ.

ಕೊಹ್ಲಿ 91 ಎಸೆತಗಳಲ್ಲಿ 4 ಬೌಂಡರಿ, 1 ಸಿಕ್ಸರ್‌ನಿಂದ 93 ರನ್‌ಗಳಿಸಿದರು. ರೋಹಿತ್ ಶರ್ಮಾ 26, ಶುಭಮನ್ ಗಿಲ್ 56, ಶ್ರೇಯಸ್ ಅಯ್ಯರ್ 49, ರವೀಂದ್ರ ಜಡೇಜಾ 4, ಹರ್ಷಿತ್ ರಾಣಾ 29, ಕೆ. ಎಲ್.ರಾಹುಲ್ ಅಜೇಯ 29 ಹಾಗು ವಾಷಿಂಗ್ಟನ್ ಸುಂದರ್ ಅಜೇಯ 7 ರನ್ ಗಳಿಸಿದರು.

ಹರ್ಷಿತ್ ರಾಣ ಹಾಗೂ ಕೆ.ಎಲ್. ರಾಹುಲ್ ಸಮಯೋಚಿತ ಬ್ಯಾಟಿಂಗ್ ಮಾಡುವ ಮೂಲಕ 6 ಎಸೆತ ಬಾಕಿಯಿರುವಂತೆ ಗೆಲುವಿನ ಗಡಿ ದಾಟಿಸಿದರು.

ನ್ಯೂಜಿಲೆಂಡ್ ವೇಗಿ ಕೈಲ್ ಜೇಮಿಸನ್ 4 ವಿಕೆಟ್ ಪಡೆಯುವ ಮೂಲಕ, ಭಾರತದ ಪರವಾಗಿದ್ದ ಪಂದ್ಯವನ್ನು ರೋಚಕ ಅಂತ್ಯವಾಗುವಂತೆ ಮಾಡಿದರು. ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ ಭಾರತವು 1-0 ಮುನ್ನಡೆ ಪಡೆಯಿತು.

ಆತಿಥೇಯ ಭಾರತ ವಿರುದ್ಧ ಇಲ್ಲಿನ ಬಿಸಿಎ ಮೈದಾನದಲ್ಲಿ ನಡೆದ ಪ್ರಥಮ




ಏಕದಿನ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ನಡೆಸಿರುವ ನ್ಯೂಜಿಲೆಂಡ್ ನಿಗದಿತ 50 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 300 ರನ್ ಗಳಿಸಿತು.

ಟಾಸ್ ಗೆದ್ದ ಭಾರತದ ನಾಯಕ ಶುಭಮನ್ ಗಿಲ್ ಮೊದಲು ಫೀಲ್ಡಿಂಗ್ ಆಯ್ದುಕೊಂಡರು. ಪ್ರವಾಸಿಗರಿಗೆ ಓಪನರ್‌ಗಳಾದ ಡೆವೋನ್ ಕಾನ್ವೆ ಹಾಗೂ ಹೆನ್ರಿ ನಿಕೋಲ್ಸ್ ಉತ್ತಮ ಆರಂಭವೊದಗಿಸಿದರು. ಇವರಿಬ್ಬರು ಮೊದಲ ವಿಕೆಟ್‌ಗೆ 21.4 ಓವರ್‌ಗಳಲ್ಲಿ 117 ರನ್ ಗಳಿಸಿದರು.

ಕಾನ್ವೆ 56 ಹಾಗೂ ನಿಕೋಲ್ಸ್ 62 ರನ್ ಗಳಿಸಿ ಔಟ್ ಆದರು. ಈ ನಡುವೆ ವಿಲ್ ಯಂಗ್ ನಿರಾಸೆ ಮೂಡಿಸಿದರು.

ಮಧ್ಯಮ ಕ್ರಮಾಂಕದಲ್ಲಿ ಆಕರ್ಷಕ ಇನ್ನಿಂಗ್ಸ್ ಕಟ್ಟಿದ ಡೆರಿಲ್ ಮಿಚೆಲ್ ತಂಡವನ್ನು ಸವಾಲಿನ ಮೊತ್ತದತ್ತ ಮುನ್ನಡೆಸಿದರು. 71 ಎಸೆತಗಳಲ್ಲಿ ಐದು ಬೌಂಡರಿ ಹಾಗೂ 3 ಸಿಕ್ಸರ್ ನೆರವಿನಿಂದ 84 ರನ್ ಗಳಿಸಿದರು. ಇನ್ನುಳಿದಂತೆ ಕ್ರಿಸ್ಟಿಯಾನ್ ಕ್ಲಾರ್ಕ್ ಅಜೇಯ 24, ಗ್ಲೆನ್ ಫಿಲಿಪ್ಸ್ 12, ಮಿಚೆಲ್ ಹೇ 18, ನಾಯಕ ಮೈಕೆಲ್ ಬ್ರೇಸ್‌ವೆಲ್ 16 ರನ್ ಗಳಿಸಿದರು.

ಭಾರತದ ಪರ ಮೊಹಮ್ಮದ್ ಸಿರಾಜ್, ಹರ್ಷಿತ್ ರಾಣಾ ಹಾಗೂ ಪ್ರಸಿದ್ಧ ಕೃಷ್ಣ ತಲಾ 2 ಮತ್ತು ಕುಲದೀಪ್ ಯಾದವ್ ಒಂದು ವಿಕೆಟ್ ಗಳಿಸಿದರು. ಸರಣಿಯ 2ನೇ ಪಂದ್ಯ ಜ.14ರಂದು ರಾಜ್‌ಕೋಟ್ ಮತ್ತು ಅಂತಿಮ ಪಂದ್ಯ ಜ.18ರಂದು ಇಂದೋರ್‌ನಲ್ಲಿ ನಡೆಯಲಿದೆ.

### ಸಂಗಕ್ಕರ ದಾಖಲೆ ಮುರಿದು ಸಚಿನ್ ಸನಿಹಕ್ಕೆ ಕೊಹ್ಲಿ




ವಡೋದರ: ರನ್ ಮೆಷಿನ್ ಖ್ಯಾತಿಯ ಭಾರತ ಕ್ರಿಕೆಟ್ ತಂಡದ ಆಟಗಾರ ವಿರಾಟ್ ಕೊಹ್ಲಿ, ಏಕದಿನ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 28 ಸಾವಿರ ರನ್‌ಗಳ ಮೈಲಿಗಲ್ಲು ತಲುಪಿದ್ದಾರೆ.

ಅಷ್ಟೇ ಅಲ್ಲದೆ ಶ್ರೀಲಂಕಾದ ಮಾಜಿ ನಾಯಕ ಕುಮಾರ ಸಂಗಕ್ಕರ ಅವರ ದಾಖಲೆ ಮುರಿದಿರುವ ವಿರಾಟ್, ದಿಗ್ಗಜ ಸಚಿನ್ ತೆಂಡೂಲ್ಕರ್ ಬಳಿಕ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟರ್ ಎಂಬ ಖ್ಯಾತಿಗೆ ಭಾಜನರಾಗಿದ್ದಾರೆ. ವಡೋದರದಲ್ಲಿ ಪ್ರವಾಸಿ ನ್ಯೂಜಿಲೆಂಡ್ ವಿರುದ್ಧ ನಡೆಯುತ್ತಿರುವ ಮೊದಲ ಏಕದಿನ ಪಂದ್ಯದಲ್ಲಿ ಕೊಹ್ಲಿ ಈ ಸಾಧನೆ ಮಾಡಿದ್ದಾರೆ.

ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಕುಮಾರ ಸಂಗಕ್ಕರ ಒಟ್ಟು 28,016 ರನ್ ಗಳಿಸಿ ದ್ದರು. ಈ ದಾಖಲೆಯನ್ನೀಗ ಕೊಹ್ಲಿ ಮುರಿದಿದ್ದಾರೆ. ಆ ಮೂಲಕ ಸಚಿನ್ ತೆಂಡೂಲ್ಕರ್ ಸನಿಹಕ್ಕೆ ತಲುಪಿದ್ದಾರೆ.

ರನ್ ಬೇಟೆಯಲ್ಲಿ ಅಗ್ರಸ್ಥಾನದಲ್ಲಿರುವ ಸಚಿನ್ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಒಟ್ಟು 34,357 ರನ್ ಗಳಿಸಿದ್ದಾರೆ. 624ನೇ ಇನ್ನಿಂಗ್ಸ್‌ನಲ್ಲಿ ಕೊಹ್ಲಿ 28 ಸಾವಿರ ರನ್‌ಗಳ ಮೈಲಿಗಲ್ಲು ತಲುಪಿದ್ದಾರೆ.

ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಸಾಧಕರು
ಸಚಿನ್ ತೆಂಡೂಲ್ಕರ್ 34,357
ವಿರಾಟ್ ಕೊಹ್ಲಿ 28,017
ಕುಮಾರ ಸಂಗಕ್ಕರ 28,016
ರಿಕಿ ಪಾಂಟಿಂಗ್ 27,483
ಮಹೇಲಾ ಜಯವರ್ಧನೆ 25,957

## ಮಳೆಯ ಸಿಂಚನ : ರೈತರಲ್ಲಿ ಹೆಚ್ಚಿದ ಆತಂಕ

» ಮೊದಲನೇ ಪುಟದಿಂದ

ಮುಂದುವರಿದರೇ ರೈತರಿಗೆ ಸಮಸ್ಯೆ ಉಂಟಾಗ ಬಹುದಾಗಿದೆ.ಬಹುತೇಕ ರೈತರು ಜನವರಿ ತಿಂಗಳಲ್ಲಿ ಭತ್ತ ಮತ್ತು ರಾಗಿ ಬಡಿಯುವ ಕೆಲಸವನ್ನು ಪೂರ್ಣಗೊಳಿಸುತ್ತಾರೆ. ಹಲವು ಕಡೆ ಒಕ್ಕಣೆ ಮಾಡುವ ಸಲುವಾಗಿ ಕಣವನ್ನು ಸಿದ್ದಪಡಿಸಿ ಕೊಂಡಿ ರುವುದು ಕಂಡು ಬಂದಿದೆ. ಮಳೆಯ ಸಿಂಚನ, ಮೋಡ ಕವಿದ ವಾತಾವರಣ ಮುಂದುವರಿದರೇ ಸಮಸ್ಯೆ ಎದುರಾಗುವ ಸಾಧ್ಯತೆ ಹೆಚ್ಚಿದೆ.

ಮೆಕ್ಕೆಜೋಳ ಬೆಲೆ ಕುಸಿತದಿಂದ ಇನ್ನೂ ಹಲವಾರು ರೈತರು ಮುಂಗಾರು ಹಂಗಾಮಿನಲ್ಲಿ ಕೈಗೊಂಡಿರುವ ಜೋಳದ ಮೆದೆಯನ್ನು ಇಡಿದಿಟ್ಟುಕೊಂಡಿದ್ದಾರೆ. ಅಲ್ಲದೆ ಹಿಂಗಾರು ಹಂಗಾಮಿನಲ್ಲಿ ಕೈಗೊಂಡಿರುವ ಮೆಕ್ಕೆ ಜೋಳದ ಬೆಳೆ ಕಟಾವಿಗೆ ಬಂದಿದೆ. ಇದೇ ವಾತವರಣ ಮುಂದುವರಿದರೇ ಮೆಕ್ಕೆಜೋಳ ಸಂಸ್ಕರಣೆಗೆ ಹಿನ್ನೆಡೆಯಾಗಲಿದೆ.

ಮಳೆ ಹಿನ್ನೆಲೆ ತಡವಾಗಿ ಆರಂಭಗೊಂಡಿರುವ ಅಡಿಕೆ ಸಂಸ್ಕರಣೆಗೂ ಇಂದಿನ ವಾತವರಣ, ಮುಂದೆ ಆಗಬಹುದಾಗಿರುವ ಮಳೆ ಮತ್ತು ಮೋಡ ಕವಿದ ವಾತಾವರಣದಿಂದ ಅಡಿಕೆ ಸಂಸ್ಕರಣೆಗೂ ತೊಂದರೆ ಎದುರಾಗಿದೆ. ಅದೇ ರೀತಿ ತಾಲೂಕಿನ ಮಲ್ಲಿಪಟ್ಟಣ ಹೋಬಳಿ ವ್ಯಾಪ್ತಿಯಲ್ಲಿ ಕಾಫಿ, ಏಲಕ್ಕಿ ಬೆಳೆ ಕೊಯ್ಲುಗೆ ಬಂದಿದ್ದು, ಮಳೆ ಸಿಂಚನ ಮುಂದುವರಿದರೇ ಬೆಳೆಗಾರರಿಗೆ ಸಮಸ್ಯೆ ಉಂಟಾಗಲಿದೆ.

## ಕಾರ್ಯಕರ್ತರಿಗೆ ತೊಂದರೆ ನೀಡಿದರೆ ಸಹಿಸಲ್ಲ

» ಮೊದಲನೇ ಪುಟದಿಂದ

ಲಕ್ಷಕ್ಕೂ ಅಧಿಕ ಜನರು ಪಾಲ್ಗೊಳ್ಳಲಿದ್ದಾರೆ. ರಾಜ್ಯದಲ್ಲಿ ಜೆಡಿಎಸ್ ಪಕ್ಷವನ್ನು ಮತ್ತೊಮ್ಮೆ ಅಧಿಕಾರಕ್ಕೆ ತರಬೇಕು. 2028ಕ್ಕೆ ಮೈತ್ರಿ ಕೂಟದ ಅಭ್ಯರ್ಥಿ ಮುಖ್ಯಮಂತ್ರಿಯಾಗಲಿದ್ದಾರೆ. ಬೇಲೂರಿನಲ್ಲಿ ನಮ್ಮ ಪಕ್ಷದ ಅಭ್ಯರ್ಥಿಯೇ ಸ್ಪರ್ಧಿಸಲಿದ್ದು, ಗೆಲುವು ಶತಸಿದ್ಧವೆಂದು ವಿಶ್ವಾಸ ವ್ಯಕ್ತಪಡಿಸಿದರು.

ಜೆಡಿಎಸ್ ತಾಲ್ಲೂಕು ಅಧ್ಯಕ್ಷ ತೊ.ಚ.ಅನಂತ ಸುಬ್ಬರಾಯ ಅವರು ಮಾತನಾಡಿ, ತಾಲ್ಲೂಕಿನಲ್ಲಿ ಹೋಬಳಿ ಮಟ್ಟದ ಸಭೆ ನಡೆಸಿ ಹೊಸ ಮುಖಗಳಿಗೆ ಅವಕಾಶ ನೀಡಲಾಗುವುದು. ಕಾಡಾನೆ ಸಮಸ್ಯೆಗೆ ಪರಿಹಾರ ಕಲ್ಪಿಸಲು ಹೆಚ್ಚಿನ ಕಾಳಜಿ ವಹಿಸಿರುವುದು ನಮ್ಮ ಪಕ್ಷ. ಮಲೆನಾಡು ಅಭಿವೃದ್ಧಿಗಾಗಿ, ಸಾರ್ವಜನಿಕರ ಹಿತ ಕಾಪಾಡಲು ನಮ್ಮ ನಾಯಕರು ಹೋರಾಡುತ್ತಿದ್ದಾರೆ. ಮೈತ್ರಿ ವಿಚಾರವಾಗಿ ನಮ್ಮ ನಾಯಕರು ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧ ಎಂದರು.

ಹೆಚ್‌ಡಿಸಿ ಬ್ಯಾಂಕ್ ನಿರ್ದೇಶಕ ಎಂ.ಎ.ನಾಗರಾಜ್, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಬಿ.ಡಿ. ಚಂದ್ರೆಗೌಡ, ಜಿ.ಟಿ.ಇಂದಿರಾ, ಉಪಾಧ್ಯಕ್ಷ ರಾಜಶೇಖರ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಲತಾ ಮಂಜೇಶ್ವರಿ, ಮರಿಯಪ್ಪ, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ರಂಗೇಗೌಡ, ಸುಭಾನ್, ಅಶ್ವಥ್, ಸದಸ್ಯರಾದ ರವಿ ಬಲ್ಲೇನಹಳ್ಳಿ, ಮುಖಂಡರಾದ ನಟರಾಜ್, ರಾಮಚಂದ್ರ, ಭಾರತಿ ಅರುಣ ಕುಮಾರ್, ಮೊಗಪ್ಪಗೌಡ, ದಿನೇಶ್ ,ನಾಗೇಶ್, ಸೋಮೇಶ್, ಸತೀಶ್ ಇತರರಿದ್ದರು.

## ತಾಕತ್ತಿದ್ದರೆ ಅರಸೀಕೆರೆಯಿಂದ ಸ್ಪರ್ಧೆ ಮಾಡಲಿ

» ಮೊದಲನೇ ಪುಟದಿಂದ

ಸೇರಿ ಜನಸಮಾನ್ಯರು ಊಹಿಸಲು ಸಾಧ್ಯವಿಲ್ಲದ ಕೆಲಸಗಳನ್ನು ದೇವರಾಜ್ ಅರಸು ಮಾಡಿದ್ದಾರೆ. ಆದ್ದರಿಂದಲೇ ಇಂದಿಗೂ ಅವರನ್ನು ಸ್ಮರಿಸುವ, ಅನುಕರಣೆ ಮಾಡುವ ಪರಿಪಾಠ ಮುಂದುವರಿದಿದೆ. ಇದೀಗ ಸಿದ್ದರಾಮಯ್ಯ ಕೂಡ ಅರಸು ಮಾರ್ಗದಲ್ಲಿ ಸಾಗುತ್ತಿರುವುದು ಶ್ಲಾಘನೀಯವೆಂದರು.

ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಟೇಲ್ ಶಿವಪ್ಪ, ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಗೀಜಿಹಳ್ಳಿ ಧರ್ಮಶೇಖರ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬಿಳಿಚೌಡಯ್ಯ, ಹರತನಹಳ್ಳಿ ಜಯಣ್ಣ ಮಾತನಾಡಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀನಿವಾಸ್, ಗಂಜಿಗೆರೆ ಚಂದ್ರಶೇಖರ್, ನಗರ ಯೋಜನಾ ಪ್ರಾಧಿಕಾರದ ಸದಸ್ಯ ಬಾಲಮುರುಗನ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಸುಲೋಚನಾ ಬಾಯಿ ಇತರರಿದ್ದರು.

## ನರೇಗಾ: ಎರಡು ದಿನಗಳ ವಿಶೇಷ ಅಧಿವೇಶನ

» ಮೊದಲನೇ ಪುಟದಿಂದ

ಎಲ್ಲಾ ತೀರ್ಮಾನ ದೆಹಲಿಯಲ್ಲಿ ಕೈಗೊಳ್ಳುವಂತಹ ಕಾನೂನು ತರಲಾಗಿದೆ. ಕೇಂದ್ರ ಸರ್ಕಾರ ಶೇ. 60ರಷ್ಟು ಅನುದಾನ ಭರಿಸಿದರೆ, ರಾಜ್ಯ ಸರ್ಕಾರ ಶೇ. 40ರಷ್ಟು ಭರಿಸಬೇಕು. ಇದು ರಾಜ್ಯಗಳ ಮೇಲೆ ಹಾಕಿರುವ ಹೆಚ್ಚಿರುವ ಹೊರೆ. ಇದು ಸರ್ವಾಧಿಕಾರ ಧೋರಣೆ. ಹಿಟ್ಲರ್ ಆಡಳಿತದ ಪ್ರತೀಕವೆಂದು ಆರೋಪಿಸಿದರು.

**ಹೆಚ್.ಡಿ.ಕುಮಾರಸ್ವಾಮಿ ವಿಧಾನಸಭೆಗೆ ಬರಲಿ**

ನರೇಗಾ ಯೋಜನೆಯ ಹೊಸ ಸ್ವರೂಪದ ಕುರಿತು ಬಹಿರಂಗ ಚರ್ಚೆಗೆ ವಿಶೇಷ ಅಧಿವೇಶನ ನಡೆಯಲಿದ್ದು, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿಗೆ ಅಷ್ಟೊಂದು ಆಸಕ್ತಿ ಇದ್ದರೆ ರಾಷ್ಟ್ರಪತಿಯಿಂದ ಅನುಮತಿ ಪಡೆದು ವಿಧಾನಸಭೆಯಲ್ಲಿ ಚರ್ಚೆಗೆ ಬರಲಿ ಎಂದು ವಿಧಾನ ಪರಿಷತ್ ಸದಸ್ಯ ರಮೇಶ್ ಬಾಬು ಅವರು ಸವಾಲು ಹಾಕಿದ್ದಾರೆ.

ಹೊಸ ಕಾಯ್ದೆಯ ಮೂಲಕ ನರೇಗಾ ಯೋಜನೆಯನ್ನು ಜನವಿರೋಧಿಯಾಗಿ ಕೇಂದ್ರ ಸರ್ಕಾರ ರೂಪಿಸಿದೆ. ಕಾಯ್ದೆಯಲ್ಲಿರುವ ಅಂಶಗಳ ಚರ್ಚೆಗೆ ಅಧಿವೇಶನ ಕರೆಯಲು ರಾಜ್ಯ ಸರ್ಕಾರ ಮುಂದಾಗಿದೆ. ಅಲ್ಲಿ ಬಹಿರಂಗ ಚರ್ಚೆಗೆ ಮುಕ್ತ ಅವಕಾಶವಿದೆ. ಆದರೆ, ಬಹಿರಂಗ ಚರ್ಚೆಗೆ ಸಿದ್ಧ ಎಂದು ಹೇಳುವ ಮೂಲಕ ಕುಮಾರಸ್ವಾಮಿ ತಮ್ಮ ಬೌದ್ಧಿಕ ದಿವಾಳಿತನ ಸಾಬೀತು ಪಡಿಸಿದ್ದಾರೆಂದು ಟೀಕಿಸಿದರು.

# ದೇವರು-ಭಕ್ತನ ಮಧ್ಯೆ ಅರ್ಚಕನೇ ಸೇತುವೆ: ಶಿವಾಚಾರ್ಯ ಶ್ರೀ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಭಕ್ತ ಹಾಗೂ ದೇವರ ಮಧ್ಯೆ ಸಂಪರ್ಕ ಸೇತುವೆಯಾಗಿ ಪ್ರಮುಖ ಪಾತ್ರ ವಹಿಸುವಲ್ಲಿ ಅರ್ಚಕರ ಸೇವೆ ಶ್ಲಾಘನೀಯವೆಂದು ನುಗ್ಗೇಹಳ್ಳಿ ಪುರವರ್ಗ ಹಿರೇಮಠದ ಶ್ರೀ ಮಹೇಶ್ವರ ಶಿವಾಚಾರ್ಯ ಹೇಳಿದರು.

ಪಟ್ಟಣದ ಗಣಪತಿ ಪೆಂಡಾಲ್‌ನಲ್ಲಿ ವೀರಶೈವ ಲಿಂಗಾಯತ ಪುರೋಹಿತರ ಸೇವಾ ಟ್ರಸ್ಟ್ (ರಿ.) ಉದ್ಘಾಟಿಸಿ ಮಾತನಾಡಿದ ಅವರು, ಪುರದ ಹಿತ ಕಾಪಾಡುವ ವ್ಯಕ್ತಿಯೇ ಪುರೋಹಿತ. ಕಾಗೆಯು ನವಿಲಾಗಲು ಸಾಧ್ಯವಿಲ್ಲ. ಹಾಗೆಯೇ ಜಂಗಮ ಮೂರ್ತಿ ವಂಶ ಹೊರತುಪಡಿಸಿ ಬೇರಾರು ಅರ್ಚಕರಾಗಲು ಸಾಧ್ಯವಿಲ್ಲ. ಆಗಮನ ವಿದ್ಯೆ ಕಲಿತವರಷ್ಟೇ ಅರ್ಚಕರಲ್ಲ. ಅದು ಸರ್ಕಾರ ಇಲ್ಲವೇ ಇಲಾಖೆಯ ಒಂದು ನಿಯಮವಷ್ಟೇ. ಆದರೆ, ಪೂರ್ವ ಕಾಲದಿಂದಲೂ ವಂಶ ಪಾರಂಪರಿಕವಾಗಿ ದೇವರ ಸೇವೆ ಸಲ್ಲಿಸುತ್ತಾ ಬಂದಿರುವ ಪ್ರತಿಯೊಬ್ಬರು ಅರ್ಚಕರೇ ಸರಿ ಎಂದರು.



ಜಂಗಮ ಮೂರ್ತಿ ವಂಶವು ಪಾರಂಪರಿಕವಾಗಿ ಅರ್ಚಕ ವೃತ್ತಿ ನಿರ್ವಹಿಸುತ್ತಿದ್ದು, ಸಮಾಜದ ಏಳಿಗೆ ಹಾಗೂ ಪವಿತ್ರತೆಯ ಸಲುವಾಗಿ ತಮ್ಮ ಬದುಕನ್ನು ಮುಡುಪಾಗಿಟ್ಟಿದ್ದು ದೇವರ ಸೇವೆಯನ್ನೇ ದೈನಂದಿನ ಚಟುವಟಿಕೆಯಾಗಿ ಮಾಡಿಕೊಂಡಿರುವುದು ಶ್ಲಾಘನೀಯ ಸಂಗತಿ. ಪೂರ್ವಕಾಲದಿಂದಲೂ ಭಾರತೀಯ ಸಂಸ್ಕೃತಿಯಲ್ಲಿ ಪುರೋಹಿತ್ಯ ಹಾಗೂ ಅರ್ಚಕ ವೃತ್ತಿಗೆ ಐತಿಹಾಸಿಕ ಮತ್ತು ಮಹತ್ವದ ಸ್ಥಾನ ಮಾನವಿದೆ. ರಾಜ ಮಹಾರಾಜರು ದೇವರ ಪೂಜೆಯ ಜೊತೆಗೆ ಗುರುಗಳ ಮಾರ್ಗದರ್ಶನ ಪಡೆಯುತ್ತಿದ್ದರೆಂದು ತಿಳಿಸಿದರು.

ಮನಸ್ಸು ಶುದ್ದತೆಯಿಂದ ಕೂಡಿದ್ದರೆ ಮಾಡುವ ಕೆಲಸದಲ್ಲಿ ಯಶಸ್ಸು ಸಿಗಲಿದ್ದು, ಸಾಧನೆಯ ಗುರಿಯು ಸುಲಭವಾಗಿದೆ. ಶಿಸ್ತು ಶ್ರದ್ಧೆ ಹಾಗೂ ಭಕ್ತಿ ಭಾವದೊಂದಿಗೆ ದೈವವನ್ನು ಆರಾಧಿಸಿದರೆ ಸಕಲವು ಪ್ರಾಪ್ತಿಯಾಗಲಿದೆ. ದೇವರ ಪಾದದಲ್ಲಿ ಮುಕ್ತಿಯು ಲಭಿಸಲಿದೆ ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ ಅವರು ಮಾತನಾಡಿ, ಪುರೋಹಿತರ ಹಿತ ಕಾಪಾಡುವಲ್ಲಿ ಸರ್ಕಾರವು ಬದ್ಧವಾಗಿದ್ದು, ಸದಾ ನಿಮ್ಮೊಂದಿಗೆ ಇರುತ್ತದೆ. ನಿಮ್ಮಗಳ ಕ್ಷೇಮ ಹಾಗೂ ಏಳಿಗೆಗೆ ಅಗತ್ಯ ಯೋಜನೆಗಳನ್ನು ಕಾರ್ಯರೂಪ ಗೊಳಿಸುವಲ್ಲಿ ಸರ್ಕಾರದ ಗಮನ ಸೆಳೆಯಲಾಗುವುದೆಂದು ಭರವಸೆ ನೀಡಿದರು.

ಅಖಿಲ ಭಾರತ ವೀರಶೈವ-ಲಿಂಗಾಯಿತ ಮಹಾಸಭಾ ಜಿಲ್ಲಾಧ್ಯಕ್ಷ ನವಿಲೆ ಪರಮೇಶ್ ಮಾತನಾಡಿ, ಅರ್ಚಕ ವೃತ್ತಿ ಎಂಬುದು ದೇವರ ಕೊಡುಗೆಯಾಗಿದ್ದು, ಯುಗ ಯುಗಗಳಿಂದಲೂ ಬಂದಿರುವ ಸಾಂಸ್ಕೃತಿಕ ಬಳುವಳಿಯಾಗಿದೆ. ಅರ್ಚಕರ ನಡುವೆ ಯಾವುದೇ ವೈಮನಸ್ಸು ಹಾಗೂ ಬಿರುಕು ಮೂಡಬಾರದು. ಒಗ್ಗಟ್ಟಿನೊಂದಿಗೆ ಮುನ್ನಡೆದರೆ ಸಮಸ್ಯೆ ಎದುರಾಗುವುದಿಲ್ಲ. ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಒಗ್ಗಟ್ಟಿನೊಂದಿಗೆ ಮುನ್ನಡೆಯಬೇಕೆಂದು ಸಲಹೆ ನೀಡಿದರು.

ಮುಜರಾಯಿ ದೇವಾಲಯ ಅರ್ಚಕರ ಸಂಘದ ತಾಲ್ಲೂಕು ಅಧ್ಯಕ್ಷ ವೇ.ಡಾ.ಶ್ರೀಧರ ಮೂರ್ತಿ ಅವರು ಮಾತನಾಡಿ, ಮುಜರಾಯಿ ಇಲಾಖೆ ಹಾಗೂ ಅರ್ಚಕರ ನಡುವೆ ಸಂಪರ್ಕ ಸೇತುವೆಯಾಗಿ ಕರ್ತವ್ಯ ನಿರ್ವಹಿಸುವ ಮೂಲಕ ಅರ್ಚಕರ ಸಮಸ್ಯೆಗಳನ್ನು ಬಗೆಹರಿಸಲು ಸದಾ ಸಿದ್ಧ ಇರುತ್ತೇನೆಂದು ಭರವಸೆ ನೀಡಿದರು.

ಶ್ರೀ ಮಹೇಶ್ವರ ಶಿವಾಚಾರ್ಯ ಸ್ವಾಮೀಜಿಯವರ ದಿವ್ಯ ಸಾನಿಧ್ಯದಲ್ಲಿ ನೂತನವಾಗಿ ಪ್ರಾರಂಭಗೊಂಡಿರುವ ವೀರಶೈವ ಲಿಂಗಾಯತ ಪುರೋಹಿತ ಸೇವಾ ಟ್ರಸ್ಟ್ ನ ಪದಗ್ರಹಣ ನಡೆಯಿತು. ತಾಲ್ಲೂಕು ಬಿಜೆಪಿ ಮುಖಂಡ ಚಿದಾನಂದ್, ಅಖಿಲ ಭಾರತ ವೀರಶೈವ -ಲಿಂಗಾಯತ ಮಹಾಸಭಾ ತಾಲ್ಲೂಕು ಅಧ್ಯಕ್ಷ ಗಂಗೇಗೌಡ (ರಾಜಣ್ಣ), ನೂತನ ಟ್ರಸ್ಟ್ ಗೌರವಾಧ್ಯಕ್ಷರಾದ ರೇಣುಕಾರಾಧ್ಯ, ಶಂಕರ್ ಪ್ರಸಾದ್, ಅಧ್ಯಕ್ಷ ಸಿದ್ದೇಶ್, ಉಪಾಧ್ಯಕ್ಷರಾದ ರುದ್ರೇಶ್, ಮಲ್ಲಿಕಾರ್ಜುನ, ಪ್ರಧಾನ ಕಾರ್ಯದರ್ಶಿ ಸಾನಂದ್ ಶಾಸ್ತ್ರಿ, ಖಜಾಂಚಿ ಪುರ ರುದ್ರೇಶ್, ನಿರ್ದೇಶಕರಾದ ಕಿರಣ್, ಸಿದ್ದಲಿಂಗರಾಧ್ಯ, ಸಿದ್ದಲಿಂಗ ಸ್ವಾಮಿ, ವಿಶ್ವನಾಥ್, ನಾಗೇಶ್, ವೇದಮೂರ್ತಿ, ಕಾರ್ತಿಕ್ ಮತ್ತು ಬಸವರಾಜ್ ಇತರರಿದ್ದರು.

## ಕಾಲಕ್ಕೆ ತಕ್ಕಂತೆ ಆರ್‌ಎಸ್‌ಎಸ್ ವಿಕಾಸ

• ಪ್ರಜೋದಯ ವರದಿ

**ನವದೆಹಲಿ:** ರಾಷ್ಟ್ರೀಯ ಸ್ವಯಂ ಸೇವಕ ಸಂಘವು (ಆರ್‌ಎಸ್‌ಎಸ್) ಬದಲಾಗಿಲ್ಲ. ಆದರೆ ಕಾಲಕ್ಕೆ ಅನುಗುಣವಾಗಿ ವಿಕಾಸಗೊಳ್ಳುತ್ತಿದೆ ಎಂದು ಆರ್‌ಎಸ್‌ಎಸ್ ಸರಸಂಘ ಚಾಲಕ ಮೋಹನ್ ಭಾಗವತ್ ಭಾನುವಾರ ಹೇಳಿದರು.

ಆರ್‌ಎಸ್‌ಎಸ್‌ನ 100 ವರ್ಷಗಳ ಪಯಣದ ಕಥಾಹಂದರವನ್ನು ಹೊಂದಿರುವ ಶತಕ್ ಸಿನಿಮಾದ ಹಾಡು ಬಿಡುಗಡೆಗಾಗಿ ಸಂಘದ ಕಚೇರಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಂಘವು ತನ್ನ ಶತಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿದೆ. ಅದು ವಿಕಾಸಗೊಳ್ಳುತ್ತಾ ಹೊಸ ರೂಪ ತಳೆಯುವುದನ್ನು ಜನರು ಬದಲಾ ವಣೆ ಎಂದು ಕೊಳ್ಳುತ್ತಿದ್ದಾರೆ. ವಾಸ್ತವ ದಲ್ಲಿ ಸಂಘವು ಬದಲಾಗಿಲ್ಲ ಹಂತ ಹಂತವಾಗಿ ಬೆಳೆಯುತ್ತಿದೆ. ಬೀಜವೊಂದು ಚಿಗುರಿ ಹೆಮ್ಮರವಾಗಿ ಬೆಳೆದು, ಹೂವುಹಣ್ಣುಗಳನ್ನು ನೀಡುವಂತೆ ಸಂಘವೂ ಬೆಳೆಯುತ್ತಿದೆ ಎಂದು ಹೇಳಿದರು.

## ನಾಗೇನಹಳ್ಳಿ ಸರ್ಕಾರಿ ಶಾಲೆ ರಕ್ಷಣೆಗೆ ಆಗ್ರಹಿಸಿ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಮ್ಯಾಗ್ನೆಟ್ ಹೆಸರಿನಲ್ಲಿ ತಾಲ್ಲೂಕಿನ ನಾಗೇನಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಸರ್ಕಾರ ಪಕ್ಕದ ಶಾಲೆಯೊಂದಿಗೆ ವಿಲೀನಗೊಳಿಸಲು ಮುಂದಾಗಿದ್ದು, ಅವೈಜ್ಞಾನಿಕ ನಿರ್ಧಾರದಿಂದ ಹಿಂದೆ ಸರಿಯಬೇಕೆಂದು ಆಗ್ರಹಿಸಿ ಎಐಡಿಎಸ್‌ಓ ನೇತೃತ್ವದಲ್ಲಿ ಭಾನುವಾರ ಪ್ರತಿಭಟನೆ ನಡೆಸಲಾಯಿತು.

ಎಐಡಿಎಸ್‌ಓ ಜಿಲ್ಲಾ ಕಾರ್ಯಕರ್ತೆ ಸುಷ್ಮಾ ಅವರು ಮಾತನಾಡಿ, ಸರ್ಕಾರಿ ಶಾಲೆಗಳಿಗೆ ಬೀಗ ಹಾಕಿ, ಬಡ ರೈತ, ಕೂಲಿ ಕಾರ್ಮಿಕರ ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿಸಿ, ಶಿಕ್ಷಣವನ್ನು ವ್ಯಾಪಾರ ಮಾಡಲು ಸರ್ಕಾರ ಮುಂದಾಗಿದೆ. ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗಿ ಶಿಕ್ಷಣ ಪಡೆಯುವುದು ಖಂಡನೀಯವೆಂದರು.

ಗ್ರಾಮಸ್ಥರು ಮಾತನಾಡಿ, ಊರಿನಲ್ಲಿ ಕೆಲವು ವರ್ಷಗಳ ಹಿಂದೆ ಶಾಲೆಯೇ ಇರಲಿಲ್ಲ. ನಾವೆಲ್ಲರೂ




ಪಕ್ಕದ ಊರಿನ ಶಾಲೆಗೆ ಹೋಗಿ ಓದುವ ಪರಿಸ್ಥಿತಿ ಇತ್ತು. ಆದರೆ ಅದು ಸುಲಭವಾಗಿರಲಿಲ್ಲ. ಶಾಲೆಗೆ ಹೋಗಲು ರಸ್ತೆ ಇರಲಿಲ್ಲ, ಹೊಲ ಗದ್ದೆಗಳ ಮಧ್ಯೆ ನಡೆದುಕೊಂಡು ಹೋಗುತ್ತಿದ್ದೆವು. ಅದರಿಂದ ನಾವು ಕನಸು ಕಂಡ ಶಿಕ್ಷಣವನ್ನೇ ಪಡೆದುಕೊಳ್ಳಲು ಆಗಲಿಲ್ಲ. ಸಾಕಷ್ಟು ಹೋರಾಟದ ಫಲವಾಗಿ ಶಾಲೆ ಮಂಜೂರಾಗಿದೆ. ಅದನ್ನು ಕಳೆದುಕೊಳ್ಳಲು ಯಾರೂ ಇಷ್ಟಪಡುವುದಿಲ್ಲವೆಂದರು.

ಊರಿನ ಶಾಲೆಯಲ್ಲಿ ಹಲವಾರು ವಿದ್ಯಾರ್ಥಿಗಳು ಅಕ್ಷರ ಕಲಿತು, ಉನ್ನತ ವ್ಯಾಸಂಗಕ್ಕೆ ಹೋಗುತ್ತಿದ್ದಾರೆ. ಬಣ್ಣ ಬಣ್ಣದ ಮಾತುಗಳಿಂದ ನೀವು ಬಡವರಿಂದ ಶಿಕ್ಷಣವನ್ನು ಕಿತ್ತುಕೊಳ್ಳುತ್ತೀರ ಎಂದರೆ ನಾವೆಲ್ಲರೂ ಒಗ್ಗಟ್ಟಾಗಿ ಹೋರಾಟ ಮಾಡುತ್ತೇವೆ. ಎಂತಹ ಪರಿಸ್ಥಿತಿ ಬಂದರೂ ಕೂಡ ಶಾಲೆ ಉಳಿಸಿಕೊಳ್ಳಲು ಹೋರಾಡುವುದಾಗಿ ಭರವಸೆ ನೀಡಿದರು. ಎಐಡಿಎಸ್‌ಓ ಜಿಲ್ಲಾಧ್ಯಕ್ಷೆ ಚೈತ್ರ, ಕಾರ್ಯದರ್ಶಿ ಸುಷ್ಮಾ, ಮತ್ತು ಗ್ರಾಮಸ್ಥರಾದ ಯೋಗೀಶ್ ನಾಯಕ್, ರಾಹುಲ್, ಯಶಸ್, ಪುನೀತ್, ಕುಮಾರ್ ನಾಯಕ್ ಹಾಗು ಇತರರಿದ್ದರು.

# ಬೇಲೂರಿನಲ್ಲಿ ಸಂಕ್ರಾಂತಿ ಸುಗ್ಗಿ ಸಂಭ್ರಮ

• ಪ್ರಜೋದಯ ವರದಿ

ಬೇಲೂರು: ತಾಲ್ಲೂಕು ಒಕ್ಕಲಿಗರ ಮಹಿಳಾ ಸಂಘದಿಂದ ಪಟ್ಟಣದ ಒಕ್ಕಲಿಗರ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಸಂಕ್ರಾಂತಿ ಸುಗ್ಗಿ ಸಂಭ್ರಮ, ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಪುಣ್ಯಸ್ಮರಣೆ ಹಾಗು ರಾಷ್ಟ್ರಕವಿ ಕುವೆಂಪು ಜನ್ಮ ದಿನಾಚರಣೆಗೆ ಪುರಸಭೆ ಅಧ್ಯಕ್ಷೆ ಉಷಾ ಸತೀಶ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಸಂಕ್ರಾಂತಿ ಕೃಷಿ, ಸಂಸ್ಕೃತಿ ಹಾಗು ಶ್ರಮದ ಗೌರವವನ್ನು ಸಾರುವುದಾಗಿದೆ. ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ಸಮಾಜದಲ್ಲಿ ಏಕತೆ ಹಾಗು ನಮ್ಮ ಸಂಸ್ಕೃತಿ, ಪರಂಪರೆಯ ಮೌಲ್ಯಗಳನ್ನು ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಆದಿಚುಂಚನ ಗಿರಿಯ ಶ್ರೀ ಬಾಲ ಗಂಗಾಧರನಾಥ ಸ್ವಾಮೀಜಿ ಅವರು ಸಮಾಜಮುಖಿ ಸೇವೆ ಹಾಗು ಕುವೆಂಪು ಅವರ ಮಾನವೀಯ ಮೌಲ್ಯಗಳು ಮುಂದಿನ



ಪೀಳಿಗೆಗೆ ದಾರಿ ದೀಪವಾಗಿವೆ ಎಂದರು.

ಮಹಿಳಾ ಒಕ್ಕಲಿಗರ ಸಂಘದ ಅಧ್ಯಕ್ಷೆ ಭಾರತೀಗೌಡ ಅವರು ಮಾತನಾಡಿ, ಒಕ್ಕಲಿಗರ ಮಹಿಳಾ ಸಂಘವು ಸಮಾಜದ ಸಬಲೀಕರಣ, ಸಂಸ್ಕೃತಿ ಸಂರಕ್ಷಣೆ ಹಾಗು ಮಹಿಳೆಯರ ಏಳಿಗೆಗೆ ನಿರಂತರವಾಗಿ ಶ್ರಮಿಸುತ್ತಿವೆ. ಇಂತಹ ಸಾಂಸ್ಕೃತಿಕ ಹಾಗು ಸಾಮಾಜಿಕ ಕಾರ್ಯಕ್ರಮಗಳು ಒಗ್ಗಟ್ಟು ಹೆಚ್ಚಿಸುತ್ತವೆ. ನಮ್ಮ ಸಂಘದ ಮೂಲಕ ಇನ್ನಷ್ಟು ಸಮಾಜಮುಖಿ ಕಾರ್ಯಕ್ರಮ ಕೈಗೊಳ್ಳಲಾಗುವುದೆಂದರು.

ಪುಣೆಯ ಹರಿಣಿ ಗಣೇಶ್ ಅವರು ಮಾತನಾಡಿ, ಒತ್ತಡದ ಬದುಕು ನಡೆಸುತ್ತಿರುವ ಮನುಷ್ಯ ಮನಸ್ಸಿನ ಶಾಂತಿ ಹಾಗು ಆತ್ಮಸ್ಥೈರ್ಯಕ್ಕೆ ಧ್ಯಾನ ಅಗತ್ಯವಾಗಿದೆ. ಧ್ಯಾನದಿಂದ ಏಕಾಗ್ರತೆ ಹೆಚ್ಚುವುದಲ್ಲದೆ ಆರೋಗ್ಯವೂ ಸುಧಾರಿಸುತ್ತದೆ. ಪ್ರತಿದಿನ ಸ್ವಲ್ಪ ಸಮಯ ಧ್ಯಾನಕ್ಕೆ ಮೀಸಲಿಟ್ಟರೆ ವ್ಯಕ್ತಿತ್ವ ವಿಕಾಸನವಾಗುತ್ತದೆ. ವಿಶೇಷವಾಗಿ ಮಹಿಳೆಯರು ಧ್ಯಾನವನ್ನು ಜೀವನದ ಅವಿಭಾಜ್ಯ ಅಂಗವಾಗಿಸಿಕೊಂಡರೆ ಕುಟುಂಬ ಮತ್ತು ಸಮಾಜ ಎರಡರಲ್ಲೂ ಸಕಾರಾತ್ಮಕ ಬದಲಾವಣೆ ಸಾಧ್ಯವಾಗುತ್ತದೆ ಎಂದರು. ಒಕ್ಕಲಿಗರ ಮಹಿಳಾ ಸಂಘದ ಗೌರವಾಧ್ಯಧ್ಯಕ್ಷೆ ಶ್ರೀದೇವಿ, ಉಪಾಧ್ಯಕ್ಷೆ ಮುದ್ದಮ್ಮ, ಕಾರ್ಯದರ್ಶಿ ಕವಿತಾ, ಖಜಾಂಚಿ ಉಷಾ, ಪುರಸಭೆ ಸದಸ್ಯೆ ಜಮೀಲಾ ತೌಫಿಕ್ ಇತರರಿದ್ದರು.

## ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ಎಚ್ಚರ ವಹಿಸಿ




• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಹಲವು ಕಾರಣಗಳಿಂದಾಗಿ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದು, ಮಕ್ಕಳಿಗೆ ಶಿಕ್ಷಣ ಕೊಡಿಸಿದರೆ ಮಾತ್ರ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆಂದು ಹೋಬಳಿ ಶಿಕ್ಷಣ ಸಂಯೋಜಕ ಕರಿಯಪ್ಪಗೌಡ ಅಭಿಪ್ರಾಯಪಟ್ಟರು.

ತಾಲ್ಲೂಕಿನ ಕಲ್ಕೆರೆ ಗ್ರಾಮದ ಶ್ರೀ ರಾಘವೇಂದ್ರ ಆಂಗ್ಲ ಮಾಧ್ಯಮ ಶಾಲೆಯಿಂದ 2025-26ನೇ ಸಾಲಿನ 37ನೇ ಶ್ರೀ ರಾಘವೇಂದ್ರ ಸಂಭ್ರಮ ಶಾಲಾ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಯಾವ ಮಗು ಕೂಡ ಶಿಕ್ಷಣದಿಂದ ವಂಚಿತವಾಗಬಾರದು. ಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ಪೋಷಕರು ಹೆಚ್ಚು ಆಸಕ್ತಿ ವಹಿಸಬೇಕು. ಕೇಂದ್ರ ಹಾಗು ರಾಜ್ಯ ಸರ್ಕಾರ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆ ತರಲು ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ ಎಂದರು.

ಸಂಸ್ಥೆಯ ಕಾರ್ಯದರ್ಶಿ ಕೆ.ಟಿ. ಕುಮಾರ್ ಅವರು ಮಾತನಾಡಿ, ಕಳೆದ 37 ವರ್ಷಗಳಿಂದ ರಾಘವೇಂದ್ರ ಆಂಗ್ಲ ಮಾಧ್ಯಮ ಶಾಲೆಯಿಂದ ಗುಣಮಟ್ಟದ ಆಂಗ್ಲ ಮಾಧ್ಯಮ ಶಿಕ್ಷಣ ನೀಡಲಾಗುತ್ತಿದೆ. ಮಕ್ಕಳಿಗೆ ಕಲಿಕೆಯ ಜೊತೆಗೆ ವಿಭಿನ್ನ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಮಕ್ಕಳಲ್ಲಿರುವ ಪ್ರತಿಭೆಯನ್ನು ಹೊರತೆಗೆಯುವ ಕೆಲಸ ಮಾಡಲಾಗುತ್ತಿದೆ ಎಂದರು.

ಸಂಸ್ಥೆಯ ಅಧ್ಯಕ್ಷ ಸಿ.ಎನ್. ಚೆಲುವೇಗೌಡ ಅವರು ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆ ಕಟ್ಟಿ ಬೆಳೆಸುವುದು ಸುಲಭವಲ್ಲ. ಪಟ್ಟಣಗಳಲ್ಲಿರುವ ಖಾಸಗಿ ಶಾಲೆಗಳಿಗೆ ಸ್ಪರ್ಧೆಯೊಡ್ಡುವ ಮೂಲಕ ರಾಘವೇಂದ್ರ ಆಂಗ್ಲ ಮಾಧ್ಯಮ ಶಾಲೆಯನ್ನು ಸದೃಢವಾಗಿ ನಡೆಸಲಾಗುತ್ತಿದೆ ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ಶಶಾಂಕ್ ಗೋಪಾಲಸ್ವಾಮಿ, ಕಲ್ಕೆರೆ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಅಶೋಕ್, ಸಂಸ್ಥೆಯ ನಿರ್ದೇಶಕರಾದ ಕೆ.ಎನ್. ತೋಪೇಗೌಡ, ಸೋಮಶೇಖರ್, ಮಮತಾ, ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ಕೆ.ಟಿ. ಪ್ರಭಾಕರ್, ಜೆಡಿಎಸ್ ಮುಖಂಡ ಬೈರೇಗೌಡ ಇತರರಿದ್ದರು.

# ಅಮೇರಿಕಾ ವಿರುದ್ಧ ಪ್ರತಿ ದಾಳಿಗೆ ಸಿದ್ಧ: ಎಚ್ಚರಿಕೆ

• ಪ್ರಜೋದಯ ವರದಿ

**ಟಟೆಹರಾನ್:** ಆರ್ಥಿಕ ಕುಸಿತದ ನಡುವೆ ದೇಶದೆಲ್ಲೆಡೆ ಪ್ರತಿಭಟನೆ ವ್ಯಾಪಿಸಿರುವಂತೆಯೇ ಇಸ್ಲಾಮಿಕ್ ರಾಷ್ಟ್ರದ ಮೇಲೆ ಅಮೇರಿಕಾ ದಾಳಿ ನಡೆಸಿದರೆ ಪ್ರತಿ ದಾಳಿ ನಡೆಸುವುದಾಗಿ ಇರಾನ್ ಎಚ್ಚರಿಸಿದೆ. ಇರಾನ್‌ನಲ್ಲಿ ಸರ್ಕಾರದ ವಿರುದ್ಧ ನಡೆಯುತ್ತಿರುವ ಪ್ರತಿಭಟನೆಯು ಎರಡು ವಾರಗಳನ್ನು ಪೂರೈಸಿದೆ. ಪ್ರತಿಭಟನೆ ಹಾಗು ಹಿಂಸಾಚಾರದಲ್ಲಿ ಈವರೆಗೆ 116 ಮಂದಿ ಮೃತಪಟ್ಟಿದ್ದಾರೆಂದು ವರದಿಯಾಗಿದೆ.

ಅಮೇರಿಕಾ ಮೂಲದ ಮಾನವ ಹಕ್ಕುಗಳ ಕಾರ್ಯಕರ್ತರ ಸುದ್ದಿ ಸಂಸ್ಥೆಯ ಪ್ರಕಾರ 2,600 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ. ಇರಾನ್‌ನಲ್ಲಿ ಇಂಟರ್‌ನೆಟ್ ಹಾಗು ದೂರವಾಣಿ ಸಂಪರ್ಕವನ್ನು ಕಡಿತಗೊಳಿಸಲಾಗಿದೆ. ರಾಜಧಾನಿ ಟೆಹರಾನ್ ಸೇರಿ ಹಲವು ಪ್ರದೇಶಗಳಲ್ಲಿ ವ್ಯಾಪಕ ಪ್ರತಿಭಟನೆಗಳು ಮುಂದುವರಿದಿವೆ. ಪ್ರತಿಭಟನಾಕಾರರಿಗೆ ಬೆಂಬಲ ನೀಡುವುದಾಗಿ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಹಾಗೊಂದು ವೇಳೆ ಇಸ್ಲಾಮಿಕ್ ರಾಷ್ಟ್ರದ ಮೇಲೆ ಅಮೇರಿಕಾ ದಾಳಿ ನಡೆಸಿದರೆ ಪ್ರತಿದಾಳಿ ನಡೆಸು ವುದಾಗಿ ಇರಾನ್ ಸಂಸತ್ತಿನ ಸ್ಪೀಕರ್ ಎಚ್ಚರಿಸಿದ್ದಾರೆ. ಪ್ರತಿಭಟನೆ ನಡೆಸುತ್ತಿರುವವರ ಮೇಲೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಎಚ್ಚರಿಸಿದ್ದರು.

**ಇರಾನ್ ಸ್ವಾತಂತ್ರ್ಯಕ್ಕೆ ಬೆಂಬಲ**

ಇರಾನ್ ಜನರ ಸ್ವಾತಂತ್ರ್ಯ ಹೋರಾಟಕ್ಕೆ ನಮ್ಮ ಬೆಂಬಲವಿದೆ ಎಂದು ಇಸ್ರೇಲ್ ವಿದೇಶಾಂಗ ಸಚಿವ ಗಿಡಿಯಾನ್ ಸಾರ್ ಅವರು ಭಾನುವಾರ ತಿಳಿಸಿದ್ದಾರೆ.

ಇರಾನ್‌ನಲ್ಲಿ ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ಖಂಡಿಸಿ ಆರಂಭವಾದ ಪ್ರತಿಭಟನೆಯು, ದಿನದಿಂದ ದಿನಕ್ಕೆ ಕಾವೇರುತ್ತಿದೆ. 1979ರ ಇರಾನ್ ಕ್ರಾಂತಿಯ ನಂತರ ಸತತ ಅಧಿಕಾರದಲ್ಲಿರುವವರ ಮೇಲೆ ಪ್ರತಿಭಟ ನಾಕಾರರ ಕೆಂಗಣ್ಣು ಬಿದ್ದಿದೆ. ಇಸ್ಲಾಮಿಕ್ ರಾಷ್ಟ್ರ ಇರಾನ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆಯನ್ನು ಜನರ ಸ್ವಾತಂತ್ರ್ಯ ಹೋರಾಟ ಎಂದು ಇಸ್ರೇಲ್ ಬಣ್ಣಿಸಿದೆ. ಇರಾನಿಯನ್ನರ ಹೋರಾಟಕ್ಕೆ ನಮ್ಮ ಬೆಂಬಲವಿದೆ. ಅವರು ಸ್ವಾತಂತ್ರ್ಯಕ್ಕೆ ಅರ್ಹರಿದ್ದು, ಅದರಲ್ಲಿ ಅವರಿಗೆ ಯಶಸ್ಸು ಸಿಗಲಿ ಎಂದು ಗಿಡಿಯಾನ್ ಸಾರ್, ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಇರಾನಿನ ಆಡಳಿತವು ಭಯೋತ್ಪಾದನೆಗೆ ಬೆಂಬಲವಾಗಿ ನಿಂತಿದೆ. ಅದು ಅಂತರರಾಷ್ಟ್ರೀಯ ಸಮಸ್ಯೆಯಾಗಿದೆ. ಇಸ್ಲಾಮಿಕ್ ರಾಷ್ಟ್ರದಲ್ಲಿ ನಡೆಯುತ್ತಿರುವ ಬೆಳವಣಿಗೆ ಗಳು ಅಲ್ಲಿನ ಆಂತರಿಕ ಸಮಸ್ಯೆಯಾಗಿದೆ. ಅದನ್ನು ನಾವು ಗಮನಿಸುತ್ತಿದ್ದೇವೆಂದು ಇಸ್ರೇಲ್ ಸೇನೆಯ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರತಿಭಟನೆ, ದಂಗೆಗಳಿಗೆ ಪ್ರಚೋದನೆ ನೀಡುವ ಮೂಲಕ ಇರಾನ್‌ನ ಒಗ್ಗಟ್ಟನ್ನು ಮುರಿಯಲು ಅಮೇರಿಕ ಹಾಗು ಇಸ್ರೇಲ್ ಪ್ರಯತ್ನ ಪಡುತ್ತಿವೆ ಎಂದು ಇರಾನ್ ಆರೋಪಿಸಿತ್ತು. ಅಮೇರಿಕಾ ದಾಳಿ ನಡೆಸಿದರೆ ಪ್ರತಿದಾಳಿ ನಡೆಸುವುದಾಗಿ ಕೂಡ ಎಚ್ಚರಿಸಿತ್ತು.

ಇದೆಲ್ಲದರ ನಡುವೆ ಸಿರಿಯಾದಲ್ಲಿರುವ ಇಸ್ಲಾಮಿಕ್ ಸ್ಟೇಟ್ ವಿರುದ್ಧ ಅಮೇರಿಕಾ ಮಿಲಿಟರಿ ಕಾರ್ಯಾ ಚರಣೆ ಪ್ರಾರಂಭಿಸಿದೆ. ಅಮೇರಿಕಾದ ಸೆಂಟ್ರಲ್ ಕಮಾಂಡ್ ಪಡೆಗಳು ಆಪರೇಷನ್ ಹಾಕ್ಕೆ ಕಾರ್ಯಾಚರಣೆಯ ಭಾಗವಾಗಿ 35ಕ್ಕೂ ಹೆಚ್ಚು ಭಯೋತ್ಪಾದಕ ನೆಲೆಗಳ ಮೇಲೆ ದೊಡ್ಡ ಪ್ರಮಾಣದ ವೈಮಾನಿಕ ದಾಳಿ ನಡೆಸಿವೆ.

ಅಮೇರಿಕಾ ಕಾಲಮಾನದ ಪ್ರಕಾರ ಸುಮಾರು ಮಧ್ಯಾಹ್ನ 12.30ಕ್ಕೆ ದಾಳಿಗಳು ನಡೆದಿವೆ. ಈ ದಾಳಿಗಳು ಸಿರಿಯಾದ ವಿವಿಧ ಪ್ರದೇಶಗಳಲ್ಲಿನ ಇಸ್ಲಾಮಿಕ್ ಸ್ಟೇಟ್ ನೆಲೆಗಳನ್ನು ಗುರಿಯಾಗಿಸಿಕೊಂಡಿವೆ. 90ಕ್ಕೂ ಹೆಚ್ಚು ಆಯುಧಗಳನ್ನು ಬಳಸಿ ಉಗ್ರರ ನೆಲೆಗಳನ್ನು ಧ್ವಂಸ ಮಾಡಲಾಗಿದೆ ಎಂದು ಅಮೇರಿಕಾದ ಸೆಂಟ್ರಲ್ ಕಮಾಂಡ್ ತಿಳಿಸಿದೆ. ನಮ್ಮದು ಭಯೋತ್ಪಾದನೆಯ ವಿರುದ್ಧದ ದಾಳಿಯಾಗಿದೆ. ಅಮೇರಿಕಾ ಭಯೋತ್ಪಾದನೆ ವಿರುದ್ಧ ಹೋರಾಡಲು ಬದ್ಧವಾಗಿದೆ. ಭಯೋತ್ಪಾದನೆ ವಿರುದ್ಧ ನಿರಂತರವಾಗಿ ಹೋರಾಟ ಮಾಡುತ್ತಲೇ ಇರುತ್ತದೆ. ಸೇನಾ ಪಡೆಗಳು ಮತ್ತು ಮಿತ್ರ ಪಡೆಗಳ ಮೇಲಿನ ಭಯೋತ್ಪಾದಕ ದಾಳಿಗಳನ್ನು ತಡೆಗಟ್ಟುವುದು ನಮ್ಮ ಉದ್ದೇಶ. ಭವಿಷ್ಯದ ಬೆದರಿಕೆಗಳನ್ನು ಮೆಟ್ಟಿ ನಿಲ್ಲುವುದು, ಈ ಪ್ರದೇಶದಲ್ಲಿ ಭದ್ರತೆಯನ್ನು ಖಚಿತ ಪಡಿಸುವುದೇ ಇವತ್ತಿನ ದಾಳಿಯ ಗುರಿ ಆಗಿತ್ತು. ನಮ್ಮ ಪಡೆಗಳಿಗೆ ಹಾನಿ ಮಾಡಲು ಪ್ರಯತ್ನಿಸುವ ಯಾರೇ ಆದರೂ, ಎಲ್ಲಿಯೇ ಇದ್ದರೂ ಹೊಸಕಿ ಹಾಕುತ್ತೇವೆ ಎಂದು ಸೆಂಟ್ರಲ್ ಕಮಾಂಡ್ ಎಚ್ಚರಿಕೆ ನೀಡಿದೆ.

## ವೃತ್ತಿ ಜೀವನದಲ್ಲಿ ಆತ್ಮಸ್ಥೈರ್ಯ ಮುಖ್ಯ



• ಪ್ರಜೋದಯ ವರದಿ

**ಹಾಸನ:** ಶಿಬಿರದಲ್ಲಿ ಕಲಿತ ಶಿಸ್ತು, ಸಮಯ ಪಾಲನೆ ಹಾಗು ನಾಯಕತ್ವದ ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಜೊತೆಗೆ ವೃತ್ತಿ ಜೀವನದಲ್ಲಿ ಯಾವುದೇ ಕಾರಣಕ್ಕೂ ಧೃತಿಗೆಡದೆ ಆತ್ಮಸ್ಥೈರ್ಯದಿಂದ ಕರ್ತವ್ಯ ನಿರ್ವಹಿಸಬೇಕೆಂದು ಮಹಾನಗರ ಪಾಲಿಕೆ ಇಂಜಿನೀಯರ್ ಕೆ. ಆರ್.ಕವಿತಾ ಅವರು ಹೇಳಿದರು.

ನಗರದ ಹಿಮ್ಸ್ ಆವರಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಭಾವೈಕ್ಯತಾ ಶಿಬಿರ-2026ರ ಧ್ವಜ ವಂದನೆ ಮಾಡಿ ಮಾತನಾಡಿದ ಅವರು, ನಮ್ಮ ವೃತ್ತಿಯಲ್ಲಿ ಯಾವುದೇ ಅಡೆತಡೆಗಳು ಬಂದರೂ ಎದುರಿಸುವ ಮತ್ತು ದಕ್ಷತೆಯಿಂದ ನಿರ್ವಹಣೆ ಮಾಡುವುದನ್ನು ಕಲಿಯಬೇಕು. ಗ್ರಾಮೀಣ ಭಾಗದಿಂದ ಬಂದಿರುವ ನಾವು ಸಮಾಜಕ್ಕೆ ಕೊಡುಗೆಯಾಗಿ ಒಳಿತನ್ನು ನೀಡುವ ಪ್ರಯತ್ನ ಮಾಡಬೇಕು. ತಂದೆ-ತಾಯಿಗೆ ಗೌರವ ಕೊಡುವ ನಿಟ್ಟಿನಲ್ಲಿ ಮತ್ತು ಸಮಾಜದ ಜವಾಬ್ದಾರಿಯನ್ನು ಉತ್ತಮ ರೀತಿಯಲ್ಲಿ ಕೊಂಡೊಯ್ಯಬೇಕೆಂದು ಸಂದೇಶ ನೀಡಿದರು.

ಬೆಂಗಳೂರು, ಚೆನ್ನೈ, ತಿರುವನಂತಪುರ, ಪುಣೆ, ಹೈದರಾಬಾದ್, ನವದೆಹಲಿ, ಭುವನೇಶ್ವರ, ಚಂಡೀಗಡ, ಜೈಪುರ, ಲಕ್ನೋ, ಕೊಲ್ಕತ್ತಾ ಸೇರಿ 10 ರಾಜ್ಯಗಳ 200ಕ್ಕೂ ಹೆಚ್ಚು ಶಿಬಿರಾರ್ಥಿಗಳು ಭಾಗವಹಿಸಿದ್ದರು. ಭಾರತ ಸೇವಾದಳದ ವಲಯ ಸಂಘಟಕಿ ವಿ.ಎಸ್.ರಾಣಿ, ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ನಿಚಿತಾ ಕುಮಾರಿ, ಜಿ.ದೀಪ, ಎಚ್. ಮಹೇಶ್, ಡಾ|| ವೀಣಾ, ದಂತ ವೈದ್ಯೆ ಡಾ|| ಕಾವ್ಯಶ್ರೀ ಇತರರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019